ಮದುವೆಯ ಪತ್ತಲ

ಮತ್ತು

ಇತರ ನಗೆಯಾಟಗಳು

೧೧

ಬೇಂದ್ರೆ ಲಕ್ಷ್ಮಣರಾಯರು

…ತ್ಯ ಭಂಡಾರ, ಹುಬ್ಬಳ್ಳಿ

ಹೊಂದಿಕೊಂಡಿವೆ.

ಲಕ್ಷ್ಮಣರಾಯರ ದರ್ಶನ ಕೌಟುಂಬಿಕ ಜೀವನದ ದರ್ಶನವಾಗಿದೆ. ಅದರ ನೂರು ರೀತಿಗಳನ್ನೂ ಸಾವಿರ ವಿವರಗಳನ್ನೂ ಅವರು ಬಲ್ಲರು. ಸಂಸಾರದ ನೀತಿಧರ್ಮಗಳು ಏನಿರಬೇಕೆಂಬುದರ ಬಗ್ಗೆ ಅವರ ನೋಟ ನಿಚ್ಚಳವಾಗಿದೆ. ಅದು ಮನೋಹರವಾಗಿ ಒಡಮೂಡುವಂತೆ ಅವರ ಕಲೆಯು ಅದಕ್ಕೆ ಸಹಾಯಕವಾಗಿ ನಿಂತಿದೆ.

ಈ ದೃಶ್ಯಗಳ ಉತ್ತಮ ಲಕ್ಷಣವೆಂದರೆ ಇಲ್ಲಿಯ ಸಂಭಾಷಣೆಗಳ ಸಹಜ ರಸವಂತಿಕೆ, ನಿರರ್ಗಳ ಓಟ. ಅವುಗಳಲ್ಲಿ ವಿನೋದವಿದೆ, ವಿಡಂಬನೆ ಇದೆ, ಚಮತ್ಕಾರವಿದೆ, ಅನುಭವವಿದೆ, ಜ್ಞಾನವಿದೆ. ಇಲ್ಲಿಯ ಸಂಭಾಷಣೆ ಓದಿದಷ್ಟೂ ಸವಿಯಾಗಿದೆ, ಕೇಳಿದಷ್ಟೂ ಮನೋಹರವಾಗಿದೆ. ಅಲ್ಲಿ ಜೀವನವೇ ಸಾಹಿತ್ಯವಾಗಿ ಸಾಹಿತ್ಯವೇ ಜೀವನವಾಗುತ್ತದೆ. ಈ ಕೃತಿಗಳ ಅಭಿಜಾತ ಲಕ್ಷಣವೇ ಇಲ್ಲಿಯ ಸಂಭಾಷಣೆಗಳ ಮಾಧುರ್ಯವೆಂದು ಹೇಳಬಹುದು.

—ಪ್ರಿನ್ಸಿಪಾಲ್ ಗೋಕಾಕರ ಮುನ್ನುಡಿಯಿಂದ

ಮಾನ್ಯ 'ರಾಷ್ಟ್ರಮತ' ಸಂಪಾದಕರಿ
ವಿಮರ್ಶೆಯ ಪ್ರತಿಗಾಗಿ
— ಪ್ರಕಾಶಕರಿಂದ.

ಅಮ್ಮೆಂಬಳ ಶಂಕರ ನಾರಾ

...ವತ್ತೈದನೇ ಪ್ರಕಟನೆ:

ಮದುವೆಯ ಪತ್ತಲ

ಮತ್ತು

ಇತರ ನಗೆಯಾಟಗಳು

ಚೇಂದ್ರೆ ಲಕ್ಷ್ಮಣರಾಯರು

ಸಾಹಿತ್ಯ ಭಂಡಾರ, ಹುಬ್ಬಳ್ಳಿ

ಪ್ರಕಾಶಕರು:
ಮ. ಗೋವಿಂದರಾಯರು
ಸಾಹಿತ್ಯ ಭಂಡಾರ, ಹುಬ್ಬಳ್ಳಿ

ಮೊದಲನೆಯ ಮುದ್ರಣ: ೧೯೫೭

ಸಾದಾ ಪ್ರತಿ ೧-೭೫

ಮುದ್ರಕರು:-
ಶಂ. ಬಾ. ಮುನಗೋಳಿ
ಆದರ್ಶ ಮುದ್ರಣ, ಹುಬ್ಬಳ್ಳಿ

ಪ ರಿ ವಿ ಡಿ

ನನ್ನ ಮಾತು

ಈ ಸಂಕಲನದಲ್ಲಿ ಮುದ್ರಿತವಾದ ೮ ಏಕಾಂಕ ದೃಶ್ಯಗಳು–ಮದಿವೀ ಪತ್ತ್ರಲ ಒಂದನ್ನು ಬಿಟ್ಟು–ಈ ಮೊದಲೆ ' ಜಯಂತಿ 'ಯಲ್ಲಿ ಪ್ರಕಟಗೊಂಡಿವೆ; ಬಾನುಲಿಯಲ್ಲಿ ಬಿತ್ತರಗೊಂಡಿವೆ. ' ಮದಿವೀ ಪತ್ತ್ರಲ ' ಕೂಡ ರಂಗದ ಮೇಲೆ ೩–೪ ಊರುಗಳಲ್ಲಿ ಅಭಿನಯಿಸಲ್ಪಟ್ಟಿದೆ. ಆದರೆ ಅದು ಪ್ರಕಟವಾಗುವುದು ಇದೇ ಮೊದಲು. ಈ ನಾಟಕಗಳಿಗೆ ಉಚಿತ ಅವಕಾಶವನ್ನು ಕೊಟ್ಟುದಕ್ಕಾಗಿ ಜಯಂತಿಯ ಸಂಪಾದಕರಿಗೂ ಬಾನುಲಿಯ ಅಧಿಕಾರಿಗಳಿಗೂ ನಾನು ಕೃತಜ್ಞನಾಗಿದ್ದೇನೆ.

ಇಲ್ಲಿ ಪ್ರಕಟಗೊಂಡ ಎಲ್ಲ ನಾಟಕಗಳ ಜೀವಕಳೆಗೆ ನಗೆಯೇ ಆಧಾರವಾಗಿದೆ. ಈ ಮಾತನ್ನು ನೆನಪಿನಲ್ಲಿಟ್ಟುಕೊಂಡೇ ಸಹೃದಯ ವಾಚಕರು ಇವುಗಳ ಗುಣದೋಷಗಳ ಕಡೆಗೆ ನೋಡಬೇಕು.

ಹುಬ್ಬಳ್ಳಿಯ ಸಾಹಿತ್ಯ ಭಂಡಾರದ ಶ್ರೀ. ಮ. ಗೋವಿಂದರಾಯರು ಈ ಸಂಕಲನದ ಪ್ರಕಟನೆಗೆ ಮನಸ್ಸುಮಾಡಿ ನನ್ನ ಮೇಲೆ ಉಪಕಾರಮಾಡಿದ್ದಾರೆ. ಅವರಿಗೆ ನಾನು ಋಣಿಯಾಗಿದ್ದೇನೆ.

ತಮ್ಮ ಹಲವಾರು ತೊಂದರೆಗಳಲ್ಲಿ, ಇದ್ದುದರಲ್ಲಿಯೇ ಬಿಡುವುಮಾಡಿಕೊಂಡು ಮುನ್ನುಡಿ ಬರೆದುಕೊಟ್ಟ ಪ್ರಿನ್ಸಿಪಾಲ್ ವಿ. ಕೃ. ಗೋಕಾಕರಿಗೆ ಹೃತ್ಪೂರ್ವಕ ನೆನಿಕೆಗಳು.

ಹನ್ನೊಂದನೆಯ ಪುಟದ ೯ನೇ ಸಾಲಿನಲ್ಲಿ Sportನ ಬದಲಾಗಿ Sprot ಎಂದು ತಪ್ಪಾಗಿ ಅಚ್ಚಾಗಿದೆ. ಹೀಗೆಯೇ, ಇನ್ನೂ ತಪ್ಪುಗಳೇನಾದರೂ ಉಳಿದಿದ್ದರೆ ಓದಗರು ದಯವಿಟ್ಟು ತಿದ್ದಿಕೊಂಡು ಓದಬೇಕೆಂದು ಬಿನ್ನಹ.

ಧಾರವಾಡ
೪—೫—೧೯೫೭

ಬೇಂದ್ರೆ ಲಕ್ಷ್ಮಣರಾಯ

ಮುನ್ನುಡಿ

ಗೆಳೆಯರಾದ ಬೇಂದ್ರೆ ಲಕ್ಷ್ಮಣರಾಯರ ಈ ಏಕಾಂಕ ನಾಟಕಗಳ ನ್ನೋದಿ ನಾನು ತುಂಬ ಮೆಚ್ಚಿಕೊಂಡಿದ್ದೇನೆ. ಅವರು ಬರೆದಿದ್ದ ಭಾಗ್ಯಶ್ರೀ ಮೊದಲಾದ ನಾಟಕಗಳನ್ನು ಓದಿ ನೋಡಿ ಅವರ ಕಲಾವಂತಿಕೆಯ ಬಗ್ಗೆ ಒಂದು ಪ್ರತೀಕ್ಷಣೆಯನ್ನು ನಾನು ತಳೆದಿದ್ದೆ. ಈ ಏಕಾಂಕಗಳಲ್ಲಿಯ ರಸ ವಂತಿಕೆಯು ಆ ಪ್ರತೀಕ್ಷಣೆಯನ್ನೂ ಸಹ ಮೀರಿಸಿದೆ.

ಕವಿವರ್ಯ ಬೇಂದ್ರೆಯವರ ಅನತಿದೂರದ ಆಪ್ತರಾದ ಲಕ್ಷ್ಮಣ ರಾಯರು ಈಗ ಮೂವತ್ತು ವರುಷಗಳಿಗೆ ಮೇಲ್ಪಟ್ಟು ಸಾಹಿತ್ಯಸೇವೆಯನ್ನು ಮಾಡುತ್ತ ಬಂದಿದ್ದಾರೆ. ಅವರ ಲೋಕಾನುಭವ ವಿಶಾಲವಾದುದು. ಅವರ ಓದು ಅರ್ಥಪೂರ್ಣವಾದುದು. ಜೀವನದ ಕಹಿಯನ್ನು ಅವರು ಸಾಕಷ್ಟು ಉಂಡಿದ್ದರೂ ಅವರ ನಾಲಗೆಯನ್ನು ಆ ಕಹಿಯು ಆವರಿಸಿಲ್ಲ. ಈ ಮಾತಿಗೆ ಇಲ್ಲಿಯ ಏಕಾಂಕಗಳೇ ಸಾಕ್ಷಿಯಾಗಿವೆ.

ಆದರೆ ಲಕ್ಷ್ಮಣರಾಯರ ಸಾಹಿತ್ಯದ ಪೂರ್ವಸಿದ್ಧತೆ ಅನೇಕ ವರ್ಷ ಗಳಿಂದ ನಡೆದು ಬಂದಿದ್ದರೂ ಅವರ ಕಲಾಪ್ರತಿಭೆ ತಡವಾಗಿ ಅರಳಿದೆ. ಅವರ ಉಳಿದ ಕೃತಿಗಳಲ್ಲಿಯಗಿಂತ ಈ ಏಕಾಂಕಗಳಲ್ಲಿ ಅದು ಸುಪ್ರಸನ್ನವಾಗಿದೆ ಯೆಂದು ನನಗೆನಿಸಿದೆ. ಇವುಗಳಲ್ಲಿಯ ದರ್ಶನ ಸುಸ್ಪಷ್ಟವಾಗಿ ಮೂಡಿದೆ. ಇಲ್ಲಿಯ ಕಲೆಯಲ್ಲಿ ನಿರಂತರ ಸ್ವಾರಸ್ಯವಿದೆ. ದರ್ಶನ-ಕಲೆಗಳು ಇಲ್ಲಿ ಅವಿರಳ ವಾಗಿ ಹೊಂದಿಕೊಂಡಿವೆ.

ಸ್ವಲ್ಪದರಲ್ಲಿ ಹೇಳುವದೆಂದರೆ ಲಕ್ಷ್ಮಣರಾಯರ ದರ್ಶನ ಕೌಟುಂಬಿಕ ಜೀವನದ ದರ್ಶನವಾಗಿದೆ. ಅದರ ನೂರು ರೀತಿಗಳನ್ನೂ ಸಾವಿರ ವಿವರ ಗಳನ್ನೂ ಅವರು ಬಲ್ಲರು. ಸಂಸಾರದ ನೀತಿ-ಧರ್ಮಗಳು ಏನಿರಬೇಕೆಂಬುದರ ಬಗ್ಗೆ ಅವರ ನೋಟ ನಿಚ್ಚಳವಾಗಿದೆ. ಅದು ಮನೋಹರವಾಗಿ ಒಡಮೂಡು ವಂತೆ ಅವರ ಕಲೆಯು ಅದಕ್ಕೆ ಸಹಾಯಕವಾಗಿ ನಿಂತಿದೆ.

ಒಂದೆರಡು ಅಪವಾದಗಳನ್ನು ಬಿಟ್ಟರೆ ಅವರ ಕಲಾವಸ್ತು ವಾಸ್ತವಿಕತೆಯನ್ನೇ ನೆಚ್ಚಿಕೊಂಡಿದೆ. ಪಿತೃಭಕ್ತಿ-ದೇಶಭಕ್ತಿಗಳ ಘರ್ಷಣದಲ್ಲಿ ಸಿಕ್ಕ ವಿರೂಪಾಕ್ಷನ ಚಿತ್ರ ಐತಿಹಾಸಿಕ ಹಿನ್ನೆಲೆಯಲ್ಲಿ ಬಂದಿದೆ. ಹಲ್ಲಿದ್ದಲ್ಲಿ ಕಡಲೆಯಿಲ್ಲವೆಂಬ ಸಂಸಾರಸೂತ್ರವನ್ನು ಅರಳಿಸಿ ತೋರಿಸುವ 'ತಿರುವು-ಮುರುವಿನ' ಹಿನ್ನೆಲೆಯಲ್ಲಿ ಕಲ್ಪಕತೆಯು ಚಮತ್ಕಾರವಿದೆ. ಉಳಿದ ದೃಶ್ಯಗಳೆಲ್ಲ ವಾಸ್ತವಿಕತೆಯನ್ನೇ ಆಶ್ರಯಿಸಿವೆ.

ಮಗನಿಗೆ ಉತ್ತಮ ಸಂಬಳದ ನೌಕರಿ ದೊರೆತರೂ ತಂದೆ ಶಂಕರಣ್ಣನ ತಾಪತ್ರಯ ನೀಗಲಾರದ ವಿಚಿತ್ರ ಪರಿಸ್ಥಿತಿ: ಅದನ್ನೂ ಮೀರಲು ಪಡೆದು ಬಂದಿರಬೇಕೆಂಬ ದೈವವಾದ ಒಂದು ದೃಶ್ಯದಲ್ಲಿ ಮೂಡಿದೆ. ಅತಿಥಿಗಳ ಬಗ್ಗೆ ಮಾತನಾಡುತ್ತ ರಾಮಣ್ಣ ಹೇಳುತ್ತಾನೆ: "ಸ್ನೇಹಿತ ಅತಿಥಿಗಳು, ಆಪ್ತ ಅತಿಥಿಗಳು, ಪ್ರವಾಸಿ ಅತಿಥಿಗಳು, ಪರೀಕ್ಷೆಯ ಅತಿಥಿಗಳು, ವರಾನ್ವೇಷಣದ ಅತಿಥಿಗಳು, ಸಭೆ-ಸಮ್ಮೇಲನದ ಅತಿಥಿಗಳು, ಚೈನೀ ಅತಿಥಿಗಳು, ದೇಶಭಕ್ತ ಅತಿಥಿಗಳು—ಒಂದಲ್ಲ, ಎರಡಲ್ಲ!" ಮುಗಳಿಯವರ **ಅತಿಥಿದೇವರಲ್ಲಿಯಂತೆ** ಇಲ್ಲಿಯೂ ಇಂತಹ ಆಗಂತುಕರಿಗೆ ಮಂಗಳಾರತಿಯಾಗಿದೆ. ಹೊಟ್ಟೆಗಿಲ್ಲದೆ ಪೇಚಾಡುವ ಈ ಕಾಲದಲ್ಲಿ ಅತಿಥಿಗಳ ಬವಣೆ ಬೇರೆ! ತಮ್ಮನ್ನು ಹಾಳು ಮಾಡಿಕೊಂಡು ಅತಿಥಿಗಳನ್ನು ಸತ್ಕರಿಸುವದು ಶುಷ್ಕಧರ್ಮವೆಂದು ಇಲ್ಲಿ ಸೂಚಿತವಾಗಿದೆ. ಬೆಂಡೋಲೆಗಳ ಸಲುವಾಗಿ ಒಂದು ದಾಂಪತ್ಯವೇ ವಿರಸವಾಗಲು ಬಂದುದನ್ನು ನೋಡಿದ ಗಣೇಶ, ತನ್ನ ಗೆಳೆಯ ಗೋಪಾಳನಿಗೆ ಬೆಂಡೋಲೆ ಕೊಂಡುಕೊಟ್ಟು ಹೇಳುತ್ತಾನೆ: "ಸಂಸಾರದಾಗ ಹೇಣ್ತಿ ಹತ್ತು ಸಾರೆ ಸೋತರ ಗಂಡ ಒಮ್ಮೆಯಾದರೂ ಸೋಲಬೇಕಾಗ್ತದ!" ಇನ್ನೊಂದು ದೃಶ್ಯದಲ್ಲಿ ನಾಲ್ಕು ಬೆಳೆದು ನಿಂತ ಹೆಣ್ಣುಮಕ್ಕಳುಳ್ಳ ತಂದೆಗೆ ಅವರಲ್ಲೊಬ್ಬಳ ಅವಿವೇಕವನ್ನು ಪರೀಕ್ಷಿಸಿದ ಡಾಕ್ಟರು ಹೇಳುತ್ತಾರೆ: "೧೬ ವರ್ಷದವ್ಯಾಲ ನಮ್ಮ ಹೆಣ್ಣು ಹುಡುಗರ್ನ ಸಾಲಿಯೊಳಗೂ ಇಡೊಹಾಂಗಿಲ್ಲ, ಮದಿವೀ ಮಾಡದೇನೂ ಬಿಡೋಹಾಂಗಿಲ್ಲ." **ಸಂತಾನಲಕ್ಷ್ಮಿ**ಯಲ್ಲಿ ಸಂತಾನನಿರೋಧದ ಬಗ್ಗೆ ಗಂಡ-ಹೆಂಡಿರ ನಡುವೆ ತುರುಸಿನ ಚರ್ಚೆ ನಡೆಯುತ್ತದೆ. ಕೊನೆಗೆ ಬಂದ ಮಾಧೂಕಾಕಾ—ಹನ್ನೊಂದು ಮಕ್ಕಳ ತಂದೆ—ತನ್ನ ಐದು ಗಂಡು ಮಕ್ಕಳು ಐದು ತರಹವಾದುದನ್ನು ಹೇಳಿ, ಕೊನೆಯ ಮಗನೇ ತಮಗೆ

ಊರುಗೋಲಿಂದು ಸೂಚಿಸಿ: "ಹುಟ್ಟಿದೊಬ್ಬ ಮಗ ಅಶ್ವತ್ಥಾಮ ಆಗ ಬೇಕಾದ್ರ ನಾವೂ ದ್ರೋಣಾಚಾರ್ರ‍್ರು ಇರಬೇಕಾಗ್ತದಪಾ! ಹುಟ್ಟಿದ ಪ್ರತಿ ಯೊಂದು ಜೀವಾನೂ ತನ್ನ ಅದೃಷ್ಟ ಕಟಿಗೊಂಡ ಬಂದಿರ್‍ತದೇನಪಾ!" ಎಂದು ಉದ್ಗಾರ ತೆಗೆಯುತ್ತಾನೆ. ಚರ್ಚಾಸ್ಪದವಾದರೂ ಇದು ವಿಚಾರ ಣೀಯವಾದ ಮಾತು.

ಅಲ್ಲದೆ ದೈನಂದಿನ ಜೀವನದ ಕರುಣಾಮಯ, ಹೃದಯದ್ರಾವಕ ಚಿತ್ರ ಗಳೆಡೆಗೆ ವಿನೋದಪೂರ್ವಕವಾಗಿ ನಮ್ಮ ಲಕ್ಷ್ಯವನ್ನು ಸೆಳೆಯುವ ದೃಶ್ಯ ಗಳೂ ಇಲ್ಲಿವೆ. ಜಿಪುಣರಾಯರಲ್ಲಿ ಇಲ್ಲದ ಸಂಶಯವನ್ನು ಹುಟ್ಟಿಸಿ, ಅವರನ್ನು ತಮ್ಮ ಅಂಕಿತದಲ್ಲಿ ಇಟ್ಟುಕೊಳ್ಳುವ ಆಶ್ರಿತ ದಂಪತಿಗಳು; ರ‍್ಯಾಶನ್ ದಿನ ಗಳಲ್ಲಿ ಸುಳ್ಳಿನ ಮಾಲೆಯನ್ನೇ ಕಟ್ಟಿ ಆಹಾರವನ್ನು ದೊರಕಿಸಿ "ಮೊದಲಿಗೆ ಜೀವನದೊಳಗ ಸುಖಾ ಇತ್ತು. ಆಗ ನಾಟಕಾ ಅಂದರ ಸುಳ್ಳಿನ ಒಂದು ಕಂತಿ ಅನಿಸಿತ್ತು. ಈಗ ನಮ್ಮ ಜೀವನಾನ ಸುಳ್ಳಿನ ಒಂದು ಕಂತಿ ಆಗೇದೇ ನಪಾ!' ಎಂದು ಹೇಳುವ ಕೃಷ್ಣರಾಯ; ಮಕ್ಕಳ ಜಗಳಾಟದಿಂದ ಉದ್ದೀಪನ ಗೊಂಡು ಬಾಯ್ತುಂಬ ಬಯ್ದಾಡುವ ನೆರೆಹೊರೆಯವರು; ಜಾಗದ ಸಂಕೋಚ ವಾಗಿ ಒಂದೇ ಕೋಣೆಯಲ್ಲಿ ಓದುತ್ತಿರುವ ಮೂರು ಮಕ್ಕಳ ರಸಕಸಿಯನ್ನು ತಡೆಯುವ ಜ್ಞಾನವಿಲ್ಲದೆ ಅವ್ಯವಸ್ಥೆಯ ಮೊಟ್ಟೆಯಾದ ಶಂಕರಣ್ಣ; ನೌಕರಿ ಯನ್ನು ದೊರಕಿಸದೆ ಹೋದ ಮಗನನ್ನು ಶಪಿಸಿ ಅವನು, ಕುಂಟಳಾದರೂ ಹಣವನ್ನು ತಂದ ಹುಡಿಗೆಯ ಮದುವೆಯನ್ನು ಸಾಧಿಸಿಕೊಂಡು ಬಂದಾಗ ಅವನನ್ನು ಬಾಯ್ತುಂಬ ಹೊಗಳುವ ಗೂರುಬೇನೆಯ ತಿರುಕಪ್ಪ: ಇವರನ್ನು ನೋಡಿ ನಾವು ಹೊಟ್ಟೆತುಂಬ ನಗುತ್ತೇವೆ. ಮರುಕ್ಷಣವೆ ಇಂದಿನ ಸಮಾಜದ ವಿಷಮ ಸ್ಥಿತಿಯನ್ನೂ ಅವರ ನಿರ್ಘೃಣ ಚಕ್ರದಲ್ಲಿ ಸಿಕ್ಕ ಈ ಅಸಹಾಯ ವ್ಯಕ್ತಿಗಳನ್ನೂ ನೆನೆದು ಕಂಬನಿ ಮಿಡಿಯುತ್ತೇವೆ.

ವಿನೋದ-ಕರುಣೆಗಳ ಈ ಜೋಡಣೆ ಕೃತಿಗಳನ್ನೆಲ್ಲ ಗಂಗಾ-ಯಮುನಾ ಸಂಗಮದಂತೆ ಪಾವನವಾಗಿಸಿದೆ. ಲಕ್ಷ್ಮಣರಾಯರ ಹೃದಯವಂತಿಕೆ-ವಿವೇಕಗಳಿಗೆ ಇದು ಒಳ್ಳೆಯ ನಿದರ್ಶನವಾಗಿದೆ. ಇಲ್ಲಿಯ ಇವರ ಉತ್ತಮ ಕೃತಿಯೆಂದರೆ **ಮದಿವೀ ಪತ್ತಲ.** ಇದರಲ್ಲಿಯ ದರ್ಶನ ಮೊಂಡವಾಗಿ ಬರಿ ಸೂತ್ರಗಳಲ್ಲಿ ರೂಪಗೊಂಡಿಲ್ಲ. ಸನ್ನಿವೇಶರಚನೆ ಸ್ವಭಾವನಿರೂಪಣೆಯಲ್ಲಿಯೇ

ಅದು ಸ್ಥಾನ ಪಡೆದುಕೊಂಡಿದೆ. ಈ ಕೃತಿಗೆ ಪೂರ್ಣತೆ ಬರಲು ಇನ್ನೂ ಒಂದು ಕಾರಣವಿದೆ. ಕಲೆಯು ಇಲ್ಲಿ ಬರಿ ಸಹಾಯಕವಾದ ಅಂಗವಲ್ಲ. ವಿನೋದ-ಕರುಣೆಗಳಷ್ಟೇ ಪ್ರಧಾನತೆಯನ್ನು ಪಡೆದು ಕೃತಿಯನ್ನು ಅದು ತ್ರಿವೇಣಿ ಸಂಗಮವಾಗಿಸಿದೆ.

ಲಕ್ಷ್ಮಣರಾಯರು ತಮ್ಮ ದೃಶ್ಯಗಳನ್ನು ಮನೋಹರವಾಗಿ ಪ್ರಾರಂಭಿಸಬಲ್ಲರು.

“**ರಾಮು**— ಹ್ಯಲ್ಲೋ! ರಂಗ್ಯಾ, ಹಿಂಗ್ಯಾಕ ಅಜುಬಾಜು ನೋಡಿಕೋತ ಹೊರಟೀ? ಯಾವುದಾದರೂ ಮುಖಚಂದ್ರ ಕಾಣಿಸಬೇಕಾ ಗೇದೇನು?

ರಂಗ— ಎಲ್ಲೀದೋ! ಇಲ್ಲಿಯ ತನಕ ಇದ್ದ ಖೋಲಿಯೊಳಗಿಂದಃ ನಮಗ ಅರ್ಧಚಂದ್ರ ಸಿಕ್ಕಿತು! ಈಗ ಬ್ಯಾರೆ ಖೋಲಿ ನೋಡದ ಗತಿ ಇಲ್ಲ!”

ಅರ್ಧಚಂದ್ರ ಸಿಕ್ಕ ರಾಮುನಿಗೆ ಮುಂದೆ ಅದೇ ಕೋಣೆಯೇ ದೊರೆಯುವ ದಲ್ಲದೆ ಒಂದು ಮುಖಚಂದ್ರಮವೂ ಒದಗಿಬರುತ್ತದೆ. ಬಹುಶಃ ಎಲ್ಲ ದೃಶ್ಯ ಗಳಲ್ಲಿಯೂ ಇಂತಹ ಕಲಾಮಯ ಪ್ರಾರಂಭಗಳಿವೆ.

ದೃಶ್ಯದ ಮಧ್ಯಭಾಗವನ್ನು ಪೋಷಿಸಲು ಪಾತ್ರಗಳ ಸ್ನೇಹಿತನಾಗಲಿ ಮತ್ತಾರಾದರಾಗಲಿ ಬರುತ್ತಾರೆ. ಇಲ್ಲವೆ ‘ನಾರ್‍ಯಾನ ಕರಾಮತಿ’ಯಲ್ಲಿಯಂತೆ ಪ್ರಸಂಗವೇ ತಿರುವು-ಮುರುವಾಗಿ ವಧು ಬರುತ್ತಾಳೆ! ಈ ಪೋಷಣೆಯಲ್ಲಿ ಸಹಜತೆಯಿದೆ.

ದೃಶ್ಯಗಳ ಮುಕ್ತಾಯದಲ್ಲಿ ಮಾತ್ರ ಒಮ್ಮೊಮ್ಮೆ ಕಲೆಯು ಕುಂಟು ತ್ತದೆ. ‘ಪಡೆದು ಬಂದಿರಬೇಕಿ’ನ ಕೊನೆ ಸುಸ್ಪಷ್ಟವಾಗಿಲ್ಲ. ಅತಿಥಿ ಸಾರ್ವಭೌಮದಲ್ಲಿಯ ಬಲರಾಮು-ರಾಮುರ ಹೋಲಿಕೆ ಕೊನೆಗೆ ಸೂಚಿತ ವಾದರೂ ಅದಕ್ಕೆ ಮುಕ್ತಾಯವಿಲ್ಲ. ಆದರೆ ಇಂಥಲ್ಲಿಯೂ ಸಹ ದೃಶ್ಯದ ತಿರುಳು ಸೂತ್ರದಲ್ಲಿ ರೂಪಗೊಂಡು ಮುಕ್ತಾಯಕ್ಕೆ ಅರ್ಥಪೂರ್ಣತೆಯ ನ್ನೊದಗಿಸಲು ಹವಣಿಸುತ್ತದೆ.

ಸನ್ನಿವೇಶಗಳ ಆಯ್ಕೆಯಲ್ಲಿ ಕುಶಲತೆಯಿದೆ. **ಸಕ್ರೀ ಗುಳಿಗಿ, ನಾರ್‍ಯಾನ ಕರಾಮತಿ, ಮದಿವೀ ಪತ್ತಲ** ಮುಂತಾದವುಗಳಲ್ಲಿ ಕುಶಲತೆಯೊಡನೆ ಚಮತ್ಕೃತಿಯೂ ಬೆರೆತುಕೊಂಡು ರಸವಂತಿಕೆಯನ್ನು ಹೆಚ್ಚಿಸುತ್ತದೆ.

ಸ್ವಭಾವನಿರೂಪಣೆಯು ಇದಕ್ಕೂ ಮೇಲ್ಮಟ್ಟದ್ದಾಗಿದೆ. **ಮದಿವೀ ಪತ್ತಲದ** ಅಣ್ಣಾರಾಯ, ನಾರ್‍ಯಾನ ತಂದೆ ತಿರುಕಪ್ಪ,–ರಿಟೈರ್‍ಡ್ ನೌಕರರ ಮಾದರಿಗಳು ಇಲ್ಲಿ ಚೆನ್ನಾಗಿ ಮೂಡಿವೆ. ಕಾಲೇಜು ವಿದ್ಯಾರ್ಥಿಗಳು ಹಾಗು ತರುಣ ದಂಪತಿಗಳೂ ತಮ್ಮ ವಾಗ್ಝರಿಯಿಂದ ಇಲ್ಲಿ ಎದ್ದು ಕಾಣುತ್ತಾರೆ.

ಆದರೆ ಈ ದೃಶ್ಯಗಳ ಉತ್ತಮ ಲಕ್ಷಣವೆಂದರೆ ಇಲ್ಲಿಯ ಸಂಭಾಷಣೆಗಳ ಸಹಜ ರಸವಂತಿಕೆ, ನಿರರ್ಗಳ ಓಟ. ಅವುಗಳಲ್ಲಿ ವಿನೋದವಿದೆ, ವಿಡಂಬನೆಯಿದೆ, ಚಮತ್ಕಾರವಿದೆ, ಅನುಭವವಿದೆ, ಜ್ಞಾನವಿದೆ. ಓದಿದಷ್ಟು ಇಲ್ಲಿಯ ಸಂಭಾಷಣೆ ಸವಿಯಾಗಿದೆ. ಕೇಳಿದಷ್ಟು ಮನೋಹರವಾಗಿದೆ. ಅಲ್ಲಿ ಜೀವನವೇ ಸಾಹಿತ್ಯವಾಗಿ ಸಾಹಿತ್ಯವೇ ಜೀವನವಾಗುತ್ತದೆ. ಇದ್ದ ಬಿದ್ದ ಕುಂದುಕೊರತೆಗಳೆಲ್ಲ ಈ ಪ್ರವಾಹದಲ್ಲಿ ಮಾಯವಾಗಿ ಹೋಗುತ್ತವೆ. ಈ ಕೃತಿಗಳ ಅಭಿಜಾತ ಲಕ್ಷಣವೇ ಇಲ್ಲಿಯ ಸಂಭಾಷಣೆಗಳ ಮಾಧುರ್ಯವೆಂದು ಹೇಳಬಹುದು.

ಕಲಾಪೂರ್ಣವಾಗಿ ವಿನೋದ-ಕರುಣೆಗಳ ಸಂಗಮವನ್ನು ಹಿರಿದಾದ ಕೃತಿಗಳಲ್ಲಿ ಸಹ ಗೆಳೆಯ ಲಕ್ಷ್ಮಣರಾಯರು ಇನ್ನು ಮೇಲೆ ಒಡಮೂಡಿಸಲೆಂದು ಹಾರೈಸುತ್ತೇನೆ.

ಧಾರವಾಡ
೫-೫-೧೯೫೭ } ವಿ. ಕೃ. ಗೋಕಾಕ

ಈ ಮುನ್ನುಡಿ ' ಮದುವೆಯ ಪತ್ತಲ ' ಹಾಗು ' ಪಡೆದು ಬಂದಿರಬೇಕು ' ಈ ಎರಡು ಸಂಗ್ರಹಗಳಲ್ಲಿ ಪ್ರಕಟವಾದ ಏಕಾಂಕಗಳನ್ನನುಲಕ್ಷಿಸಿ ಬರೆದುದಾಗಿದೆ.

ಮದಿವೀ ಪತ್ತಲ

★

ಪಾತ್ರಗಳು:

ರಂಗ: .... ಕಾಲೇಜ್ ವಿದ್ಯಾರ್ಥಿ

ರಾಮು: .... ರಂಗನ ಗೆಳೆಯ, ,, ,,

ಕುಮಾ ದೇಶಪಾಂಡೆ: .... ,, ವಿದ್ಯಾರ್ಥಿನಿ

ಮೊಕಾಶಿ ಅಣ್ಣಾರಾಯರು: .... ಚಾಳಿನ ಒಡೆಯರು

ಜಕಾತಿ ಗುಂಡೇರಾಯರು: .... ರಂಗನ ತಂದೆ

ದೇಶಪಾಂಡೆ ವಿಠ್ಠಲರಾಯರು: .... ಕುಮಾನ ತಂದೆ

ದೃಶ್ಯ ೧

[ರಸ್ತೆ. ರಂಗ ಸಿಳ್ಳುಹಾಕುತ್ತ, ರಸ್ತೆಯ ಎಡಬಲದ ಮನೆಗಳನ್ನು ನೋಡುತ್ತ ಹೊರಟಿರುತ್ತಾನೆ. ಅವನಿಗೆ ಬಾಡಿಗೆಗೆ ಖೋಲಿ ಬೇಕಾಗಿರುತ್ತದೆ. ಅವನ ಹಿಂದಿನಿಂದ ಸೈಕಲ್ ಮೇಲೆ ಅವನ ಸ್ನೇಹಿತ ರಾಮು ಬರುತ್ತಾನೆ; ರಂಗನನ್ನು ನೋಡಿ ಸೈಕಲ್ ಮೇಲಿಂದ ಇಳಿಯುತ್ತಾನೆ.]

ರಾಮು:– ಹ್ಯಲ್ಲೋ! ರಂಗ್ಯಾ, ಹಿಂಗ್ಯಾಕ ಆಜು ಬಾಜು ನೋಡಿಕೋತ ಹೊರಟೀ? ಯಾವದಾದರೂ ಮುಖಚಂದ್ರ ಕಾಣಿಸಬೇಕಾಗೇದೇನು?

ರಂಗ:– ಎಲ್ಲೀದೋ! ಇಲ್ಲಿಯ ತನಕ ಇದ್ದ ಖೋಲಿಯೊಳಗಿಂದ ನಮಗ ಅರ್ಧ ಚಂದ್ರ ಸಿಕ್ಕಿತು! ಈಗ ಬ್ಯಾರೆ ಖೋಲಿ ನೋಡದ ಗತಿಯಿಲ್ಲ. ಈ ಭಾಗದೊಳಗ ಮೊಕಾಶಿ ಅಣ್ಣಾರಾಯರು ಅಂತ ಒಬ್ಬ ರಿಟಾಯರ್ಡ್ ಮಾಮಲೇದಾರು, ಚಾಳು ಕಟ್ಟಿಸ್ಯಾರಂತಲ್ಲ? ಅದನ್ನ ಹುಡುಕ್ತ ಹೊರಟೇನಿ, ಅಲ್ಲಿ ಖೋಲಿ ತೆರವಿದ್ದರ ನೋಡೋಣು ಅಂತ.

ರಾಮು:– ನೀ ಮೊದಲಿದ್ದ ಖೋಲಿ ಛಲೊ ಇತ್ತಪಾ. ಅದನ್ನ ಬಿಡಲಿಕ್ಕೆ ಕಾರಣೇ ನಾತು? ಏನು, ಅವರs ಬಿಡಿಸಿದರೊ?

ರಂಗ:– ಅವನ್ನ ಅವರಾಗೇ ಬಿಡಿಸಲಿಲ್ಲ. ನನ್ನದs ತುಸು ತಪ್ಪಾತು. ನಾನು ಸೂಟಿಗೆ ಹೋದವ ತಿರುಗಿ ಬರಲಿಕ್ಕೇ ತಡ ಆತು.

ರಾಮು:– ಯಾಕ? ಊರಾಗೆಲ್ಲ್ಯರ ರೋಮಾನ್ಸ್ ನಡೆಸಿದ್ಯೇನು ?

ರಂಗ:– ನನ್ನ ರೋಮಾನ್ಸಿಗೆ ನಮ್ಮ ಅಪ್ಪ ನನಗ ಚಾನ್ಸs ಕೊಡೋಹಾಂಗ ಕಾಣೋದಿಲ್ಲ! ಒಮ್ಮೆಲೆ ಮದಿವೀನs ಅಂತಾನ! ಈಗ ಅರ್ಧ ಡಜನ್ ಕನ್ಯಾದ ಪ್ರದರ್ಶನ ಆತು ನನ್ನೆದುರಿಗೆ!

ರಾಮು:– ಅದಕ್ಕs .... ನಿನ್ನ ಪ್ರಕೃತಿ ಸುಧಾರಿಸೇದ ನೋಡು! ಮದಿವೆಂದಪಾ?

ರಂಗ:– ಇನ್ನೂ ಗೊತ್ತೆಲ್ಲಿ ಆಗೇದ? ಬರೇ ನೋಡೋದೊಂದs ಆತು. ಎಲ್ಲಾ ಕನ್ಯಾ ಬಿಲೊ ೩೦ ಪರ್ಸೆಂಟ್ ಇದ್ದುವು! ಫರಾಳ ಮಾತ್ರ ಸಮೃದ್ಧಿ ಇತ್ತು!

ರಾಮು:– ಹ್ಯಾಂಗೂ ಜ್ಯೂನಿಯರ್ ಅದ, ಹೊಡಿ ಚೈನಿ!

ರಂಗ:– ಹುಂ, ಚೈನಿ! ಕನ್ಯಾ ಅಲ್ಲಿ ಗೊತ್ತಾಗಲಿಲ್ಲ, ಖೋಲಿ ಇಲ್ಲಿ ಕೈಯಾಗ ಉಳೀಲಿಲ್ಲ! ಈಗ ಎರಡೂ ಕಳಕೊಂಡಾಂಗಾತು. ರಸ್ತೇದ ಮ್ಯಾಲ ಹಾಸಿಗಿ ಸುರುಳಿ ಇಟುಗೊಂಡು ಕೂತೀನಿ ಪರದೇಶಿಹಾಂಗ! ಇನ್ನ ಖೋಲಿ ದೊರಕಿಸದ ಗತೀನೇ ಇಲ್ಲ. ಬೇಕಾದ್ದಾಗಲಿ, ಇವತ್ತು ಬ್ಯಾರೆ ಖೋಲಿ ಹಿಡಿಲಿಕ್ಕೇ ಬೇಕು. ಖೋಲಿ ಸಿಗದಿದ್ದರ ಬ್ಲಾಕು, ಅದೂ ಸಿಗದಿದ್ದರ ಮನೆ, ಮನೇನೂ ಸಿಗದಿದ್ದರ ಬಂಗಲೆ! ಅದಕ್ಕs ಮೊಕಾಶಿ ಚಾಳು ಅಂದರು, ಹೊರಟೇನಿ.

ರಾಮು:– ಹೌದು. ಮೊಕಾಶಿ ಚಾಳು ಅಂದರ ಮದಿವೀ ಮಾಡಿಕೊಂಡವರ ಚಾಳೋ! ಅಲ್ಲಿ ವಿದ್ಯಾರ್ಥಿಗಳಿಗೆ ಖೋಲಿ ಸಿಗೋದಿಲ್ಲ! ನಿನಗ್ಗೊತ್ತದನೋ ಇಲ್ಲೋ?

ರಂಗ:– ನೀ ನೋಡಿಯೇನವನ್ನs?

ರಾಮು:– ನಾ ಸ್ವತಃ ನೋಡಿಲ್ಲ. ಕೇಳಿ ಬಂದವರು ಹೇಳ್ಯಾರಪಾ ಮತ್ತ.

ರಂಗ:– ಕೇಳಿಕಿ ಸುದ್ದಿ ಬ್ಯಾಡ. ಪ್ರತ್ಯಕ್ಷ ನೋಡೇ ಬರೋಣ. ನೀನೂ ನಡಿಯಲ್ಲ, ಸೌಡಿದ್ದರ.

ರಾಮು:– ಬಂದೇನು ಬಿಡು. ಆದರ ಮುಂದಿ ಹೇಳೋದು ಖರೇನs ಇದ್ದರ, ಮಾಡ್ತಿಯೇನು?

ರಂಗ:– ಹತ್ತು ಸುಳ್ಳಾಡಿ ಒಂದು ಕಲ್ಯಾಣ ಕಟ್ಟಬೇಕಂತ. ಈ ಕಾಲದೊಳಗ

ಖೋಲಿ ದೊರಕಿಸೋದೂ, ಕನ್ಯಾ ದೊರಕಿಸೋದೂ ಒಂದs ಕ್ಯಾಟಗರಿ ಯೊಳಗ ಬರ್ತಾವ! ಮುಂಬಯಿ ಪರಿಸ್ಥಿತಿ ಗೊತ್ತದನೋ ಇಲ್ಲೊ? ಅಲ್ಲಿ ಖೋಲಿ ಇದ್ದರ ಕನ್ಯಾ ಕೊಡ್ತಾರಂತ!

ರಾಮು:– ಇಲ್ಲಿ ಅದರ ವಿರುದ್ಧ! ಕನ್ಯಾ ಇದ್ದರ ಇಲ್ಲಿ ಖೋಲೀ ಕೊಡ್ತಾರ! ಇದು ನೋಡು, ಕೇಳಿ ಇಲ್ಲ ಅನಿಸಿಕೊಳ್ಳೋದಕಿಂತ ಮೊದಲs ವಿಚಾರಮಾಡು.

ರಂಗ:– ಖೋಲಿ ಸಿಗ್ತಿದ್ದರ ಬೇಕಾದ ಸುಳ್ಳು ಹೇಳೋದು ಅಂತ ನಾ ಅಂತೂ ನಿಶ್ಚಯ ಮಾಡಿಕೊಂಡೇ ಬಂದೀನಿ.

ರಾಮು:– ಅದಸ್ಸಾಂಗ ನಡದು ತೋರಿಸಬೇಕಾಗ್ತದ. ಬಾಡಿಗೀದಾರ ಅಂತ ವರ್ಷಾರು ತಿಂಗಳಾದರೂ ಇರುವವ ನೀನು. ಒಪ್ಪೊತ್ತಿನ ಮಾತಲ್ಲ, ಏನಾದರೂ ಬಂಡಲ್ ಹೊಡೀಲಿಕ್ಕೆ!

ರಂಗ:– ಇಲ್ಲಿ ನೋಡು ರಾಮು, ನೀ ಸುಮ್ಮನೆ ನನ್ನ ಜೋಡಿಗೆ ಬಾ. ನಾ ಎಲ್ಲಾ ಮಾತಾಡ್ತೀನಿ. 'ಧೈರ್ಯಂ ಸರ್ವತ್ರ ಸಾಧನಂ.' ನನಗ ಆ ಚಾಳೊಂದು ತೋರಿಸು.

ರಾಮು:– ನಡಿ, ನಂದೇನು ಹೋತು? ಈ ರಿಟಾಯರ್ಡ್ ಮಂದಿ ಅಂದರ ಬಲು ಖವುಟು ಇರ್ತಾವೊ! ಆದದ್ದಾಗ್ತದ ನಡಿ.

(ಹೋಗುತ್ತಾರೆ.)

ದೃಶ್ಯ ೨

[ಚಾಳಿನ ಕೋಣೆ. ಅಣ್ಣಾರಾಯರು ಒಂದು ಕಿಟಕಿಗೆ ತಾವೇ ಬಣ್ಣವನ್ನು ಹಚ್ಚುತ್ತ ನಿಂತಿದ್ದಾರೆ. ಅವರ ವಯಸ್ಸು ಸುಮಾರು ಅರುವತ್ತಕ್ಕೆ ಸಮೀಪಿಸಿದೆ. ಆದರೂ ದೇಹ ಗಟ್ಟಿಮುಟ್ಟಾಗಿ ಕಾಣುತ್ತಿದೆ. ತಲೆಯ ಮೇಲೆ ಸಣ್ಣಾಗಿ ಬೆಳೆಯಿಸಿದ ಕ್ರಾಪು, ಮೈಯಲ್ಲಿ ಒಳಂಗಿ, ಅದರ ಮೇಲೆ ಉಣ್ಣೆಯ ಜಾಕೀಟು, ಕುತ್ತಿಗೆಗೆ ಮಫ್‌ಲರ್, ತೊಟ್ಟದ್ದು ಪ್ಯಾಂಟ್ ಕತ್ತರಿಸಿ ಮಾಡಿದ ಅರ್ಧ ಚೊಣ್ಣ—ಈ ವೇಷದಲ್ಲಿ ಇರುತ್ತಾರೆ. ಕಣ್ಣಿನ ಕನ್ನಡಕ ಹಣೆಗೆ

ಏರಿಸಿದ್ದಾರೆ. ಕೋಣೆಯಲ್ಲಿ ಬೇರೆ ಫರ್ನಿಚರ್, ಸಾಮಾನು ಏನೂ ಇಲ್ಲ. ಮಧ್ಯದಲ್ಲಿ ಮಿಂಚಿನ ದೀಪ ಇಳಿಬಿಟ್ಟಿದ್ದು ಕಾಣುತ್ತದೆ. ರಂಗ ಮತ್ತು ರಾಮು ಒಬ್ಬರ ಹಿಂದೊಬ್ಬರು ಬರುತ್ತಾರೆ.]

ರಂಗ:— ನಮಸ್ಕಾರ, ರಾಯರ.

[ರಾಯರು ದಿಟ್ಟಿಸಿ ನೋಡುತ್ತಾರೆ. ರಂಗ ಮತ್ತು ರಾಮು ಮತ್ತೊಮ್ಮೆ ನಮಸ್ಕಾರ ಮಾಡುತ್ತಾರೆ. ಒಂದು ಕೈಯಲ್ಲಿ ಬಣ್ಣದ ಡಬ್ಬಿ, ಒಂದು ಕೈಯಲ್ಲಿ ಬ್ರಶ್ ಹಿಡಿದಿದ್ದ ರಾಯರು ದಿಟ್ಟಿಸಿನೋಡಿ ನಮಸ್ಕರಿಸುತ್ತಾರೆ.]

ಅಣ್ಣಾರಾಯರು:— ಬಂದೆ, ಒಂದು ಕೈ ಒರೆಸಿ ಬರ್ತೀನಿ.

[ಅವರು ಇನ್ನೊಂದು ಕೈ ಕಿಟಕಿಯ ಫಡಕಿಗೆ ಸವರಿ, ತುಸು ಹಿಂದಕ್ಕೆ ಸರಿದು, ಕನ್ನಡಕವನ್ನು ಕಣ್ಣಿನ ಮೇಲಿಳಿಸಿ, ದೂರ ನಿಂತು ಅದನ್ನು ನಿರುಕಿಸಿ, ಡಬ್ಬಿ ಕುಂಚ ಕೈಯಲ್ಲಿ ಹಿಡಿದುಕೊಂಡೇ ರಂಗನ ಎದುರು ಬಂದು ನಿಲ್ಲುತ್ತಾರೆ.]

ರಂಗ:— (ಮತ್ತೊಮ್ಮೆ ನಮಸ್ಕರಿಸಿ) ಏನ್ರಾಯರ, ಈ ವಯಸ್ಸಿಗೆ ನೀವೇ ಬಣ್ಣ ಹಚ್ಚತ ನಿಂತೀರಲ್ಲ ! ನಾವು ತರುಣರು, ನಮ್ಮನ್ನ ನಾಚಿಸಿದಿರಿ !

ಅಣ್ಣಾ:— (ಆನಂದಿತರಾಗಿ) ನನಗೀಗ ಎಷ್ಟು ವಯಸ್ಸಾಗ್ಯದ ಅಂತ ನಿಮ್ಮ ಕಲ್ಪನಾ ಅದ ?

ರಂಗ:— (ಅವರನ್ನ ಇನ್ನಷ್ಟು ಉಬ್ಬಿಸುವ ಉದ್ದೇಶದಿಂದ) ಬಹಳಾದರ .... ಇರಬಹುದು... ....ನಾಲ್ವತ್ತು, ನಾಲ್ವತ್ತೈದು ! ಆರು ತಿಂಗಳು ಹೆಚ್ಚು ಕಡಿಮಿ !

ಅಣ್ಣಾ:— (ಗಿರಡಿಯ ರೀತಿಯಲ್ಲಿ ನಗುತ್ತ) ನನ್ನ ಹಲ್ಲು ನೋಡಿದಿರೇನು ? (ಬಾಯಿ ತೆರೆದು ತೋರಿಸುತ್ತಾರೆ.)

ರಂಗ:— ವಾ ವಾ ! ಒಂದು ಹಲ್ಲು ಕೂಡ ಬಿದ್ದು ಬಿಚ್ಚಾಗಿಲ್ಲ, ಮುರಿದು ಮುಕ್ಕಾಗಿಲ್ಲ. ಮಲ್ಲಿಗೀ ಮುಗ್ಗೀ ಹೆಣಧಾಂಗಾಗೇದ !

ಅಣ್ಣಾ:— ಏನು ಹೆಣಧಾಂಗಾಗೇದೊ ? (ಮತ್ತೆ ಅದೇ ಗಿರಡಿಯ ನಗು.)

ರಂಗ:— ರಾಮಾ, ರಾಯರ ವಿನೋದಬುದ್ಧಿ ಈ ವಯಸ್ಸಿಗೂ ಎಷ್ಟು ಜಾಗೃತ ಅದ ನೋಡಲ್ಲ ! (ಕಣ್ಣು ಹೊಡೆದು ನಗುತ್ತಾನೆ.)

ರಾಮು:— ಹೌದು ನೋಡು, ಯಾವ ಮಾತಿಗೆ ಹ್ಯಾಂಗ ಒಮ್ಮೆಲೆ ಅರ್ಥ ಹೊರ ಳಿಸಿದರು ! ನನ್ನ ತಲೀಗೆ ಮೊದಲು ಆ ಅರ್ಥ ಹೊಳೀಲೇ ಇಲ್ಲ. ನಗೆ ಅಂದರ ಹೀಂಗಿರಬೇಕು. ಇಲ್ಲಿದ್ದರ ನಮ್ಮ 'ಕರ್ಮವೀರ'ದವರೂ ನಗೆ

ಕೊಡ್ತಾರ!

ಅಣ್ಣಾ:— ಮಿಸ್ಟರ್, ಈ ವಿನೋದಬುದ್ಧಿ ಅದ ಅಂತನs ನನ್ನ ಪ್ರಕೃತೀ ವ್ಯಾಲ ಎಳ್ಳಷ್ಟೂ ಚಿಂತೀ ಪರಿಣಾಮ ಆಗಿಲ್ಲ!

ರಂಗ:— ನಿಮ್ಮ ದೇಹದಾರ್ಢ್ಯ ಬಹಳ ಛಲೋ ಅದ. ವಾ ವಾ ವಾ!

ಅಣ್ಣಾ:— ನಾ ನನ್ನ ಆಯುಷ್ಯದೊಳಗ ಎಷ್ಟ ಸಾರೆ ಔಷಧ ತಗೊಂಡೀನಿ ಅಂತ ಅನಿಸ್ತದ ನಿಮಗ?

ರಂಗ:— ಬಹಳ ಕಡಿಮೀ ಸಾರೆ ತಗೊಂಡಿರಬೇಕು.

ಅಣ್ಣಾ:— ಹೇಳ್ರಲ್ಲ ಎಷ್ಟು ಸಾರೆ? ಹತ್ತೊ, ಇಪ್ಪತ್ತೊ, ಐವತ್ತೊ?

ರಂಗ:— ಸಂಖ್ಯಾ ಇಷ್ಟು ಅಂತ ಹೇಳೋದು ಕಠಿಣ ಅದ, ರಾಯರ.

ಅಣ್ಣಾ:— ಹೇಳ್ರಿ, ನೋಡೋಣ?

ರಂಗ:— ಇರಬಹುದು—ಬಹಳ ಕಡಿಮಿ ಅಂದರೂ ಹತ್ತು ಹನ್ನೆರಡು ಸಾರೆ ಯಾದರೂ ಇರಬಹುದು.

ಅಣ್ಣಾ:— (ಗಿರಡಿಯು ನಗು ನಕ್ಕು) ಯಾರು ಹೇಳಿದರೂ ತಪ್ಪs ಹೇಳ್ತಾರ. ನಿಮ ಗೊಂದು ಮಜಾ ತೋರಿಸ್ತೀನಿ. (ಹೋಗಿ ಡಬ್ಬಿ ಕುಂಚ ಕಿಟಕಿಯ ಕೆಳಗಿಟ್ಟು ಬಂದು, ಜಾಕೀಟಿನೊಳಗಿನ ಒಂದು ಔಷಧದ ಬಾಟ್ಲಿಯನ್ನು ಹೊರತೆಗೆದು) ಇದನ್ನ ನೋಡಿದಿರೇನು? (ಹತ್ತಿರ ಹಿಡಿದು) ಇದರ ಮೇಲಿನ ತಾರೀಕು ಓದಿರಿ.

ರಂಗ:— ಅಬಬಬಬಬ! ಅಂದರ........೪೦ ವರ್ಷದ ಹಿಂದಿನ ತಾರೀಕು! (ಬಾಟ್ಲಿಯನ್ನು ಇಸಿದುಕೊಂಡು) ಅಲ್ಲಾ, ಬಾಟ್ಲಿಯೊಳಗಿನ ಔಷಧ ಹಾಂಗs ಅದಲ್ಲ, ರಾಯರ!

ಅಣ್ಣಾ:— ಒಂದs ಗುಳಿಗಿ ತಗೊಂಡೀನಿ. ಅದನ್ನ ಬರೆದೀನಿ ಅದರ ವ್ಯಾಲ. ತಿರಿವಿ ನೋಡ್ರಿ. ಒಂದು ದಿವಸ ಸಂಜೀ ಮುಂದ ಮೈ ತುಸು ಗುಗ್ಗುರು ಗಟ್ಟಿಧಾಂಗಾಗಿ ಜ್ವರ ಬಂತು. ಅದೂ ಹೆಣ್ತೀ ಜುಲುಮಿಗೆ ಈ ಔಷಧ ತರಿಸಿದೆ! ಮತ್ತ ಆಕೀ ಜುಲುಮಿಗೇ....ಒಂದs ಗುಳಿಗಿ ತಗೊಂಡೆ! ಇನ್ನೊಂದು ಗುಳಿಗಿ ತಗೊಳ್ಳೋ ಪ್ರಸಂಗನೇ ಬರಲಿಲ್ಲ.

ರಾಮು:— ಆ ಗುಳಿಗೀ ತಗೊಳ್ಳದಿದ್ದರೂ ನಿಮಗೆ ಗುಣ ಆಗ್ತಿತ್ತು ಬಿಡ್ರಿ! ಸುಮ್ಮನs ಅದನ್ನ ತಗೊಂಡು ಬಿಡಿಗೆಟ್ಟಾಂಗ ಆತು ನೀವು!

ಅಣ್ಣಾ:— ಹೌದು ನೋಡ್ರಿ. ನನಗೂ ಹೀಂಗs ಅನಿಸಿತ್ತು. (ಗಿರಡಿಯು ನಗು.)

ರಂಗ:– ಅಲ್ಲ ರಾಯರ, ನೀವು ಈ ಬಾಟ್ಲಿ ಯಾವಾಗ್ಯೂ ಹತ್ತಿರನs ಇಡ್ತೀ ರೇನು ಈಗ ನಾಲ್ವತ್ತು ವರ್ಷದ ಲಾಗಾಯ್ತು ?

ಅಣ್ಣಾ:– ಛೆ, ಛೆ. ಆಗs ಏನು ಮೋಜಾತು ಅಂದ್ರಿ ! ಅಂದರ ಈಗೊಂದು ತಾಸಾಗಿರಬಹುದು, ನಿಮ್ಹಾಂಗs ಒಬ್ಬರು ಬಂದರು. (ಒಮ್ಮೆಲೆ ಲಕ್ಷ್ಯಕ್ಕೆ ಬಂದಂತೆ) ಎಲ, ಹೌದಲ್ಲ! ನೀವ್ಯಾರು, ಯಾತಕ್ಕ ಬಂದೀರಿ, ನಾ ಇದು ವರೆಗೆ ಕೇಳಲೇ ಇಲ್ಲ ! ಇರಲಿ, ಈ ಒಂದು ಸುದ್ದೀ ಹೇಳಿ ಕೇಳ್ತಿನಿ ಆ ಮ್ಯಾಲ. ಏನಾತು ಅಂದರ—ಇಲ್ಲಿ ಬರ್‍ರಿ, (ಬಾಗಿಲಿನ ಹೊರಗಡೆ ಬೆರಳು ತೋರಿಸುತ್ತ) ಅಲ್ಲೀ ಹೊರಗ ಕಾಣಿಸ್ತದ ನೋಡ್ರಿ ಆ ಬಂಬ— ಹತ್ತು ಫೂಟು ಎತ್ತರ, ಎರಡೂವರೆ ಫೂಟು ವ್ಯಾಸದ್ದದ ಅದು—ನಾ ಒಬ್ಬನs ಎತ್ತಿ ಒಯ್ದು ಒಗದೀನಿ ! ಆಗ ಅವರೂ ಎದುರಿಗಿದ್ದರು, ಕೈ ಹಚ್ಚಲೇನು ಅಂದರು. ನಾ ಹಚ್ಚಗೊಡಲಿಲ್ಲ ! ನನ್ನ ರಟ್ಟೀ ನೋಡಿ 'ಗಾರಾ'ದರು ! ಇವು ನೋಡ್ರೆಲ್ಲ ! (ಮುಂಗೈ ಮತ್ತು ರಟ್ಟೆಯ ನರಗಳನ್ನು ಉಬ್ಬಿಸಿ ತೋರಿಸುತ್ತಾರೆ.)

ರಂಗ:– (ಅವರ ಮುಂಗೈ ಮೇಲೆ ತನ್ನ ಕೈಯಾಡಿಸುತ್ತ) ಛೆ, ಛೆ, ಛೇ, ಜಿ ಐ. ಪಿ. ಹಳಿ ಆಗೇದ !

ಅಣ್ಣಾ:– ಈ ಸಂಪತ್ತು ಸುಮ್ಮನs ಬಂದಿಲ್ಲ ರಾಯರ ! ನೋಕರೀ ಚಾರ್ಜು ಕೊಟ್ಟು ಮನೀಗೆ ಬಂದೆ. ಅಂದೇ ಸುರುಮಾಡಿದೆ ನೋಡ್ರಿ ಪ್ರತಿದಿನ ನೂರಾ ಎಂಟು ಸೂರ್ಯ ನಮಸ್ಕಾರ ! ಅಷ್ಟs ಅಲ್ಲ, ಇಪ್ಪತ್ತು ಕೊಡ ನೀರು—ಭಾವೀನೀರs—ಸೇದೋದು. ಅದಕ್ಕಂತs ನಳ ತಗೊಂಡಿಲ್ಲ ನಾನು !

ರಾಮ:– ಆನಂದದ ! ಆನಂದ ಅದ ! ಆದರ ನಿಮ್ಮ ಕೂದಲು ಮಾತ್ರ ನಿಮಗ ದಗಾ ಕೊಟ್ಟಾವ, ರಾಯರ !

ಅಣ್ಣಾ:– ಇದು ನನ್ನ ಪ್ರಕೃತಿಯ ತಪ್ಪಲ್ಲ.

ರಂಗ:– ದೇವರದs ತಪ್ಪು ಬಿಡ್ರಿ !

ಅಣ್ಣಾ:– ದೇವರದೂ ಅಲ್ಲ ! ನಮ್ಮ ಅಜ್ಜೀದು ಅನ್ರಿ ! ನಾನು ಕೂಸಿದ್ದಾಗ ಜೇನುತುಪ್ಪ ತಲೀಗೆ ಹಚ್ಚಿ ಎರೆದುಬಿಟ್ಲು ! ಅದರ ಪರಿಣಾಮ-ಇದು. ಆದರೂ ಇಂಥಾದರ ಮ್ಯಾಲ ಮೂರು ಲಗ್ನಾಗ್ಯಾವ !

ರಾಮ:– ಮೂರs ? ಅಬಬಬ, ನಾವಿನ್ನೂ ಒಂದು ಸಹಿತ ಕಂಡಿಲ್ಲ! ರಾಯರ,

ನಿಮ್ಮ ಚರಿತ್ರ ಅಂದರs ಅದ್ಭುತ ರಾಮಾಯಣs ಅದ. ಹಿಂಗ ನಿಂತ ಕಾಲ ಮ್ಯಾಲ ಮುಗಿಯೋ ಹಾಂಗ ಕಾಣೋದಿಲ್ಲ. ಸಪ್ತಾಹಧಾಂಗ ಸೌಡು ಇಟುಕೊಂಡು ಕೇಳಬೇಕು.

ಅಣ್ಣಾ:– ಹಾಂಗ ನಾ ಎಲ್ಲಾರ ಮುಂದ ಹೇಳಲಿಕ್ಕ್ಯಾ ಹೋಗೋದಿಲ್ಲ. ಅದಿರಲಿ. ಏನು ಬಂದದ್ದು ಈಗ ನೀವು ? ನಿಮ್ಮ ಹೆಸರೇನು ?

ರಾಮು:– ನನ್ನ ಹೆಸರು ರಾಮು. ಇಂವ ನನ್ನ ಸ್ನೇಹಿತ ರಂಗ. ಇವಗ ಖೋಲಿ ಬೇಕಾಗೇದ. ನೀವು ಚಾಳು ಕಟ್ಟಿಸೀರಿ ಅಂತ ತಿಳೀತು, ಬಂದಿವಿ.

ಅಣ್ಣಾ:– (ಗಂಭೀರರಾಗಿ) ವಿದ್ಯಾರ್ಥಿಗಳೊ ಸಂಸಾರಿಗಳೊ ? ಅದು ಮೊದಲು ಬೇಕು ನನಗ.

ರಂಗ:– ವಿ—ವಿ—ವಿದ್ಯಾರ್ಥಿ.

ಅಣ್ಣಾ:– ಹೇಳೋ ಮುಂದ ಹಿಂಗ ತಡವರಿಸ್ತೀರ್ಯಾಕ ?

ರಾಮು:– ಅಂವ ಯಾವಾಗರೆ ತುಸು ಗುಕ್ಕಸ್ತಾನ !

ಅಣ್ಣಾ:– ಅಂ ......ವಿದ್ಯಾರ್ಥಿನ ? (ಒಳಗಿನ ಕೋಣೆಯೊಳಗಿಂದ ಒಂದು ಬೋರ್ಡು ತಂದು ಎದುರಿಗೆ ಹಿಡಿಯುತ್ತಾರೆ.) ಓದಿರಿ.

ರಂಗ:– (ಓದುತ್ತಾನೆ) ' ಕೇವಲ ಸಂಸಾರಿಗರಿಗಾಗಿ— ಮನೆಗಳು. ವಿದ್ಯಾರ್ಥಿಗಳಿಗೆ ಕೊಡಲಾಗುವುದಿಲ್ಲ ! ಅಂಥವರು ವಿಚಾರಿಸಬಾರದು.'

ಅಣ್ಣಾ:– ಇದನ್ನ ನಿನ್ನೇ ಬರೆದು ಮುಗಿಸಿದೆ. ಇನ್ನೂ ಅಕ್ಷರ ಒಣಗಿಲ್ಲ. ಅದಕ್ಕs ಒಳಗಿಟ್ಟೇನಿ. ಎಲ್ಲಾರಿಗೂ ಹೇಳಿಕೋತ ಎಲ್ಲಿ ಕೂಡೋದು....ಹೀಂಗದ ನೋಡ್ರಿ. ವ್ಯವಹಾರದೊಳಗ ವ್ಯವಹಾರಧಾಂಗ ಇರೋದು, ಸ್ನೇಹದೊಳಗ ಸ್ನೇಹಧಾಂಗ ಇರೋದು. ಈ ವಿದ್ಯಾರ್ಥಿಗಳನ್ನ ಸಂಸಾರಿಗರನ್ನ ಒತ್ತಟ್ಟಿಗೆ ಸೇರಿಸೋದು ಅಂದರ ಗರತೇರು ಇರೋ ಓಣಿಯೊಳಗ ಅಖಂಡ ಸೌಭಾಗ್ಯವತಿಯರ್‍ನ ಇರಿಸಿಧಾಂಗ ! ಈ ವಿದ್ಯಾರ್ಥಿಗಳ ಲೀಲಾಪ್ರಸಂಗ ಬಹಳ ಕಡೆಗೆ ಕೇಳೇನಿ. ನನ್ನಲ್ಲಿ ಮಾತ್ರ ಅವರಿಗೆ ಸರ್ವಥಾ ಜಾಗಾ ಇಲ್ಲ. (ಬೋರ್ಡನ್ನು ಒಳಗಿಡಲು ಹೋಗುತ್ತಾರೆ.)

ರಾಮು:- (ಸಣ್ಣ ದನಿಯಲ್ಲಿ) ಏನು ಮಾಡ್ತೀ ಹಂಗಾರ ?

ರಂಗ:– (ಅದೇ ದನಿಯಲ್ಲಿ) ಮಾಡೋದೇನು ? ಹೇಳಿಬಿಡ್ತೇನಿ ಮದಿವಿ ಆಗೇದ ಅಂತ. ಮುಂದ ಬಂದದ್ದು ನೋಡಿಕೊಂಬೋಣಂತ !

ಅಣ್ಣಾ:– (ಹೊರಗೆ ಬಂದು) ಹೀಂಗದ ನೋಡ್ರಿ. ಇದರೊಳಗ ಭಿಡೆ-ಭಾರಣ

ಬಿಲ್‌ಕುಲ್ ಇಲ್ಲ.

ರಂಗ:– ಆದರ....ರಾಯರ, ನಿಮ್ಹಾಂಗ ನನ್ನದೂ ಅದ್ಭುತ ರಾಮಾಯಣನs ಅದ!

ಅಣ್ಣಾ:– ಅದು ಹ್ಯಾಂಗ?

ರಂಗ:– ನಾನು ವಿದ್ಯಾರ್ಥಿಯಿದ್ರೂ ಸಂಸಾರಿಗ ಇದ್ದೀನಿ!

ಅಣ್ಣಾ:– (ಕನ್ನಡಕ ಮೇಲೇರಿಸಿ, ಕಣ್ಣರಳಿಸಿ, ರಂಗನನ್ನು ದಿಟ್ಟಿಸಿನೋಡಿ) ಹೌದು?

ರಂಗ:– ಹೌದು ರಾಯರ. ಇವನ್ನ ಕೇಳಿರಿ ಬೇಕಾದರ.

ರಾಮು:– ಹೌದು ರಾಯರ. ಎಲ್ಲಾ ವಿದ್ಯಾರ್ಥಿಗಳಂತೆ ಇಲ್ಲ ಅಂವ. ಅದಕ್ಕs ಮತ್ತ ನಿಮ್ಮ ವಿಷಯ ಗೊತ್ತಿದ್ರೂ ನಾವು ಕೇಳ್ಳಿಕ್ಕೆ ಬಂದದ್ದು.

ಅಣ್ಣಾ:– (ರಂಗನನ್ನುದ್ದೇಶಿಸಿ) ಈಗಾಗಲೆ ನಿಮ್ಮ ಲಗ್ನ ಆಗೇದ ಅಂದಿರಿ?

ರಂಗ:– (ಉಗ್ಗುತ್ತ) ಹೌ–ಹೌ–ಹೌದು ರಾಯರ! ಇತ್ತೀಚೆಗೆ ಆಗೇದ!

ಅಣ್ಣಾ:– ರಜಿಸ್ಟರ್ ಆಗೇದೋ ಇಲ್ಲೋ ಈಗಿನ ಕಾಯಿದೆ ಪ್ರಕಾರ?

ರಂಗ:– ಆಗೇ....ಆಗೇದ ರಾಯರ.

ಅಣ್ಣಾ:– ನೋಡೋಣ, ತಗೀರಿ ಆ ಸರ್ಟಿಫಿಕೇಟು!

ರಂಗ:– ಅದನ್ನ ತಂದಿಲ್ಲ, ರಾಯರ.

ಅಣ್ಣಾ:– ಅದೇನs ಇರಲಿ–ನೀವು ಹೇಣ್ತಿನ್ನ ಕರಕೊಂಡು ಬಂದು ಇರಬೇಕು. ಇಲ್ಲಾ ಅಂದರ–ಜಾಗಾನೂ ಇಲ್ಲ! ನಾ ಸ್ಪಷ್ಟ ಮಾತಾಡಿದೆ ಅಂತ ಮನಸಿಗೆ ಹಚ್ಚಿಕೋಬ್ಯಾಡ್ರಿ, ಹಂ! ಹೇಳಿದೆನಲ್ಲ, ವ್ಯವಹಾರಕ್ಕ ನಾ ಬಲು ಕಠಿಣ; ಮತ್ತ ಅಷ್ಟೇ ಸುಲಭನೂ ಹೌದು! ಇದರ ಕಾಲಾಗ ವಕ್ಯಾಲಿನವರ ಜತೆಗೆ ಎಂದೂ ಹೊಂದಿಕೊಂಡು ನಡೀಲಿಲ್ಲ. ಈಗ ಈ ಮಾತು ಹೇಳ್ಳಿಕ್ಕೇನು ಬಂದsದ! ನಾ ಲಂಚ ತಿಂತಿದ್ದೆ. ಆದರ ಅನ್ಯಾಯ ದಿಂದಲ್ಲ– ಅವರ ಕೆಲಸಾ ಮಾಡಿಕೊಟ್ಟು! ಆಗ ಮಾತ್ರ ಜಡದು ತಗೋತಿದ್ದೆ! ಹೌದು.

ರಾಮು:– ಖರೆ ಅದ. ಅದರ ಹೊರ್ತು ಇಂಥಾ ಚಾಳು ಆದೀತು ಹ್ಯಾಂಗ?

ಅಣ್ಣಾ:– ಅದs ಹೇಳಿದೆನಲ್ಲ–ಬರೀ ಸಂಬಳದ ವಕ್ಯಾಲ ಬದುಕೋದs ಸಾಧ್ಯ ಇಲ್ಲ. ಇರಲಿ. ಹಂಗಾರ ಈ ಖೋಲಿ ಬೇಕು ಅಂತೀರಿ?

ರಂಗ:– ಹೌದು ರಾಯರ, ಬೇಕs ಬೇಕು. ಮತ್ತ ಇದರ ಬಾಡಿಗೀನೂ ಹೇಳಿ ಬಿಡ್ರಿ, ಕೊಟ್ಟುಬಿಡ್ತೀನಿ.

ಅಣ್ಣಾ:– ಹಂ, ಅದರ ಬಗ್ಗೆ ನನ್ನ ಕೆಲವು ನಿಯಮಗಳವ. ಇವು ಎರಡು ಖೋಲೀ ಬ್ಲಾಕು. ಬಾಡಿಗಿ ೩೦ ರೂಪಾಯಿ. ೫ನೇ ತಾರೀಕಿನೊಳಗಾಗಿ ಕೊಡತಕ್ಕದ್ದು. ಮೂರು ತಿಂಗಳ ಮ್ಯಾಲ ಬಾಡಿಗಿ ನಿಂತರ ನೋಟೀಸು ಜಾರೀ ಆಗ್ತದ. ದೀಪ ಬೇಕಾದರ ಮೀಟರ್ ಗೀಟರ್ ಎಲ್ಲ ನಿಮ್ಮ್ರದು. ಮೊದಲನೇ ಸಲ ಸುಣ್ಣ ಬಣ್ಣ ನಮ್ಮ್ರದು. ಮುಂದೆಲ್ಲ ನಿಮ್ಮ್ರದು. ರಾತ್ರಿ ೧೨ರ ಒಳಗಾಗಿ ಮನೆ ಸೇರಬೇಕು. ಆದರ ನಂತರ ಬರುವವರಿಗೆ ಕಂಪೌಂಡಿನಲ್ಲಿ ಪ್ರವೇಶ ಇಲ್ಲ. ಇಷ್ಟದ ನೋಡ್ರಿ. ನಿಮಗ ಒಪ್ಪಿಗಿದ್ದರ ಈಗಲೇ ಹೇಳಿ, ಬಾಡಿಗಿ ಕೊಟ್ಟುಬಿಡ್ರಿ. ಮತ್ತ ವಿಚಾರಮಾಡಿ ಹೇಳ್ತಿನಿ ಅಂದರ, ಈ ಜಾಗಾ ಸಿಗೋ ಭರವಸೆ ಇಲ್ಲ! ಏನಂತೀರಿ?

ರಂಗ:– ವಿಚಾರಿಲ್ಲ, ಗಿಚಾರಿಲ್ಲ. ಇವೆಲ್ಲಾ ಕರಾರು ನನಗೆ ಒಪ್ಪಿಗೆ. ಪಾವತಿ ಮಾಡಿಬಿಡ್ರಿ– ತಿಂಗಳ ಬಾಡಿಗಿ ಈಗ ಕೊಟ್ಟಽಬಿಡ್ತೀನಿ.

ಅಣ್ಣಾ:– ಬರ್ರಿ ಹಂಗಾರ, ಪಾವತಿ ಮಾಡಿಕೊಡ್ತೀನಿ.

ರಂಗ:– ನಡೀರಿ.

[ರಾಯರು ಮುಂದಾಗುತ್ತಾರೆ. ರಂಗ ಮತ್ತು ರಾಮು ಪರಸ್ಪರರನ್ನು ಸೂಚಕ ದೃಷ್ಟಿಯಿಂದ ನೋಡುತ್ತ ಅವರ ಹಿಂದಿಂದೆ ಹೋಗುತ್ತಾರೆ.]

ದೃಶ್ಯ ೩

[ರಸ್ತೆ. ರಂಗ ಮತ್ತು ರಾಮು ಅಣ್ಣಾರಾಯರ ಮನೆಯ ಕಡೆಯಿಂದ ಬರುತ್ತಾರೆ.]

ರಾಮು:– ಅಲ್ಲೋ ಮೂರ್ಖಾ, ಆಗಿಂದಾಗಽ ಬಾಡಿಗಿ ಕೊಟ್ಟಽ ಬಿಡಬೇಕೇನು? ಈಗ ಹೆಣ್ತಿನ್ನ ಎಲ್ಲಿಂದ ತರ್ತಿ ತಗೊಂಡು ಬಾ.

ರಂಗ:– ಹಾಸಿಗಿ ತಂದೊಗೆದು ಕೂತುಬಿಡ್ತೀನಿ. ಈಗಿನ ಕಾಯಿದೇ ಪ್ರಕಾರ ಹೊರಗಂತೂ ಹಾಕಲಿಕ್ಕೆ ಬರೋದಿಲ್ಲಽ?

ರಾಮು:– ಹೆಣ್ತಿನ್ನ ತೋರಿಸದ ಮೊದಲು ಅಂವ ನಿನ್ನ ಒಳಗಽ ಬಿಡೋದಿಲ್ಲ.

ತಂದೇನ ತೋರಿಸು, ಇಲ್ಲಾ ಶ್ರಾದ್ಧಮಾಡು ಆ ಪೈಕಿ ಇದ್ದಾನವ! ನೋಡಿದಿಲ್ಲೊ ಅವನ ಮಾತು, ಅವನ ವೇಷ, ಅವನ ಹುಚ್ಚುಚ್ಚು!

ರಂಗ:– ಈ ಸರಕಾರಿ ನೌಕರರು ರಿಟೈಯರ್ ಆದರು ಅಂದರ ಹಿಂಗs ಆಗ್ತಾರ! ಯಾಕೋ ಏನೊ!

ರಾಮ:– ಅವರಿಗೆ ಎಲ್ಲದರದು ಭುಗಲು ಹೊಗ್ತದ! ಸಾಯೋ ಭುಗಲು, ಆದಾಯ ಕಡಿಮಿ ಆದ ಭುಗಲು, ಖರ್ಚಾಗ್ತದಲ್ಲ ಅಂಬೋ ಭುಗಲು, ಹೆಂಡಿರು–ಮಕ್ಕಳು ಬ್ಯಾಸರೀತಾರ ಅಂಬೋ ಭುಗಲು, ಮಂದಿ ಮರ್ಯಾದಿ ಕೊಡೋದಿಲ್ಲ ಅಂಬೋ ಭುಗಲು! ಅದಕ್ಕs ಅವು ಎಬ್ರಾಶಿ ಹಾಂಗ ಆಗಿ ಕೂಡ್ತಾವ! ಇವ ರಿಟಾಯರ್ಡ್ ಮಾಮಲೇದಾರಂತ. ಅವನ ಸೂರ್ಯ ನಮಸ್ಕಾರ, ಅವನ ಔಷಧ ಬಾಟ್ಲಿ, ಅವನ ಲಂಡ ಚಣ್ಣ, ಅಹಹ! ವಿಕ್ಷಿಪ್ತ ಅಂದರ ಮುಗೀತಪಾ. ನೀ ದಿನಾ ಅವನ ಚರಿತ್ರ–ಶ್ರವಣ ಮಾಡಿಕೋತ ಕೂಡಬೇಕಾಗ್ತದ.

ರಂಗ:– ನಾ ಸ್ಪಷ್ಟ ಹೇಳೇಬಿಡ್ತೀನಿ, ನಮಗ ಅಭ್ಯಾಸಿರ್ತದ ಅಂತ.

ರಾಮ:– ಅದನ್ನೇನೋ ನೀ ಹೇಳಬಹುದು. ಆದರ ಈಗ ಹೆಣ್ತಿನ್ನ ಎಲ್ಲಿಂದ ತರ್ತಿ? ಅದನ್ನ ನೋಡಿಕೊ.

ರಂಗ:– ಅದs ದೊಡ್ಡ ಪೇಚು ಬಂಗsದ. ಸೂಟಿಯೊಳಗ ಹೋದಾಗ ಮದಿವಿ ಆಗಿಬಿಟ್ಟಿದ್ದರ ಈ Problem ಇರ್ತಿದ್ದಿಲ್ಲ. (ಆಲೋಚನೆಗೊಳಗಾಗಿ, ಏನೋ ಹೊಳೆದಂತೆನಿಸಿ) ರಾಮ್ಯಾ, ಈ ಯುಕ್ತಿ ಹ್ಯಾಂಗಾಗ್ತದ ನೋಡು.

ರಾಮ:– ಏನು ಬಂತು ತಲ್ಯಾಗ?

ರಂಗ:– (ಮುಗುಳು ನಗೆ ನಗುತ್ತ) ಇದು ಸ್ವಲ್ಪ ನಾಟಕಧಾಂಗದ.

ರಾಮ:– ಅಂದರ? ಯಾವುದsರೆ ಹೆಣ್ಣು ತಂದು, ಇದು ನನ್ನ ಹೆಣ್ತಿ ಅಂತ ಬತಾವಣೆ ಮಾಡsವೇನು?

ರಂಗ:– ಹಾಂಗಿಲ್ಲ.

ರಾಮ:– ಮತ್ತ ಹ್ಯಾಂಗಪಾ? ಗೌರೀ ಕೂಡಿಸಿಧಾಂಗ ಒಂದು ಗೊಂಬಿನ್ನ ತಂದು ಕೂಡಿಸsವೇನು ಹೆಣ್ತಿ ಅಂತ?

ರಂಗ:– ಅದನ್ನ ನನ್ನ ಹೆಣ್ತಿ ಅಂತ ನಂಬುವಷ್ಟು ಹೆಡ್ಡ ಇದ್ದಾನೇನವ?

ರಾಮ:– ಹೆಂಗಾರ?

ರಂಗ:– ಕಲ್ಪನಾಮಾಡು.

ರಾಮು:– ಉಂ ಹುಂ. ನಿನ್ನ ತಲ್ಯಾಗ ಬಂದದ್ದನ್ನ ನೀನೇ ಹೇಳಬೇಕು.

ರಂಗ:– ಅದು ನಿನಗ ಒಪ್ಪಿಗಿ ಆಗೋದಿಲ್ಲ. ಆದರ ನಾ ಅದನ್ನ ಮಾಡೇ ನೋಡ್ತನ.

ರಾಮು:– ಮಾಡಲ್ಲ, ಯಾರು ಬ್ಯಾಡಂತಾರ? ಆದರ ಏನು ಅಂಜೋದರ ಹೇಳಲ್ಲ ?

ರಂಗ:– ಜ್ಯೂನಿಯರಿನೊಳಗ ಕುಮಾ ದೇಶಪಾಂಡೆ ಅಂತ ಇದ್ದಾಳಲ್ಲೊ ?

ರಾಮು:– ಹೌದು, ಇದ್ದಾಳ. ಅ... ಕೇಳತೀಯೇನು ಹೆಣ್ತಿ ಆಗು ಅಂತ ? ಮಂಗ್ಯಾ, ಯಾತರಲ್ತರೆ ಹೊ...ಕೊಂಡೀ!

ರಂಗ:– ಪೂರಾ ಹೇಳೋತನಕ ಕೇಳೋ. ಆಕಿ ತುಸು Sprot ಇದ್ದಾಳೇನಪಾ.

ರಾಮು:– ಇದು ಇಡೀ ಕಾಲೇಜಿಗೇ ಗೊತ್ತದ.

ರಂಗ:– ಮತ್ತ ಆಕಿ ನನ್ನ ಜತಿಗೆ ಗ್ಯಾದರಿಂಗಿನ ನಾಟಕದೊಳಗ ಪಾರ್ಟ ಮಾಡ್ಯಾಳ.

ರಾಮು:– ಅದೂ ನನಗ ಗೊತ್ತದ. ಮುಂದೇನು ? ಆಕಿನ್ನ ಹ್ಯಾಂಗ ಕೇಳೊತನೊ ?

ರಂಗ:– ಆಕಿನ್ನ ಅಲ್ಲೊ, ಆಕೀ ಪತ್ತಲಾ ಕೇಳೋದು !

ರಾಮು:– ಅಂದರ ಪತ್ತಲಾ ತೋರಿಸಿ ಸಂಸಾರಿಗ ಅಂತ ನೀ ಬತಾವಣಿ ಮಾಡತನs ? ಎಲಾ Rascal ! ಆಕ್ಯಾದರೂ ಕೊಟ್ಟಾಳು ಹ್ಯಾಂಗ?

ರಂಗ:– "ಹಿಂಗಂತೂ ಒಂದು ಪ್ರಸಂಗ ಬಂದsದ. ಎಂಟು ದಿವಸದ ಮಟ್ಟಿಗೆ ನಿನ್ನ ಪತ್ತಲಾ ಕೊಡು. ಮುಂದ ನಿನಗದನ್ನ ನಾ ವಾಪಸ್ ಮಾಡ್ತೀನಿ" ಅಂತ ಹೇಳಿ ತರೋದು. ಅದನ್ನ ಖೋಲಿಯೊಳಗ ಒಣಹಾಕ್ಕೊಂಡು ಕೂಡೋದು! ಮತ್ತ ಆ ಮಾಮ್‌ಲೇದಾರ ಬಂದಾಗೆಲ್ಲ ಅದನ್ನs ತೋರಿಸಿ ಕೋತ ಹೋಗೋದು !

ರಾಮು:– ಇದಕ್ಕ ಸಂಭಾವಿತಗಿರಿ ಅಂತಾರೇನು ? ಒಳ್ಳೇದು. ಅಂಥಾಂಗ **ನೀ** ಮಾಡಬಹುದು. ಆಕಿ ಕೊಡ್ತಾಳ ಅಂತ ಯಾತರ ಮ್ಯಾಲಿಂದ? ಆಕೀ ಪತ್ತಲಾ ತಂದು ನಿನ್ನ ಖೋಲಿಯೊಳಗ ಒಣಹಾಕಿದರ, ಮುಂದಿ ಏನು ತಿಳಕೊಂಡಾರು ? ಎಲ್ಲ್ಯಾದರs ಒಂದು ಹೋಗಿ ಒಂದು ಆಗೋದು !

ರಂಗ:– ಆ ಪತ್ತಲದ ಮ್ಯಾಲ ಆಕೀ ಹೆಸರು ಬರದಿರ್ತsದೇನು ಒಂದು ಹೋಗಿ ಒಂದು ಆಗಲಿಕ್ಕೆ ?

ರಾಮುಃ– ಆಲ್ಲೊ, ಮೊದಲು ಆಕಿ ಕೊಡೋದು ಹೇಳೊ !

ರಂಗ:– ನಾ ತರ್ತ್ತೀನಿ. Betting ಏನಿದಕ್ಕ? ಯಾರಿಗೂ ತಿಳಿsಧಾಂಗ ತರೋದು, ಯಾರಿಗೂ ತಿಳಿsಧಾಂಗ ಕೊಟ್ಟುಬಿಡೋದು.

ರಾಮು:– ತಿರುಗಿ ಕೊಟ್ಟ ವ್ಯಾಲ ಮುಂದೇನು ಮಾಡsವ ?

ರಂಗ:– 'ಹೆಣ್ತಿನ್ನ ತವುರು ಮನೀಗೆ ಕಳಿಸಿದೆ' – 'ತಾಯಿಗೆ ಜಡ್ಡಾತು' – ಏನಾದರೂ ಹೇಳೋದು, ಆತು.

ರಾಮು:– ನೀ ಹಾಳು ಭಾಂವಿ ಬೀಳು. ವಿನಾಕಾರಣ ಆ ಸಂಭಾವಿತ ಹುಡುಗೀ ಹೆಸರು ಕೆಡಿಸಬ್ಯಾಡ. ನೀ ಹೇಳಿಕೇಳಿ ಮಂಗ್ಯಾನಂಥವ! ನಿನ್ನಂಥ Light hearted Irresponsible fellow ಅಂದರ ನೀನೇ! ಮೈ ವ್ಯಾಲ ಪೇಚು ಬಂದರ ಏನು ಮಾಡ್ತೀ? ಅಥವಾ ನಿಮ್ಮಿಬ್ಬರ ವ್ಯಾಲ ಕೆಟ್ಟ ಅಪವಾದ ಬಂದರ ಏನು ಮಾಡ್ತಿ ?

ರಂಗ:– ಹಾಂಗೇನಾದರೂ ಆತು ಅಂದರ ಆಕೀನ್ನs ಮದಿವಿ ಮಾಡಿಕೊಂಡು ಬಿಡ್ತೀನಿ?

ರಾಮು:– ನಿನಗೇನು .... ಇದೆಲ್ಲ ಬಹಳ ಸುಲಭ ಅಂತ ಅನಿಸೇದೇನು?

ರಂಗ:– ನೀ ಬಹಳ Pessimistಪಾ! ನನ್ನ ಧೈರ್ಯ ನಿನಗ ಬರೋದs ಶಕ್ಯಿಲ್ಲ. ನೀನು ಸುಮ್ಮನs Silent observer ಆಗಿರು. ನಾ ಎಲ್ಲಾ ಮಾಡ್ತಿನಿ. ಹುಂ, ನಡಿ ಇನ್ನ. ನೀ ಎಲ್ಲಿಗೆ ಹೋಗಬೇಕು ?

ರಾಮು:– ನಾ ಕಾಲೇಜ್ ಲೈಬ್ರರೀಗೆ ಹೊರಟೀನಿ.

ರಂಗ:– ನೀ ಹೋಗು. ನಾಡದು ಈ ಖೋಲಿಗೆ ಬಾ. ನಾ ಆ ಹೊತ್ತಿಗೆ ಬಂದಿರ್ತೀನಿ.

ರಾಮು:– ಒಳ್ಳೇದು, ಹುಷಾರ್ ಹಂ!

ರಂಗ:– ನೀ ಅದನ್ನ ನನಗ ಹೇಳsಬ್ಯಾಡ.

(ಇಬ್ಬರೂ ಬೇರೆ ಬೇರೆ ಹಾದಿಯಿಂದ ಹೋಗುತ್ತಾರೆ.)

ದೃಶ್ಯ ೪

[ರಂಗನ ಕೋಣೆ. ಒಂದು ಕಾಟು, ಅದರ ಮೇಲೆ ಹಾಸಿಗೆ. ಎರಡು ಕುರ್ಚಿಗಳು, ಒಂದು ಟೇಬಲ್– ಅದರ ಮೇಲೆ ಬರೆಯುವ ಸಾಹಿತ್ಯ, ಪುಸ್ತಕಗಳು. ಒಂದು ತಂತಿಯನ್ನು ಉದ್ದಕ್ಕೂ ಕಟ್ಟಿ, ಅದರ ಮೇಲೊಂದು ಪತ್ತಲ, ರಂಗನ ಬಟ್ಟೆಗಳು, ತೂಗುಹಾಕಿವೆ. ಟೇಬಲ್ ಕೆಳಗೆ ಚಪ್ಪಲಿ, ಶೂಸ್. ಕಾಟಿನ ಹತ್ತಿರದ ಗೋಡೆಗೆ ಆನಿಸಿ ಇನ್ನೊಂದು ಟೇಬಲ್, ಅದರ ಮೇಲೆ ಹಜಾಮತಿ ಸಾಮಾನು, ಕನ್ನಡಿ, ಟೂತ್‌ಪೇಸ್ಟ್, ಬ್ರಶ್, ಆಯಿಲ್ ಇತ್ಯಾದಿ. ತೆರೆ ಮೇಲೆದ್ದಾಗ ರಂಗ ಕಾಟಿನ ಮೇಲೆ ಬೋರ್ಲು ಬಿದ್ದುಕೊಂಡು ಓದುತ್ತಿದ್ದಾನೆ. ಹೊರಗೆ ರಾಮುನ ಕೂಗು ಕೇಳಬರುತ್ತದೆ.]

ರಾಮು:– ರಂಗಾ, ಏ ರಂಗಾ ?

ರಂಗ:– ಹಂ, ಬಂದೆ. (ಎದ್ದು ಹೋಗಿ ಬಾಗಿಲು ತೆರೆಯುತ್ತಾನೆ. ರಂಗನು ರಾಮುನೊಂದಿಗೆ ಒಳಗೆ ಬರುತ್ತಾನೆ. ರಾಮು ಪತ್ತಲವನ್ನು ನೋಡುತ್ತ ನಿಲ್ಲುತ್ತಾನೆ.) ಯಾಕೊ, ಅದನ್ಯಾಕ ನೋಡ್ತ ನಿಂತೀ ?

ರಾಮು:– ಅಲ್ಲ, ಹೀಂಗs ಎಷ್ಟು ದಿವಸ ಅಂತ ಇಡತಿವನಪಾ ನೀನು ? ಈಗ ಏನಿಲ್ಲಂದರೂ ೧೫ ದಿನ ಆಗ್ತ ಬಂತು.

ರಂಗ:– ಅದs ಪಿಕಲಾಟ ಬಂದsದ. ಕೂಡೋ ರಾಮು. (ರಾಮು ಕಾಟಿನ ಹತ್ತಿರ ಕುರ್ಚಿಯನ್ನೆಳೆದು ಕೂಡುತ್ತಾನೆ. ರಂಗ ಕಾಟಿನ ಮೇಲೆ ಕೂಡುತ್ತಾನೆ.) ಈ ಪತ್ತಲಾ ಇಸಗೊಂಡು ಬಂದ ದಿವಸದಿಂದ ಆ ದೇಶಪಾಂಡೆ ಕ್ಲಾಸಾಗ ಮಾರೀನs ತೋರಿಸಿಲ್ಲ. ಕ್ಲಾಸಿನೊಳಗ ಸಹಿತ ನೋಡೀ ನೋಡಧಾಂಗ ಇದ್ದೀನಿ. ಆಕಿ ಸಿಟ್ಟಿಗೆದ್ದು ಖೋಲಿಗೇ ಎಲ್ಲಿ ಬಂದುಬಿಡ್ತಾಳೊ ಅಂತ ಹೆದರಿಕ್ಯಾಗೇದ.

ರಾಮು:– ಆಕಿನ್ನ ಹ್ಯಾಂಗೋ ಸಮಾಧಾನ ಮಾಡಬಹುದು. ಆದರ ನಿಮ್ಮ ಮನೀ ಮಾಲಕ ಏನಂತಾನಪಾ ?

ರಂಗ:– ಅಂವ ಯಾವುದೋ ಬ್ಯಾರೆ ಗಡಿಬಿಡಿಯೊಳಗ ಇದ್ಧಾಂಗ ಕಾಣಿಸ್ತದೋ! ಆದರೂ ಈ ಹದಿನೈದು ದಿವಸದೊಳಗ ಎರಡು ಸಾರೆ ಬಂದು ನೋಡಿ

ಕೊಂಡು ಹೋದ. ಅಂವ ಬಂದಾಗೆಲ್ಲ--'ಹೆಣ್ತಿ ಕ್ಲಾಸಿಗೆ ಹೋಗ್ಯಾಳ. ಇಡೀ ದಿವಸ ಆಕೀಗೆ ಹೊರಗಃ ಕೆಲಸಿರ್ತದ' ಹಿಂಗs ಏನೇನಾರ ಥಾಪ್ ಜೊಡಕೋತ ಬಂದೀನಿ. ಆದರ ಇದೇನು ಬಹಳ ದಿವಸ ನಡೀಲಾರದು ಅಂತ ಅನಿಸ್ತದ. ಯಾಕಂದರ ಅಂವಗ ಇದರದು ತುಸು ಸಂಶಯ ಬಂಧಾಂಗ ಕಾಣಿಸ್ತದ. ಚಹಾ ಮಾಡಲೇನು ?

ರಾಮು:– ಹಾಲು ಗೀಲು ಅದ ಏನು ?

ರಂಗ:– ಎಲ್ಲಾ ಅದ ಒಳಗ.

ರಾಮು:– ಎಲ್ಲಿ ಮಾಡ್ತೀ ಬಿಡು.

ರಂಗ:– ಅಂಗಡಿಯಿಂದಃನs ತರಿಸ್ತೀನಿ ಹಂಗಾರ.

ರಾಮು:– ತರಿಸು.

[ರಂಗ ಚಹ ಹೇಳಲು ಹೋಗುತ್ತಾನೆ, ರಾಮು ಟೇಬಲ್ ಮೇಲಿನ 'ಫಿಲ್ಮ್ ಫೇರಿ'ನ ಸಂಚಿಕೆಯನ್ನು ತಂದು ಚಿತ್ರಗಳನ್ನು ನೋಡುತ್ತ ಕೂಡುತ್ತಾನೆ. ೨-೩ ನಿಮಿಷದಲ್ಲಿ ರಂಗ ಮಾಣಿಯೊಡನೆ ಬರುತ್ತಾನೆ. ಬರುವಾಗ ಸಿಗರೇಟ್ ಪ್ಯಾಕೆಟ್ ತರುತ್ತಾನೆ. ಮಾಣಿ ಚಹ ಕೊಡುತ್ತಾನೆ. ಇಬ್ಬರೂ ಚಹ ಕುಡಿಯುತ್ತಿರುವಾಗ ಕುಮಾ ದೇಶಪಾಂಡೆ ಬರುತ್ತಾಳೆ. 'ನಮಸ್ತೆ' 'ನಮಸ್ತೆ' ಮುಗಿಯುತ್ತದೆ.]

ರಂಗ:– ಓಹೊ! ಬರ್ರಿ, ಬರ್ರಿ. (ಕೈಯೊಳಗಿನ ಚಹದ ಕಪ್ಪನ್ನು ಟೇಬಲ್ ಮೇಲಿಟ್ಟು ಆಕೆಗೆ ಕುರ್ಚಿ ತಂದು ಹಾಕುತ್ತಾನೆ. ಆಕೆ ಕೂಡುತ್ತಾಳೆ.) ನಾ ಇದ್ದ ಬ್ಲಾಕs ನಿಮಗ ಬರಾಬ್ಬರಿ ಹ್ಯಾಂಗ ಗೊತ್ತಾತು ? ಯಾರನ್ನಾದರೂ ಕೇಳಿದಿರೇನು ?

ಕುಮಾ:– ಇಲ್ಲಾ. ನೀವು ಚಹಾದಂಗಡೀ ಹುಡುಗನ್ನ ಕರಕೊಂಡು ಹೊರಟಿದ್ದಿರಿ. ಹಿಂದಿನಿಂದ ನಾ ಬರ್ತಿದ್ದೆ. ನೀವು ನನ್ನ ನೋಡಲಿಲ್ಲ. ನಾ ನಿಮ್ಮನ್ನ ನೋಡಿದೆ.

ರಂಗ:– ನಾ ನೋಡಲಿಲ್ಲ. ಏ ಮಾಣಿ, ಇನ್ನೊಂದು ಚಹ–ನೀವು ಚಹ ಕುಡಿಯುವುದಿಲ್ಲಲ್ಲ–ಕಾಫಿ ತಗೊಂಡು ಬಾ. (ಮಾಣಿ ಹೋಗುತ್ತಾನೆ. ರಂಗ ತುಸು ಅಂತರದ ಮೇಲೆ ಕುಮಾನ ಎದುರಿಗೆ ನಿಂತು) ನಮ್ಮದು ತಪ್ಪಾಗೇದ, ಕ್ಷಮಿಸಿರಿ ! ಎಂಟು ದಿವಸದೊಳಗಃ ಪತ್ತಲಾ ತಿರುಗಿ ತಂದು ಕೊಡ್ತೀನಿ ಅಂತ ಹೇಳಿದೆ. ಆದರ ಊರಿಂದ ನಮ್ಮ ತಂಗೀ ಪತ್ತಲಾ ಇನ್ನೂ ಬರಲೇ ಇಲ್ಲ! Very sorry, ಹಂ!

ರಾಮು:– ಅಂದರ ಬರೆದಿದ್ಯೇನು ಊರಿಗೆ ಪತ್ತಲಾ ಕಳಿಸಿಕೊಡ್ರಿ ಅಂತ? ಮಗನs, ಸುಮ್ಮನs ಬಂಡಲ್ ಹೊಡೀಬ್ಯಾಡ! ಮಿಸ್ ದೇಶಪಾಂಡೆ, ನಿಮಗ ಏನು ಹೇಳಿ ಪತ್ತಲಾ ತಂದಾನ ಇವ?

ಕುಮಾ:– ಮೊದಲು, ಊರೊಳಗ ಅಮೆಚ್ಯುರಿನವರದೊಂದು ನಾಟಕ ಅದ, ಅದರೊಳಗಿನ ಸ್ತ್ರೀ ಪಾರ್ಟಿಗೆ ಪತ್ತಲ ಬೇಕು ಅಂತ ಹೇಳಿದರು. ಅದನ್ನ ನಿರಕಿಗೇ ಹಚ್ಚಿ ಕೇಳಿದಾಗ ಖರೇ ಕಾರಣ ಹೇಳಿದರು. ಆದರ ೮ ದಿವಸ ದೊಳಗ ತಿರುಗಿ ಕೊಡ್ತೇನಿ ಅಂದವರು ೧೫ ದಿವಸಾದರೂ ಮಾರೀನs ತೋರಿಸಿಲ್ಲ. ಇದೆಲ್ಲ ಮಂದಿಗೆ ತಿಳಿದರ ಸುಮ್ಮಸುಮ್ಮನ ಹರ್ಲಿ ಆಗೋ ದಿಲ್ಲೇನ್ರಪಾ? ಕೊಡೋ ಮುಂದ ಏನು ಬುದ್ಧಿಗೆ ಮಂಕು ಕವೀತೋ, ಕೊಟ್ಟುಬಿಟ್ಟೆ. ಆದರ ದಿನಾಲು ಜೀವಕ್ಕ ದುಗುದುಗಿ. (ಮಾಣಿ ಕಾಫಿ ತರುತ್ತಾನೆ.)

ರಂಗ:– (ಮಾಣಿಗೆ) ಅವರಿಗೆ ಕೊಡು. (ಮಾಣಿ ಕೊಡುತ್ತಾನೆ. ಕುಮಾ ಕಾಫಿ ಕುಡಿಯುತ್ತಿರುವಾಗ ರಂಗನೂ ತನ್ನ ಕಪ್ಪನ್ನು ತಂದು ಕಾಟಿನ ಮೇಲೆ ಕುಳಿತು ಕುಡಿಯುತ್ತಿರುತ್ತಾನೆ.)

ರಾಮು:– ಅಲ್ರಿ, ಮಿಸ್ ದೇಶಪಾಂಡೆ, ಇವನ ಸ್ವಭಾವ ನಿಮಗ ಗೊತ್ತs ಅದಲ್ಲ!

ಕುಮಾ:– ಓ ಗೊತ್ತದ ಬಿಡ್ರಿ. ಈಗ ಮೂರು ವರ್ಷ ಕಾಲೇಜಿನೊಳಗ ಕೂಡೇ ಇದ್ದೀವಿ.

[ಚಹಾ ಕುಡಿಯುವುದು ಮುಗಿಯುತ್ತದೆ. ಮಾಣಿ ಕಪ್ಪು ಬಸಿಗಳನ್ನು ಒಯ್ಯುತ್ತಾನೆ.]

ರಾಮು:– ಯಾವುದರೊಳಗೂ ಇಂಥವೇ ಇವನ ಗೊಂದಲಗೇಡಿತನ! ಸುಸೂತ್ರ ಇಲ್ಲವೇ ಇಲ್ಲ. ಮತ್ತ ಅದರೊಳಗೇನಾದರೂ ದುಷ್ಟ ಉದ್ದೇಶ ಇರ್ತದ ಅಂದ್ರ ಹಾಗೂ ಇಲ್ಲ. ಈ ರಂಗ್ಯಾಗ ನಾಟಕದೊಳಗಿನ ಹಾಂಗ ಏನಾದರೂ ಚಮತ್ಕಾರ ಮಾಡಿತೋರಿಸೋ ಹವ್ಯಾಸ! ಅವು ಒಮ್ಮೊಮ್ಮೆ ಹೀಂಗ ಮೈಮ್ಯಾಲ ಬರ್ತಾವ!

ರಂಗ:– ಚಮತ್ಕಾರೇನು ಸುಡ್ತದ. ಅದು ಏನಾತು ಮಿಸ್ ದೇಶಪಾಂಡೆ, ಎಲ್ಲೆಲ್ಲೂ ಖೋಲಿ ಸಿಗಲೊಲ್ಲದು. ಮತ್ತ ಈ ಚಾಳಿನ ಮಾಲಕ ಖೋಲಿ ಗಳಿದ್ದರೂ ವಿದ್ಯಾರ್ಥಿಗಳಿಗೆ ಪ್ರವೇಶ ಇಲ್ಲ ಅಂತ ಕೂತ. ಅಲ್ರಿ, ಎಲ್ಲಾ

ಸಂಸಾರಿಗರೂ ಸಂಭಾವಿತರೇನೋದಿಲ್ಲ; ಮತ್ತ ಎಲ್ಲಾ ವಿದ್ಯಾರ್ಥಿಗಳೂ ಲಫಂಗರಿರೋದಿಲ್ಲ !

ರಾಮು:– ರಂಗ್ಯಾ, ನೀ ಸಂಭಾವಿತ, ಸಜ್ಜನ ಹುಡುಗ, ಅಂಬೋದು ಕಾಲೇಜಿಗೇ ಗೊತ್ತಿದ್ದೀತು, ಊರೊಳಗಿನವರಿಗೇನು ಗೊತ್ತಿರಬೇಕಪ್ಪಾ ? ಯಾವುದೋ ಚಾಳಿನೊಳಗ ಯಾರೋ ವಿದ್ಯಾರ್ಥಿಗಳು ಏನೋ ಮಾಡಿದ್ರಾರ ! ಅವು ಎಲ್ಲಾರಿಗೂ ಬಡಕೋತಾವ.

ಕುಮಾ:– ಅದೇನಾದರೂ ಆಕ್ಕೋವಲ್ಲದ್ಯಾಕ. ಮಿಸ್ಟರ್ ರಂಗರಾಯರ ಮ್ಯಾಲ ಉಪಕಾರ ಮಾಡಲಿಕ್ಕೆ ಹೋಗಿ ನಾ ಸಿಕ್ಕಿಕೊಂಥಾಂಗ ಆಗೇದ. ಈಗಾತಲ್ಲ? ಆ ಪತ್ತಲಾ ತೆಗದು ಕೊಟ್ಟುಬಿಡ್ರಿ. ಅದನ್ನ ಒಯ್ಯಲಿಕ್ಕೆ ಚೀಲಾನೂ ತಂದೀನಿ.

ರಂಗ:– ಪತ್ತಲಾ ಕೊಡ್ತೀನಿ. ಕೂಡ್ರಿಲ್ಲ, ಅವಸರ್ಯಾಕ ? ಇವತ್ತಂತೂ ಆದಿತ್ಯವಾರ. (ಎದ್ದು ಹೋಗಿ ಪತ್ತಲವನ್ನು ತಂತಿಯ ಮೇಲಿಂದ ಎಳೆದು ಮಡಿಚಿ ಕೊಡುತ್ತಾನೆ. ಕುಮಾ ಅದನ್ನು ಕೈಚೀಲದಲ್ಲಿ ಸೇರಿಸುತ್ತಾಳೆ.)

ರಾಮು:– ಕೂಡ್ರಿ ಮಿಸ್ ದೇಶಪಾಂಡೆ. ಇನ್ನಂತೂ ಏನೂ ಹೆದರಿಕಿಲ್ಲ. ಬೇಕಾದವರು ಬರವಲ್ಲರ್ಯಾಕ !

ಕುಮಾ:– ನಾವು ಹೆಣ್ಣು ಹುಡುಗರು ಜನಾಪವಾದಕ್ಕ ಬಹಳ ಹೆದರಿ ನಡೀಬೇಕಾಗ್ತದ್ರಿ. ಸ್ವಲ್ಪ Freely ಮಾತಾಡಿದರೂ ಬೇಕಾದ ಕುತರ್ಕ ಮಾಡೋ ಜನರಿದ್ದಾರೆ ! ನಾ ಹಿಂಗ ಪತ್ತಲಾ ಕೊಟ್ಟಿದ್ದೆ ಅಂತ ನಮ್ಮ ಕಾಲೇಜಿನ ಹುಡುಗರಿಗೆ ತುಸು ಹಾರಿಕೀ ಸುದ್ದಿ ಬಡೀಲಿ, ನನ್ನ ಫಜೀತಿ ಯಾತಕ್ಕೂ ಬ್ಯಾಡ.

ರಾಮು:– ಛೆ, ಛೆ, ಹಾಗೆಂದೂ ನಾವು ಮಾಡಗೊಡೋದಿಲ್ಲ ಬಿಡ್ರಿ. ಈಗ ಈ ಸುದ್ದಿ ನನ್ನ ಹೊರ್ತು ರಂಗ ಯಾರಿಗೂ ತಿಳೀಗೊಟ್ಟಿಲ್ಲ. ನೀವು ಬಹಳ Sport ಅಂತs ಮತ್ತ .... ಹಿಂಗ ಪತ್ತಲಾ ಕೊಡಲಿಕ್ಕೆ ತಯಾರಾದಿರಿ.

ಕುಮಾ:– ಏನು ಮಾಡೋದು? ಅವತ್ತು ರಂಗರಾಯರು ಅಗದೀ ದೈನಾಸ ಪಟ್ಟು ಹೇಳಿಕೊಂಡರ್ರಿಪಾ. ನನಗ ಇಲ್ಲಾ ಅನಲಿಕ್ಕೇ ಆಗವೊಲ್ಲದು !

ರಂಗ:– (ಟೇಬಲ್ ಮೇಲಿನ ಸಿಗರೇಟ್ ಪ್ಯಾಕೆಟ್ ತೆಗೆದು ಅದರೊಳಗಿನ ಸಿಗರೇಟ್ ಮುಂದೆಳೆದು ರಾಮುನೆದುರು ಹಿಡಿಯುತ್ತಾನೆ. ತಾನೊಂದನ್ನು ಹೊತ್ತಿಸಿ ರಾಮುನದನ್ನೂ ಹೊತ್ತಿಸುತ್ತಾ ಬಂದು ಮಂಚದ ಮೇಲೆ ಕೂಡುತ್ತಾ) ಈಗ ಒಮ್ಮೆಲೇ ಆ ಮನೇ ಮುದುಕ ಬಂದರ ಹ್ಯಾಂಗೊ ರಾಮೂ ?

ರಾಮು:— ನಾನೂ ಆಗಿನಿಂದ ಅದನ್ನs ವಿಚಾರ ಮಾಡ್ತಾ ಇದ್ದೇನಿ.

ಕುಮಾ:— (ಗಾಬರಿಗೊಂಡು) ಅಂ, ಈವನೆದುರಿಗೆ ಇನ್ನೇನಾದರೂ ಹೇಳಿಟ್ಟೀರೇನು ಮತ್ತ?

ರಾಮು:— ಛೆ ಛೆ, ಹಾಂಗೇನೂ ಹೇಳಿಲ್ಲ ಬಿಡ್ರಿ. ಆದೇನಾಗೇದ—ಈ ರಂಗ್ಯಾ ನಿಮ್ಮ ಪತ್ತಲಾ ತಂದು ಒಣಹಾಕಿ, ಆ ಮುದುಕ ಬಂದಾಗೆಲ್ಲ ಹೆಣ್ತಿ ಬದಲಾಗಿ ಅದನ್ನs ತೋರಿಸಿಕೋತ ಕೂತಾನ! (ಕುಮಾ ನಗುತ್ತಾಳೆ.) ಈಗ ಆ ಮುದುಕಗ ತುಸು ಸಂಶಯ ಬಂಧಾಂಗ ಕಾಣಿಸ್ತದ. ಬರೋದs ಅಲ್ಲs ಮತ್ತ? ಬಹಳ ವಿಕ್ಷಿಪ್ತ ಇದ್ದಾನ ಮುದುಕ!

ರಂಗ:— ಇನ್ನೊಂದು ಅವನ ಚಾಳಿ ಅಂದರ ಯಾವಾಗಂದರ ಆಗ ಧುಡುಮ್ಮನs ಒಳಗ ಬಂದುಬಿಡ್ತಾನ!

ರಾಮು:— ಈಗೇನಾರೆ ಅಂವ ಹಾಂಗ ಬಂದ ಅಂದರ .... ನೀವು ತುಸು .... ಅಂದರ ....

ಕುಮಾ:- ಅಂದರೇನದು?

ರಂಗ:— ಅಂದರ ಚಾತುರ್ಯದಿಂದ ....

ರಾಮು:— ಅಂದರ ಪ್ರಸಂಗ ತಿಳಕೊಂಡು....

ಕುಮಾ:— ಹೋಗ್ರಿ! ಅಂದರ ನಾ ಇವರ ಹೆಣ್ತಿ ಅಂತ ಹೇಳಲೇನು? ಛಲೋ ಅದ!

ರಾಮು:— ಊಂ, ಹುಂ. ನೀವು ಹೇಳೋ ಕಾರಣಾನs ಇಲ್ಲ. ನೀವು ಮಾತs ಆಡಬ್ಯಾಡ್ರಿ!

ರಂಗ:— ಅಂವ ಹಂಗೆಲ್ಲ ಯಾಕ ಕೇಳ್ಳಿಕ್ಕೆ ಹೋದಾನು? ಸುಮ್ಮನs ಬಂದು ಕೂಡ್ತಾನ. ಆಗ ನಾ ಒಂದು ಯುಕ್ತಿ ಮಾಡ್ತೇನಿ. ನಿಮಗ ಚಹಾ ಮಾಡ್ರಿ ಅಂತ ಹೇಳ್ತೇನಿ. ನೀವು ಒಳಗ ಹೋಗಿ ಚಹಾ ಮಾಡ್ತ ಕೂತುಬಿಡ್ರಿ. ಅಂವಗ ಚಹ ಕೊಟ್ಟು ನಾ ಎಲ್ಲಾ ದಾಟಿಹಾಕ್ತಿನಿ. ನಿಮ್ಮ ಸಂಗತಿ ಮಾತಾಡೋ ಪ್ರಸಂಗನs ತರಗೊಡೋದಿಲ್ಲ!

ಕುಮಾ:— ಬ್ಯಾಡ್ರೆಪಾ, ಇದೆಲ್ಲ ಯಾಕ? ನಾ ಬಂದ ಕೆಲಸಾತು. ಇನ್ನ ನಾ ಹೋಗೇಬಿಡ್ತೇನಿ. (ಚೀಲವನ್ನು ಕೈಯಲ್ಲಿ ಹಿಡಿದು ಹೊರಡಲುದ್ಯುಕ್ತಳಾಗುತ್ತಾಳೆ.)

ರಂಗ:— ಒಂದು ಮಿನಿಟು ತಡೀರಿ, ಹಾಂ. ಅವ ಆಜೂಬಾಜೂ ಎಲ್ಲೂ ಕಾಣಿಸೆ

ಲಿಲ್ಲ ಅಂದರ ನೀವು ಹೋಗೇಬಿಡ್ರಿ. ಅವನ ಕಣ್ಣಿಗೆ ಬಿದ್ದರ ಕರದು ಮಾತಾಡಿಸ್ತಾನ. ಇಂಥಾ ಜೋಡಿದ್ದಾನ. (ಎದ್ದು ಬಾಗಿಲಿನ ವರೆಗೆ ಹೋಗಿ ಹೊರಗೆ ಹಣಿಕಿಹಾಕಿ ಗಡಿಬಿಡಿಯಿಂದ ಕೈಜಾಡಿಸುತ್ತ ಒಳಗೆ ಬರುತ್ತಾನೆ.) ಥು, ಥು, ಥು, ಥು ! ಎದುರಿಗೆ ಬಂದೇಬಿಟ್ಟನಪಾ !

ಕುಮಾ :– ಅಯ್ಯಯ್ಯೊ ! (ಮುಂಗೈಯನ್ನು ಕಚ್ಚಿ ಕುರ್ಚಿಯ ಮೇಲೆ ಕುಕ್ಕರಿ ಬೀಳುತ್ತಾಳೆ.)

ರಾಮು :– (ಶಾಂತ ಗಂಭೀರನಾಗಿ) ನೀವೇನೂ ಹೆದರಬ್ಯಾಡ್ರಿ ಮಿಸ್ ದೇಶಪಾಂಡೆ. ಇದೇನು ಐದು ಮಿನಿಟಿನ ನಾಟಕ.

ರಂಗ :– (ಎದುರಿಗೆ ಹೋಗಿ ಅಣ್ಣಾರಾಯರನ್ನು ಕರೆತರುತ್ತಾನೆ. ಅಣ್ಣಾರಾಯರು ಒಳಗೆ ಬರುಬರುತ್ತ ಮೊದಲು ಕುಮುದಳನ್ನೂ ತರುವಾಯ ರಾಮುನನ್ನೂ ದಿಟ್ಟಿಸಿ ನೋಡುತ್ತಾರೆ.)

ರಂಗ :– ಕುಮಾ, ಅಣ್ಣಾರಾಯರು ಬಂದಾರ. ನೀ ಅನಾಯಾಸ ಮನಿಯೊಳ ಗಿದ್ದೀ, ಚಹಾ ಮಾಡು. First class ಆಗಬೇಕು ! (ಕುಮಾ ಚಟ್ಟನೆ ಎದ್ದು ಒಳಗೆ ಹೋಗುತ್ತಾಳೆ.) ಕೂಡ್ರಿ, ಅಣ್ಣಾರಾಯರ.

ಅಣ್ಣಾ :– ಯಾತಕ್ರಿ ಚಹ ಸುಮ್ಮನೆ ?

ರಂಗ :– ನಮ್ಮ ಮಿಸೆಸ್ ಮಾಡಿದ ಚಹ ಒಮ್ಮೆಯಾದರೂ ಕುಡೀರ್‍ಯಲ್ಲ !

ಅಣ್ಣಾ :– ಅದೂ ಖರೇನ್ರಿ. ನಾ ಹಾಂಗ ನಡುವೆ ಕುಡಿಯುವವನೇ ಅಲ್ಲ. ಮತ್ತ ಹೊತ್ತು ವ್ಯಾಳ್ಯಾ ತಪ್ಪಿಸಿ ಯಾರು ಬಂದರೂ ಕೊಡುವವನೂ ಅಲ್ಲ. ಆದರ ನನ್ನ ಚಹಾದ ವ್ಯಾಳ್ಯಕ್ಕ ಬೇಕಾದಷ್ಟು ಮಂದಿ ಬರಲಿ, ಮಾಡಿದ್ದರೊಳಗ ಹಂಚಿಕೊಂಡು ಕುಡಿಯೋದು !

ರಾಮು :– ನಿಮ್ಮ ಚಹಾದ ವ್ಯಾಳ್ಯಾ ಅಂದರ .... ಸಾಧಾರಣ....

ಅಣ್ಣಾ :– ಬೆಳಗುಮುಂಜಾನೆ ಐದು ! (ಗಿರಡಿ ನಗು.)

ರಾಮು :– ಆ ವ್ಯಾಳ್ಯಕ್ಕ ಯಾವ ರಂಡೇ ಮಗ ಬರಬೇಕ್ರಿ ?

ಅಣ್ಣಾ :– ಅಂ, ಹಾಂಗನಬ್ಯಾಡ್ರಿ. ಅಂಥಾ ಗಿರಾಕೀನೂ ಅವ.

ರಂಗ :– ಅವೂ ಪೆನ್‌ಶನ್ ತಗೊಂಡವರು ಇರಬೇಕು !

ಅಣ್ಣಾ :– ನನಗೊಬ್ಬ ಗುರು ಗಂಟುಬಿದ್ದಿದ್ದನ್ರೆಪಾ ! ಇಬ್ಬರೂ ಅಡ್ಡಾಡಲಿಕ್ಕೆ ಹೋಗ್ತಿದ್ದಿವಿ. ನಾ ಚಹಾ ಮಾಡಿ ಅವಂಗ ಕೊಡೋದಲ್ಲದ ಮನೀಗೆ ಹೋಗಿ ಅವನ್ನ ಎಬ್ಬಿಸಿಕೊಂಡು ಬ್ಯಾರೆ ಬರಬೇಕು ! ಹವೂರಗ ನೆಗಡಿ

ಜಡ್ಡಿನ ನೆವಮಾಡಿ ಆ ವ್ಯಾಖ್ಯಾನs ತಪ್ಪಿಸಿಬಿಟ್ಟೆ. (ಮತ್ತೆ ಅದೇ ನಗು.)

ರಂಗ:– ಕೂಡ್ರಿ ಅಣ್ಣಾರಾಯರ, ನಿಂತs ಮಾತಾಡ್ತೀರಲ್ಲ !

ಅಣ್ಣಾ :– ಕೂಡ್ಲಿಕ್ಕೆ ಅಂತ ನಾ ಬಂದವನೇ ಅಲ್ಲ. ಖರೆ ಹೇಳ್ಳೇನು ನಾ ಯಾತಕ್ಕೆ ಬಂದೆ ಅಂಬೋದನ್ನ ? ಹೇಳ್ಯ್ಯಾ ?

ರಂಗ:– ನಾನs ಹೇಳ್ತಿನಿ ಬೇಕಾದರ–ನನ್ನ ಹೆಣ್ತಿನ್ನ ನೋಡ್ಲಿಕ್ಕೆ ! ಹೌದಲ್ಲ ರಾಯರ ? ಅಂ ? ಅಂ ? ಹೌದಲ್ಲೋ ?

ಅಣ್ಣಾ :– ಅಗದಿ ಖರೆ ! (ಹೆಚ್ಚಿನ ದನಿಯಲ್ಲಿ ನಗು.)

ರಂಗ :– ಅಷ್ಟs ಅಲ್ಲ, ನನ್ನ ಮಾತಿನ ಮ್ಯಾಲ ನಿಮಗ ತುಸು ಸಂಶಯನೂ ಬಂದಿತ್ತು. ಹೌದಲ್ಲೊ ಹೇಳ್ರಿ.

ಅಣ್ಣಾ :– ಬಂದಿತ್ತು ಮಾತ್ರ. (ಮತ್ತೆ ನಗು.)

ರಾಮು :– ಈಗ ?

ಅಣ್ಣಾ :– ಛೆ, ಛೆ. ಇನ್ ಮ್ಯಾಲ ಸಂಶಯ ತಗೊಂತರ ಅನೇನೊ ಅಂತಾರಲ್ಲ !

ರಾಮು :– ಕಪಾಳಕ್ಕ ಹೊಡದಾರು ಅಂತ ಹೌದಲ್ಲೊ ನೀವಂಬೋದು ?

ಅಣ್ಣಾ :– ಹೊ ಹೊ ! ಅನ್ರಿ, ಹಾಂಗs ಅನ್ರಿ, ಮುಲಾಜೇನು ?

ರಂಗ :– (ಗಟ್ಟಿಯಾಗಿ, ಒಳಗೆ ಕೇಳಿಸುವ ಹಾಗೆ) ಕುಮಾ, ಚಹಾ ಆಗಿದ್ದರ ತಗೊಂಡು ಬಾ.

ರಾಮು :– ಇನ್ನೂ ಆಗಿರಲಿಕ್ಕಿಲ್ಲ.

ಅಣ್ಣಾ :– ನೀವು ಹೆಸರು ತಗೊಂಡs ಕರೀತೀರೇನು ? ಏನು ? – ಕುಮಾ ಅಂದರೇನು ?

ರಂಗ :– ಕುಮುದಿನಿ ಅಂತ ಕರೆಯೋದರ ಬದಲು ಕುಮಾ ! ತವುರು ಮನಿ ಯವರು ಪ್ರೀತಿಯಿಂದ ಕರೆಯೋ ಹೆಸರು ! ನಾನೂ ಅದನ್ನs ಕರೀತಿನಿ ಆ ಹು ! ಕುಮುದಿನಿ ಅಂದರ ಕಮಲ ಅಂತ !

ಅಣ್ಣಾ :– ಹೆಸರು ಛಲೋ ಅದ. ಕುಮಾ ! ಕುಮಾ !

ರಂಗ :– ನಿಮಗ ಇನ್ನಮ್ಯಾಲ ಹೆಣ್ಣು ಹುಟ್ಟಿದರ ಇಡs ಹೆಸರಿಡ್ರಿ, ರಾಯರ !

ರಾಮು :– ಆವರು ರಿಟಾಯರ್ ಆಗ್ಯಾರೋ !

ಅಣ್ಣಾ :– ಉಂ, ರಿಟಾಯರ್ ಆಗೀನಿ. ಆದರ ಸಂಸಾರ ಎಲ್ಲಿ ಬಿಟ್ಟsದ ?

[ಅಷ್ಟರಲ್ಲಿ ಕುಮಾ ಬಾಗಿಲಲ್ಲಿ ನಿಂತು ' ಚಹ ಆಗೇದ ' ಎಂದು ಹೇಳು ತ್ತಾಳೆ. ರಂಗ ಬಾಗಿಲ ಬಳಿ ಹೋಗುತ್ತಾನೆ. ಕುಮಾ ಚಹವನ್ನು ಅವನ

ಕೈಯಲ್ಲಿ ಕೊಡುತ್ತಾಳೆ. ಅವನು ಇಬ್ಬರಿಗೂ ಕೊಟ್ಟು ತಾನೂ ತಕ್ಕೊಳ್ಳುತ್ತಿರುವಾಗ]

ಅಣ್ಣಾ :– ಚಹಾ ಉತ್ಕೃಷ್ಟ ಆಗೇದರೆಪಾ ! ನಮ್ಮ ಮನ್ಯಾಗ ಹೀಂಗ ಒಂದು ದಿವಸನೂ ಆಗೋದಿಲ್ಲ ನೋಡ್ರಿ. ಅತು ಇಷ್ಟು ಚಹ ಕುಡಿದೀನಲ್ಲ, ಇನ್ನ ಮೂರು ತಾಸು ಹೊಟ್ಟೆ ಹಸಿಯೋದಿಲ್ಲ ನೋಡ್ರಿ.

ರಂಗ:– ಇಧ್ಯಾಂಗ್ರಿ ? ನಮಗ ಎರಡೆರಡು ತಾಸಿಗೊಮ್ಮೆ ಕುಡಿದರೂ ಊಟದೊಳಗೇನು ಹೆಚ್ಚುಕಡಿಮಿ ಆಗೋದಿಲ್ಲ.

[ಎಲ್ಲರ ಚಹ ಮುಗಿಯುತ್ತದೆ. ರಂಗ ಚಹದ ಕಪ್ಪುಗಳನ್ನು ಇಸಿದುಕೊಂಡು ಟೇಬಲ್ ಮೇಲೆ ಇಡುತ್ತಾನೆ.]

ರಂಗ :– ಹೀಂಗಾರ ನೀವೇನು ಕೂಡೋದಿಲ್ಲ, ಹೊರಟೇಬಿಡ್ತೀರಾ ?

ಅಣ್ಣಾ :– ಹೌದು; ಮತ್ತ ಇದ್ದೇ ಅದಲ್ಲ !

ರಂಗ :– ಓಹೊ. ಅದಕ್ಕೇನು ?

[ಅಣ್ಣಾರಾಯರು ಹೋಗುತ್ತಾರೆ. ರಂಗ ಅವರನ್ನು ಬಾಗಿಲ ವರೆಗೆ ಕಳಿಸಿ ಬರುತ್ತಾನೆ. ರಾಮು ಸಿಗರೇಟ್ ಹೊತ್ತಿಸಿ ಕುರ್ಚಿಯ ಮೇಲೆ ಸೇದುತ್ತ ಕೂಡುತ್ತಾನೆ. ರಂಗ ಚಹದ ಕೋಣೆಯ ವರೆಗೆ ಹೋಗಿ ಹಣಿಕಿಕ್ಕಿ]

ರಂಗ :– ನೀವೂ ಮತ್ತ ಚಹ ತಗೊಂಡಿರೋ ಇಲ್ಲೊ ?

ಕುಮಾ :– (ಸಿಡಿಮಿಡಿ ಹಾಯುತ್ತ, ಕಾಲಪ್ಪಳಿಸುತ್ತ ಹೊರಗೆ ಬಂದು) ಸಾಕು ಹೋಗ್ರಿ, ನಿಮ್ಮ ಚಹ, ನೀವು ! (ಎನ್ನುತ್ತ ಕುರ್ಚಿಯ ಮೇಲೆ ಬಂದು ಕೂಡುತ್ತಾಳೆ.)

ರಂಗ:– (ಅವಳೆದುರಿಗೆ ಕೈಜೋಡಿಸಿ ನಿಂತು) ಅಲ್ಲ, ನಾ ಆರೆ ಏನು ಮಾಡ್ಲಿ ಹೇಳ್ರಿ. (ಎಂದು ದೈನ್ಯಭಾವದಿಂದ ಹೇಳಿಕೊಳ್ಳುತ್ತಿರುವಾಗಲೆ ಹಿಡಿಸಲಾರದೆ ನಗೆಬರುತ್ತದೆ. ಬಾಯಿಮುಚ್ಚಿಕೊಂಡು ನಗತೊಡಗುತ್ತಾನೆ. ಅದನ್ನು ನೋಡಿ ರಾಮುನಿಗೂ ನಗೆ ಬರುತ್ತದೆ. ಕುಮಾ ಅರ್ಧ ಸಿಟ್ಟು, ಅರ್ಧ ನಗೆ ಇಂಥ ಒಂದು ಸ್ಥಿತಿಯಲ್ಲಿ ಕೂಡುತ್ತಾಳೆ.)

ಕುಮಾ:– (ಮತ್ತೆ ಸಿಟ್ಟು ತಂದುಕೊಂಡು) ಇದೊಂದು ಛಲೊ ಪಾಠ ಕಲಿಸಿದಿರಿ ! ಇನ್ನು ಏಳೇಳು ಜನ್ಮಕ್ಕೂ ನಿಮ್ಮ ಸಹವಾಸ ಬ್ಯಾಡ. ನಿಮ್ಮ ಗುರ್ತು ಸಹಿತ ಇಲ್ಲಧಾಂಗ ಇದ್ದುಬಿಡ್ತೀನಿ. ನನ್ನ ಮಾತಾಡಿಸಬ್ಯಾಡ್ರಿ ಕಾಲೇಜಿನೊಳಗ !

ರಂಗ:– ಈಗ ನೀವು ಏನು ಅಂದರೂ ಅನಿಸಿಕೊಳ್ಳಲಿಕ್ಕೆ ತಯಾರಿದ್ದೀನಿ. ಮಿಸ್

ದೇಶಪಾಂಡೆ, ಇದನ್ನs ನೀವು Sportively ತಗೊಳ್ಳಿಕ್ಕೆ ಬರ್ತsದ. ಆ ಮುದುಕನೆದುರಿಗೆ ಒಂದು ನಾಟಕ ಮಾಡಿದಿವಿ ಅಂತ ತಿಳೀತಕ್ಕದ್ದು!

ರಾಮು:– ಅಷ್ಟs ಅಲ್ಲ, ಗ್ಯಾದ್‌ರಿಂಗಿನ ನಾಟಕದೊಳಗ ನೀವು ರಂಗನ ಹೆಣ್ತಿ ಆಗಿದ್ದಿರೋ ಇಲ್ಲೋ?

ಕುಮಾ:– ಆದರ ಅದು ಹೇಳಿಕೇಳಿ ನಾಟಕಾನs ಇತ್ತು!

ರಾಮು:– ಇದೇನು ಮತ್ತ? ಇದೂ ಒಂದು ನಾಟಕಾನs!

ಕುಮಾ:– ಹೋಗ್ರಿ! ನಾಟಕ, ನಾಟಕಂತs ಎಲ್ಲಾದರೂ ಖರೆ ಆಕ್ಕೊಂಡು ಕೂತೀತು!

ರಾಮು:– ಉಂ, ಹುಂ. ಇದು ಇಷ್ಟಕ್ಕs ಮುಗೀತು ಅಂತ ತಿಳಕೊಂಡುಬಿಡ್ರಿ.

ಕುಮಾ:– ಏನು ಮುಗೀತೋ, ಏನು ಸುರು ಆತೋ!

ರಂಗ:– ಮಿಸ್ ದೇಶಪಾಂಡೆ, ನನ್ನದಂತೂ ಸರ್ವಾಪರಾಧ ಆಗೇದ. ಉದ್ದಕ್ಕ ಸಾಷ್ಟಾಂಗ ಹಾಕು ಅಂದರೂ ಹಾಕತೀನಿ! ಮತ್ತೇನು ಹೇಳಲಿ, ಹೇಳ್ರಿ. ದೇವರ ಸಾಕ್ಷಿ ನಿಮ್ಮ ಬಗ್ಗೆ ನನಗ ಕೆಟ್ಟ ಭಾವನಾ ಇಲ್ಲ!

ಕುಮಾ:– ಅದು ಇಲ್ಲಂಬೋದು ನನಗೂ ಗೊತ್ತದರಿ. ಆದರ ಇದು ನೋಡ್ರೆಲಾ ಸುಮ್ಮಸುಮ್ಮನs!

[ಹೊರಬಾಗಿಲಲ್ಲಿ 'ರಂಗಾ' 'ರಂಗಾ' ಎಂಬ ದನಿ ಕೇಳಿಬರುತ್ತದೆ.]

ರಂಗ:– ಎಲಾ! ಇದು ಅಪ್ಪನ ದನಿ! ಅಪ್ಪ ಬಂದ ಕಾಣಿಸ್ತದ ಊರಿಂದ! (ಕುಮುದೆಗೆ) ನೀವು ಹ್ಯಾಂಗ ಮಾಡ್ತೀರಿ? ಸ್ವಲ್ಪ ಹೊತ್ತು ಒಳಗs ಕೂತುಬಿಡ್ರಿ. (ಗಟ್ಟಿಯಾಗಿ) ಬಂದೆ ಬಂದೆ. (ಹೊರಬಾಗಿಲು ತೆರೆಯಲು ಹೋಗುತ್ತಾನೆ.)

ಕುಮಾ:– ಇವತ್ತ ನನ್ನ ಮರಣನs ತುಂಬಿ ಬಂದsದ! ಖೊಟ್ಟಿ ಅದೃಷ್ಟ! (ಎಂದು ಗಟ್ಟಿಯಾಗಿ ಹಣೆ ಹಣೆ ಬಡೆದುಕೊಳ್ಳುತ್ತ ಒಳಕೋಣೆಗೆ ಹೋಗುತ್ತಾಳೆ.)

[ರಾಮು ಕುರ್ಚಿಯ ಮೇಲಿಂದ ಎದ್ದು ಗಾಬರಿಯಾಗಿ ನಿಲ್ಲುತ್ತಾನೆ. ರಂಗ ಮುಂದೆ, ಗುಂಡೇರಾಯರು ಹಿಂದಿನಿಂದ ಕೈಚೀಲದೊಂದಿಗೆ ಸಿಟ್ಟುತುಂಬಿದ ಮುಖಭಾವದಲ್ಲಿ ಸುತ್ತಲೂ ನೋಡುತ್ತ ಒಳಗೆ ಬರುತ್ತಾರೆ. ರಂಗ ಅವರ ಕೈಯಲ್ಲಿಯ ಚೀಲವನ್ನು ಇಸಿದುಕೊಂಡು ಕಾಟನ ಮೇಲೆ ಇಡುತ್ತಾನೆ. ಅವರು ಪಾರ್ಸಿ ನಮೂನೆಯ ಕೋಟು, ತಲೆಗೆ ಟೊಪ್ಪಿಗೆ, ಒಂದು ಉಪ್ಪರಣಿ, ಒಂದು ಕೈಯಲ್ಲಿ ಬೆತ್ತ ಈ ವೇಷದಲ್ಲಿ ಇರುತ್ತಾರೆ. ಅವರು

ಒಳಗೆ ಬಂದೊಡನೆಯೆ ಚಪ್ಪಲಿಯನ್ನು ಟೇಬಲ್ ಹತ್ತಿರ ಬಿಟ್ಟು, ಚಿತ್ತ ವನ್ನು ಟೇಬಲ್ಲಿಗೆ ಆನಿಸಿ ಇಟ್ಟು ಮತ್ತೊಮ್ಮೆ ಸುತ್ತಲೂ ನೋಡುತ್ತ ಕಾಟನ ಹತ್ತಿರ ಬರುತ್ತಾರೆ.]

ಗುಂಡೇರಾಯರು :– (ರಾಮುನ ಕಡೆಗೆ ನೋಡುತ್ತ) ಇವರ್‍ಯಾರು ?

ರಂಗ:– ನನ್ನ ಗೆಳೆಯ, ನನ್ನ ಜೋಡಿಗೇ ಕಲಿತಾನ. ದೇಸಾಯಿ ರಾಮು ಅಂತ.

ಗುಂಡೇ:– (ಟೊಪ್ಪಿಗೆಯನ್ನೂ ಉಪ್ಪರಣಿಯನ್ನೂ ತೆಗೆದು ಕಾಟನ ಮೇಲೊಗೆದು, ಕೋಟಿನ ಗುಂಡಿಗಳನ್ನು ಬಿಚ್ಚುತ್ತ) ಮತ್ತ ಯಾರ್‍ಯಾರಿದ್ದಾರ. ಈ ಖೋಲೀ ಒಳಗ ?

ರಂಗ:– ಇವರು ಸಹಿತ ಈ ಖೋಲಿಯೊಳಗ ಇರೋದಿಲ್ಲ! ಬ್ಯಾರೆ ಕಡೆಗೆ ಇರ್ತಾರ !

ಗುಂಡೇ:– (ಕೋಟನ್ನು ತೆಗೆದು ಕೈಯಲ್ಲಿ ಹಿಡಿದು) ಅವರ್‍ನ ಬಿಟ್ಟು ?

ರಂಗ:– ನಾ....ನಾ ಒಬ್ಬನs ! ಮತ್ಯಾರ್‍ಯಾರಿದ್ದಾರ ?

ಗುಂಡೇ:– ತಿರುಗಿ ನನ್ನs ಕೇಳಬ್ಯಾಡ. ನೀ ಉತ್ತರಾ ಕೊಡು. (ಕೋಟನ್ನು ಕಾಟಿನ ಮೇಲೆ ಒಗೆಯುತ್ತಾರೆ. ರಂಗ ಅದನ್ನೆತ್ತಲು ಹೋಗುತ್ತಾನೆ. ಅದನ್ನು ತಡೆದು) ಅದು ಅಲ್ಲೇ ಇರಲಿ. ಈ ಖೋಲಿವೊಳಗ ಸದ್ಯಕ್ಕ ಎಷ್ಟು ಮಂದಿ ಇರ್ತಾರ ?

ರಂಗ:– (ಮಾತು ಅವಡು ಸವಡು ಆಗುತ್ತಿರಲು) ಅಂದರ, ನೀನು ಬರೋದಕ್ಕಿಂತ ಮುಂಚೆ ಅಂದ್ಯೇನು ?

ಗುಂಡೇ:– ಹೌದು ಮುಂಚೇ !

ರಂಗ:– ನಾನು–ಇಂವ–ಇನ್ನೊಬ್ಬರು–ನಮ್ಮ ಕಾಲೇಜು ....

ಗುಂಡೇ:– (ಕುಳಿತುಕೊಂಡು) ಕಾಲೇಜೇನು ?

ರಂಗ:– ಕಾಲೇಜಿನ ಕ್ಲಾಸ್‌ಮೇಟು–ಮಿಸ್ ಕುಮುದಿನಿ ಅಂತ.

ಗುಂಡೇ:– ಅವರು ಇದೇ ಖೋಲಿವೊಳಗs ಇರ್ತಾರೇನು ?

ರಂಗ:– ಅಂದರ ಈಗ ಇದ್ದಾರ.

ಗುಂಡೇ:– ಈಗಿನದು ನಾ ಕೇಳೋದಿಲ್ಲ. ನಿನ್ನ ಜೋಡಿಗೆ ಈ ಖೋಲಿವೊಳ ಗಿರ್ತಾರೇನು ?

ರಂಗ:– ಛೆ, ಛೆ, ಅವರು ಹ್ಯಾಂಗಿದ್ದಾರು ?

ಗುಂಡೇ:— ಮತ್ತ ಹ್ಯಾಂಗಿದ್ದಾರ?
ರಂಗ:— ಅವರೆಲ್ಲಿದ್ದಾರಪಾ ?
ಗುಂಡೇ:— (ಅಣಕಿಸಿ) ಇಲ್ಲೇ ಇದ್ದಾರಂತಪಾ !
ರಂಗ:— (ಧೈರ್ಯ ತಂದುಕೊಂಡು) ಹಂಗಾರ ಪೂರಾ ನಿನಗ ತಪ್ಪು ತಿಳಿವಳಿಕಿ ಮಾಡಿಕೊಟ್ಟಾರ! ಯಾರು ನಿನಗ ಹೇಳಿದವರು ?
ಗುಂಡೇ:— (ತ್ರಾಸಗೊಂಡು) ಯಾರಸರೆ ಹೇಳಿರಲಿ! ಅವರ ಹೆಸರು ತಗೊಂಡು ನೀ ಏನು ಮಾಡತಿವ? ಈಗ ಅವರು ಇಲ್ಲಿ ಇದ್ದಾರೋ ಇಲ್ಲೋ ?
ರಂಗ:— ಹುಂ.
ಗುಂಡೇ:— ಅವರು ಇಲ್ಲ್ಯಾಕಿರ್ತಾರ?
ರಂಗ:— ಇಲ್ಲಿಲ್ಲಿ ಇರ್ತಾರ? ಈಗ ಸಹಜ ಭೆಟ್ಟಿಗೆ ಅಂತ ರಾಮನೂ ಬಂದ, ಅವರೂ ಬಂದರು.
ಗುಂಡೇ:— ಈಗೆಲ್ಲಿದ್ದಾರವರು ?
ರಂಗ:— ಇಲ್ಲೇ, ಒಳಗ ಖೋಲಿಯೊಳಗ ಇದ್ದಾರ. ಚಹ ಮಾಡ್ರಿ ಅಂದೆ, ಮಾಡ್ತ ಇದ್ದಾರ.
ಗುಂಡೇ:— (ಎದ್ದು ಹೋಗಿ ಕೋಣೆಯಲ್ಲಿ ಹಣಿಕಿಕ್ಕಿ ನೋಡಿ ಬಂದು) ಈ ಹುಡಿಗೀ ವ್ಯಾಲ ನಿನಗ ಪ್ರೀತಿ ಇದ್ದರ, ಅಲ್ಲಿ ಊರೊಳಗ ನಾಲ್ಕಾರು ಕನ್ಯಾ ನೋಡೋ ಫಾರ್ಸು ಯಾಕ ಮಾಡಿದಿ? ಮತ್ತ ಬರೋ ಮುಂದ ಬ್ಯಾರೆ ಕನ್ಯಾ ನೋಡ್ರಿ ಅಂತ ಯಾಕ ಜೊಗಳಿ ಬಂದಿ?
ರಂಗ:— ಅಲ್ಲಪಾ, ಅದಕ್ಕ ನಾಯೇನು ಈಗ ವಿರುದ್ಧ ನಡಕೊಂಡೀನಿ?
ಗುಂಡೇ:— ನಾಚಿಗಿ ಬರೋದಿಲ್ಲೇನು ಹಿಂಗ ಹೇಳ್ಳಿಕ್ಕೆ? ಯಾರ ಮಾರಿಗೆ ಮಸಿ ಹಚ್ಚೀ! ಅಲ್ಲೋ, ಇಂಥಾದು ಮಾಡಲಿಕ್ಕೆ ನಿನಗ ಧೈರ್ಯ ಹ್ಯಾಂಗ ಬಂತು? ನೀನು ಉಳದದ್ದೇನ ಮಂಗ್ಯಾತನ ಮಾಡಿದರೂ ಹೆಣ್ಣಿನ ವಿಷಯದೊಳಗ ಸಂಭಾವಿತ ಅಂತ ತಿಳಕೊಂಡಿದ್ದೆ— ಛೆ, ಛೆ, ಛೆ, ಈ ದಿವಸದೊಳಗ ಮಕ್ಕಳ ಸ್ವಭಾವ ಸಹಿತ ತಿಳಕೊಳ್ಳಿಕ್ಕೆ ಆಗದಂಥಾ ಕಾಲ ಬಂತಲ್ಲ ಅಂತೀನಿ! ನಾ ಏನು ಉದ್ದೇಶ ಇಟುಗೊಂಡು ಬಂದೆ, ಇಲ್ಲೇನು ಕಂಡೆ! (ನಿಟ್ಟುಸಿರ್ಗರೆದು) ದುರ್ದೈವ ನಮ್ಮದು, ಆತು!
(ಹಣೆಗೆ ಕೈ ಹಚ್ಚಿ, ಕೆಳಗೆ ಮುಖಮಾಡಿ ಕುರ್ಚಿಯ ಮೇಲೆ ಕೂಡುತ್ತಾರೆ.)

ರಂಗ:– ಅಪ್ಪಾ, ನಾ ಇದ್ದದ್ದು ಇದ್ದಂತೆ ಹೇಳಿದರ ನಂಬುತಿಯೋ ಇಲ್ಲೋ ?

ಗುಂಡೇ:– ನಂಬೋ ಹಾಂಗಿದ್ದರ ಯಾರಾದರೂ ನಂಬತಾರ.

ರಂಗ:– ಅದು ಸುಳ್ಳಾದರ, ರಾಮನ್ನ ಕೇಳು.

ಗುಂಡೇ:– ಓತೀಕಾಟಕ್ಕ ಬೇಲೀ ಸಾಕ್ಷಿ! ಕೇಳಿ ಮಾಡೋದೇನು ? ನೀನs ಖರೆ ಹೇಳಿದರ ಆಯ್ತಲ್ಲ ? ಮತ್ತ, ಇದರಾಗ ಖರೆ ಏನು, ಸುಳ್ಳೇನು ? ಒಮ್ಮೊಮ್ಮೆ ಖರೆ ಸುಳ್ಳಾಗ್ತದ. ಸುಳ್ಳು ಖರೆ ಆಗ್ತದ !

ರಂಗ:– ಅದಕ್ಕೇನಾದರೂ ಆದsನೋ ಇಲ್ಲೋ ?

ಗುಂಡೇ:– ಈಗ ಕಾಲಾನs ಹಾಂಗ ಬಂದದ. ಅಲ್ಲೋ ರಂಗ್ಯಾ.... (ಮಾತಾಡ ಬೇಕು ಎಂದು ಆವೇಶಗೊಂಡವರಾಗಿ ಮತ್ತೆ ಮತ್ತೆ ಹತಾಶರಾದವರಂತೆ) ಏನು ಮಾತಾಡಬೇಕು ತಿಳಿಧಾಂಗ ಆಗೇದ.... (ಮತ್ತೆ ಕಣ್ಣು ಮುಚ್ಚಿಕೊಂಡು ಹಣೆಗೆ ಕೈಹಚ್ಚಿ ಕೂಡುತ್ತಾರೆ. ರಾಮು ಕೈಯಲ್ಲಿ Film Fare ಹಿಡಿದು ಪುಟ ತಿರುಹುತ್ತ ನಿಂತವನು ರಂಗನಿಗೆ ಎಲ್ಲ ಹೇಳಿಬಿಡಲು ಸೂಚಿಸುತ್ತಾನೆ. ಕೋಣೆಯ ಬಾಗಿಲಿಗೆ ಮರೆಯಾಗಿ ನಿಂತು ಕುಮಾ ಹೋಗುತ್ತೇನೆಂದು ಸನ್ನೆ ಮಾಡುತ್ತಾಳೆ. ಗುಂಡೇರಾಯರ ಹಿಮ್ಮಗ್ಗಲು ನಿಂತ ರಂಗ ಬಾಯ ಮೇಲೆ ಕೈಯಿಟ್ಟು, ಬೇಡ ಎಂದು ಕೈ ಮಾಡುತ್ತಾನೆ. ಮೋರೆ ಕಿವುಚಿಕೊಂಡು ಆಕೆ ಒಳಗೆ ಹೋಗುತ್ತಾಳೆ. ಗುಂಡೇರಾಯರು ಎಚ್ಚತ್ತವರಾಗಿ) ನನ್ನ ಕೋಟು, ಟೊಪ್ಪಿಗೀ ತಾ; ಆ ಚೀಲಾನೂ ಕೊಡು. ಹೋಗ್ತಿನಿ. ಇದ್ದೊಬ್ಬ ಮಗ–ನೀನೂ ಕೈಬಿಟ್ಟ್ಯಾಂಗಾತು. ನಾವಿಬ್ಬರೂ ಹೋಗಿ, ಎಲ್ಲ್ಯಾದರೂ ಭಾವೀ ಕೆರೀ ಪಾಲಾಗ್ತೀವಿ. ನನ್ನ ಮಾತು ನಂಬಿ ಆ ಗೃಹಸ್ಥ ಪಾಪ, ಇಲ್ಲೀ ತನಕ ಬಂದ ! ಏನು, ಒಂದೊಂದು ಸಂಕಟ ಹೇಳಲ್ಯಾ ನಿನ್ನ ಕಾಲಾಗ ! (ಸಿಟ್ಟಿನ ಪಾರಜ ಪುನಃ ಏರಿದಂತಾಗಿ) ಅಲ್ಲೋ, ಅವಿವೇಕಿ ರಂಡೇಗಂಡ, ಯಾವುದೋ ಒಂದು ಕನ್ಯಾ ತಂದು ಬಸ್ತಾನ ಹಾಕ್ಕೊಂಡು ಕೂತುಬಿಟ್ಟೇದಿ ! ಏನು ಹಕೀಕತ್ತsರೇ ಏನಪಾ ಇದು ?

ರಾಮು:– (ಮುಂದೆ ಬಂದು) ರಾಯರ, ರಂಗನ ತಂದಿ ಅಂದರ ನನಗೂ ನೀವು ತಂದೀ ಸಮಾನ. ನಡುವೆ ಬಾಯಿಹಾಕ್ತೀನಿ ಅಂತ ಕ್ಷಮಿಸ್ರಿ. ರಂಗನಿಗೆ ನಾ ಆಗಿನಿಂದ ಇದ್ದದ್ದು ಹೇಳೋ ಅಂತ ಸನ್ನಿ ಮಾಡಿದರೂ ಅಂವಗ ಧೈರ್ಯ ಆಗಪ್ಪೊಲ್ಲದು. ತುಸು ಸಮಾಧಾನದಿಂದ ಕೇಳಿಕೊಳ್ರಿ. ನಾನs ಎಲ್ಲಾ ಹೇಳಿಬಿಡ್ತೀನಿ. ಅದು ಹಿಂಗಾತು:– ಇಂವ ಊರಿಂದ ಮೊದಲs ತುಸು ತಡಮಾಡಿ ಬಂದನs ?

ಗುಂಡೇ– ಹೌದು. ಲಗೂನೆ ಇವನ ಮದಿವೀ ಮಾಡೋದು ಅಂತ ಕನ್ಯಾ ಬ್ಯಾರೆ ನೋಡುತಿದ್ದಿವಲ್ಲ?

ರಾವು– ಅಡs. ಅದರ ಕಾಲಾಗ ಬರಲಿಕ್ಕೆ ಅವಗ ತಡ ಆತು. ಮತ್ತ ಇಲ್ಲಿ ಅಂವ ಹೇಳಿಟ್ಟ ಖೋಲಿ ಕೈಬಿಟ್ಟಿತು. ಈ ಊರೊಳಗ ಸದ್ಯಕ್ಕ ಏನಾಗೇದ ಅಂತೀರಿ–ಹದಿನೆಂಟು ನಮೂನೆ ಹೊಸ ಹೊಸ ಕಚೇರಿಗಳು ಬಂದು, ಸ್ವರ್ಗದಾಗ ಜಾಗಾ ಸಿಗೋದು ಸುಲಭ, ಇಲ್ಲಿ ಜಾಗಾ ಸಿಗೋದು ಕಷ್ಟ ಆಕ್ಕೊಂಡು ಕೂತದ. ರಂಗ್ಯಾ ಊರಿಂದ ಬಂದ ಮ್ಯಾಲ ಬಹಳ ಕಷ್ಟ ಪಟ್ಟಾನ ಖೋಲೀ ದೊರಕಿಸಲಿಕ್ಕೆ.

ರಂಗ:– ಭಯಂಕರ ಒದ್ದಾಡಿದೆನಪಾ!

ರಾವು:– ಕಡೀಗೆ ಈ ಚಾಳಿನೊಳಗ ಜಾಗಾ ಖಾಲಿ ಅವ ಅಂತ ತಿಳೀತು. ಆದರ ಇಲ್ಲಿರುವವರಿಗೆ ಸಂಸಾರ ಬೇಕು ಅಂದರು.

ಗುಂಡೇ:– ಅದಕ್ಕ ಬಾಡಿಗೀ ಖೋಲಿಗೆ ಬಾಡಿಗೀ ಹೆಣ್ತಿ ತಂದನೇನು ರಂಗ್ಯಾ?

ರಾವು:– ಛೆ, ಛೆ, ಇವು ಸಿಗ್ತಾವ ಅಂತ ಅವು ಹ್ಯಾಂಗ ಸಿಕ್ಕಾವು ಬಿಡ್ರಿ. ಮುಂದೇನಾತು – ನಿಮಗ ಗೊತ್ತs ಅದಲ್ಲ, ರಂಗ್ಯಾ ಅಂದರ ಛಲೋ ಮಂಗ್ಯಾ ಅಂತ? ತನ್ನ ಮದಿವ್ಯಾಗೇದ, ಹೆಣ್ತಿ ತನ್ನ ಜತೀಗೇ ಕಲೀತಾಳ ಅಂತ ಸುಳ್ಳು ಹೇಳಿ ಈ ಖೋಲೀವೊಳಗ ಪ್ರವೇಶ ದೊರಕಿಸಿದ! ಮತ್ತ ಆ ಖೋಲಿವೊಳಗ ಕೂತಾರಲ್ಲ ಮಿಸ್ ಕುಮುದಿನಿ–ಅವರ ಕಡೆಯಿಂದ ಹಿಂಗs ಒಂದು ಸುಳ್ಳು ಹೇಳಿ ಅವರ ಪತ್ತಲ ಇಸುಕೊಂಡು ಬಂದ! ಎಂಟು ದಿವಸದೊಳಗ ಪತ್ತಲ ತಿರುಗಿ ಕೊಡಬೇಕಾಗಿತ್ತು, ಅದನ್ನ ಕೊಡಲೇ ಇಲ್ಲ ಅಂತ, ಪತ್ತಲಾ ಕೇಳ್ಳಿಕ್ಕೆ ಅವರs ಬಂದುಬಿಟ್ಟರು! ಚಾಳಿನ ಮಾಲಕ ಇವನ ಪಾಳತಿ ಮ್ಯಾಲ ಇದ್ದs ಇದ್ದ. ಅಂವ ಅದೇ ವ್ಯಾಳ್ಯಕ್ಕ ಒಳಗ ಬಂದ. ಅವನೆದುರಿಗೆ ಫಜೀತಿ ಆಗಬಾರದು ಅಂತ ಗಂಡನ್ಹಾಂಗ ತುಸು ರಂಗ ನಟಿಸಿದ್ದೇನೋ ಖರೆ! ನಿಮಗ ಆ ಮುದುಕ ನಿಂದನs ಇದೇನಾದರೂ ತಿಳಿದಿರಬೇಕು. ಅದಕ್ಕ ನೀವು ಬಹಳ ಸಂತಾಪ ಗೊಂಡs ಒಳಗ ಬಂದಿರಿ!

ಗುಂಡೇ:– ಹೌದು. ಅಂವ ಕಂಪೌಂಡ್ ಗೇಟಿನೊಳಗs ನಿಂತಿದ್ದ. ನಮ್ಮ ಮಗ ಇಲ್ಲಿ ಇರ್ತಾನೇನು ಅಂತ ಕೇಳಿದೆ. ನಿಮ್ಮ ಮಗ ಸೊಸೆ ೧೫ ದಿವಸ ಗಳಿಂದ ನಮ್ಮಲ್ಲೇ ಬಾಡಿಗೆಗೆ ಬಂದಾರ ಅಂತ ಹೇಳಿದ. ನಾ ಅವನೆದುರಿಗೆ

ಏನೂ ತೋರಗೊಡದೆ, ಹೇಳಿದ್ದನ್ನಷ್ಟು ಕೇಳಿಕೊಂಡು ಬಂದೆ. ಆದರ.... (ಯೋಚನೆಗೊಂಡು) ನೀನು ಹೇಳೋದನ್ನೆಲ್ಲ ಕೇಳಿದರ ನಿನ್ನದು ಖರೆ ಇರಬೇಕು ಅಂತ ಅನಿಸ್ತದ. ಆದರ ಇದೂ ಕಟ್ಟುಕಥೆ ಇರಲಿಕ್ಕಿಲ್ಲ ಅಂತ ಯಾತರ ಮೇಲಿಂದ ? ಯಾಕಂದರ ನಾಟಕಾನೇ ಮಾಡಲಿಕ್ಕೆ ನಿಂತೀರಿ ನೀವು ! ಆದು ಮಂದೀ ಎದುರಿಗೇನು, ತಂದೇ ಎದುರಿಗೇನು ? ಎಲ್ಲಾನೂ ಅಷ್ಟs ನಿಮಗ.

ರಾಮ:– ಇಲ್ಲ ರಾಯರ, ಇದರೊಳಗ ನಾಟಕೇನು ಸುತ್ತದ. ಪ್ರತ್ಯಕ್ಷನs ನಿಮ್ಮೆದುರಿಗೆ....

ಗುಂಡೇ:– ಅದಾತು, ಏ ರಂಗ್ಯಾ, ಆ ಹುಡುಗಿನ್ನ ಹೊರಗ ಕರಿ.

ರಂಗ– ಹೊ ಹೊ ! (ಕೋಣೆಯ ಬಾಗಿಲಲ್ಲಿ ಹಣಿಕಿಕ್ಕಿ) ಮಿಸ್ ದೇಶಪಾಂಡೆ, ನಮ್ಮ ತಂದೆ ಕರೀತಾರ.

[ಕುಮುದಾ ಹೊರಗೆ ಬಂದು ದೂರ ಗೋಡೆಗೆ ಆತುಕೊಂಡು ನಿಲ್ಲುತ್ತಾಳೆ. ಮುಖದ ಮೇಲೆ ಅಪರಾಧಿಯ ಕಳೆ. ಅವಳು ಕೆಳಮೋರೆ ಹಾಕಿಕೊಂಡು ನಿಂತಿರುವುದನ್ನು ಗುಂಡೇರಾಯರು ಕ್ಷಣಹೊತ್ತು ಸೂಕ್ಷ್ಮವಾಗಿ ನೋಡಿ]

ಗುಂಡೇ:– ನೀವು ನಮ್ಮ ರಂಗ್ಯಾನ ಕ್ಲಾಸಿನೊಳಗs ಕಲೀತೀರಿ?

ಕುಮೂ:– ಹೌದು. ನಾನು ಜ್ಯೂನಿಯರ್, ಅವರೂ ಜ್ಯೂನಿಯರ್.

ಗುಂಡೇ:– ನಿಮ್ಮ ಹೆಸರೇನಂದಿರಿ ?

ಕುಮೂ:– ಕುಮುದಿನಿ ದೇಶಪಾಂಡೆ.

ಗುಂಡೇ:– (ಸಂದೇಹಗೊಂಡು, ಸ್ವಗತ) ಅವರು ಯಾವ ಕಾಲೇಜು ಅಂತ ಹೇಳಿದರು? ಇದs ಇರಬೇಕು. (ಪ್ರಕಾಶವಾಗಿ) ನೀವು ಇರೋದೆಲ್ಲಿ ? ಲೆಡೀಜ್ ಹಾಸ್ಟೆಲಿನ ಹತ್ತಿರ ಒಂದು ಖೋಲಿಯೊಳಗೇನು ?

ಕುಮೂ:– ಹೌದು.

ಗುಂಡೇ:– ನಿಮ್ಮ ತಂದೆಯವರ ಹೆಸರು ?

ಕುಮೂ:– ದೇಶಪಾಂಡೆ ವಿಠ್ಠಲರಾವ್.

ಗುಂಡೇ:– (ಬೆಚ್ಚಿಬಿದ್ದವರಾಗಿ) ಏನು, ದೇಶಪಾಂಡೆ ವಿಠ್ಠಲರಾವ್? ರಂಗಾಪುರದ ದೇಶಪಾಂಡೇರು ?

ಕುಮೂ:– ಹೌದು.

ಗುಂಡೇ:– ಉಂ....ನೆಟ್ಟಗಾತು !

[ಅಷ್ಟರಲ್ಲಿ ಚಾಳಿನ ಒಡೆಯರಾದ ಅಣ್ಣಾರಾಯರು ಹೊರಬಾಗಿಲಲ್ಲಿಯೇ ಕಾಣಿಸಿಕೊಂಡು]

ಅಣ್ಣಾ:– ಮಿಸ್ಟರ್ ರಂಗರಾವ್, ಯಾರೋ ದೇಶಪಾಂಡೆ ವಿಠ್ಠಲರಾವ್ ಅಂತ ನಿಮ್ಮ ಕಡೆಗೆ ಬಂದಾರ ನೋಡ್ರಿ.

ಗುಂಡೇ:– (ಆಶ್ಚರ್ಯಗೊಂಡು) ವಿಠ್ಠಲರಾಯರು ಇಲ್ಲಿಗೇ ಬಂದರs ?

[ಗುಂಡೇರಾಯರು ಚಟ್ಟನೆದ್ದು ಬಾಗಿಲ ಬಳಿ ಬರುತ್ತಾರೆ.]

ಕುಮಾ:– ಅಯ್ಯಯ್ಯೋ ! ಜಪ್ಪ ಬಂದರು ! (ಚೀರುವ ದನಿಯಲ್ಲಿ ನುಡಿಯುತ್ತ ಒಳಗೆ ಹೋಗಿಬಿಡುತ್ತಾಳೆ. ರಂಗ ಮತ್ತು ರಾಮು ಹೊರಬಾಗಿಲ ಬಳಿ ಬರುತ್ತಾರೆ.)

ಗುಂಡೇ:– (ವಿಠ್ಠಲರಾಯರನ್ನು ನೋಡಿ) ಬರ್ರಿ, ಬರ್ರಿ.

[ಅವರನ್ನು ಕರೆದುಕೊಂಡು ಎಲ್ಲರೂ ಒಳಗೆ ಬರುತ್ತಾರೆ. ಅವರ ಕೈಯಲ್ಲಿ ಒಂದು ಕೈಚೀಲ ಮಾತ್ರ ಇರುತ್ತದೆ. ತಲೆಗೆ ರುಮಾಲು, ಮೈಮೇಲೆ ಕೋಟು, ದೋತರ, ಕಾಲಿಗೆ ಚಪ್ಪಲಿ, ಕಣ್ಣಿಗೆ ಕನ್ನಡಕ, ತುಸು ಸ್ಥೂಲವಾದ ಮೈಕಟ್ಟು, ಉದ್ದನ್ನ ಬಿಳಿ ಮೀಸೆ ಈ ರೂಪದಲ್ಲಿ ಕಾಣುತ್ತಾರೆ.]

ವಿಠ್ಠಲರಾಯರು:– ಅದೇನಾತು–ನಾ ನಮ್ಮ ಹುಡಿಗೀ ಖೋಲಿಗೆ ಹೋದೆ. ಖೋಲಿಗೆ ಕೀಲಿ. ಬಾಜೂದವರು ಹೇಳಿದರು—ಇಂದು ಆದಿತ್ಯವಾರ, ಆಕೆ ಸಂಜೆಗೇ ಬರಬಹುದು ಅಂತ. ಹಂಗಾರ ನಮ್ಮ ಸ್ನೇಹಿತನ ಕಡೆಗೇ ಹೋಗೋಣು ಅಂತ ಹೊರಟೆ. ಅವನ ಮನೇನೂ ಇಲ್ಲೇ, ಮ್ಯಾಲಿನ ಓಣಿಯೊಳಗs ಅದ. ಈ ಸುದ್ದಿ ನಿಮಗ ತಿಳಿಸಿ ಹೋಗೋಣು ಅಂತ ಬಂದೆ. ಯಾಕಂದರ ಸಂಜೀ ತನಕ ನಮ್ಮ ಹುಡಿಗೀ ಭೆಟ್ಟಿ ಆಗಲಿಲ್ಲ ಅಂದರ ನಾವು ಅಂದುಕೊಂಡದ್ದು ನಾಳೆಗೇ ಬಿತ್ತಲ್ಲ ?

ಗುಂಡೇ:– ಕೂಡ್ರೀ ವಿಠ್ಠಲರಾವ್. ರಂಗ್ಯಾ, ಆ ಕುರ್ಚಿ ತಂದಿಡು. [ರಂಗ ಎರಡು ಕುರ್ಚಿಗಳನ್ನು ಹತ್ತಿರ ಹತ್ತಿರ ಇಡುತ್ತಾನೆ.]

ವಿಠ್ಠಲ– ಅಲ್ಲ, ಮತ್ತ ಬರ್ತೇನಿ. ಇವರೇ ಏನು ನಿಮ್ಮ ಚಿರಂಜೀವರು ?

ಗುಂಡೇ:– ಹೌದು, ಕೂಡ್ರಿ. ಐದು ಮಿನಿಟು ಕೂಡ್ರಿ, ಹೇಳ್ತೇನಿ ಕೂಡ್ರಿ.

[ವಿಠ್ಠಲರಾಯರು ಚೀಲ ಕೆಳಗಿಟ್ಟು ಕೂಡುತ್ತಾರೆ. ಗುಂಡೇರಾಯರು ಹತ್ತಿರದ ಕುರ್ಚಿಯ ಮೇಲೆ ಕೂಡುತ್ತಾರೆ.]

ಗುಂಡೇ:– ರಂಗಾ, ಚಹ ಮಾಡಿಸು. (ಒಂದು ಕೋಣೆಯ ಕಡೆಗೆ ದೃಷ್ಟಿ ಬೀರಿ ಸೂಚಿಸುತ್ತಾರೆ.)

ರಂಗ:– ಹಾಟೆಲ್ಲಿನಿಂದ....

ಗುಂಡೇ:– ಹಾಟೆಲ್ ಚಹ ಕುಡಿಯೋದಿಲ್ಲ ವಿಠ್ಠಲರಾಯರು.

ವಿಠ್ಠಲ:– ಅಲ್ಲ, ನನ್ನೊಬ್ಬನ ಸಲುವಾಗಿ ಯಾಕ ? ಮತ್ತ ರಂಗರಾಯರs ಮಾಡಬೇಕು ಕಾಣಿಸ್ತದ.

ಗುಂಡೇ:– ಮಾಡೋವರಿದ್ದಾರ. ಹೇಳು ರಂಗಾ.

ರಂಗ:– ಹುಂ. (ರಂಗ ಅಂಜಂಜುತ್ತ ಕೋಣೆಯ ಬಾಗಿಲಲ್ಲಿ ನಿಂತು) 'ಚಹ' (ಎಂದು ತಿರುಗುತ್ತಾನೆ. ರಾಮು ಮತ್ತು ರಂಗ ಕಾಟಿನ ಮೇಲೆ ಕೂಡುತ್ತಾರೆ.)

ವಿಠ್ಠಲ:– (ರಾಮುನ ಕಡೆ ನೋಡಿ) ಇವರ್‍ಯಾರು ?

ಗುಂಡೇ:– ಇವರು ರಾಮುರಾಯರು–ನಮ್ಮ ರಂಗನ ಗೆಳೆಯರು. ಕೂಡೇ ಕಲೀತಾರ. ರಂಗ್ಯಾ, ನೀವಿಬ್ಬರು ಐದು ನಿಮಿಷ ಹೊರಗಿರ್‍ರಿ. ನಮಗ ಬ್ಯಾರೆ ತುಸು ಮಾತಾಡೋದದ. ಕ್ಷಮಿಸ್ರಿ ಹಂ....ರಾಮುರಾವ್.

ರಾಮು:– ಛೆ, ಅದಕ್ಕೇನು ? (ರಾಮು ಮತ್ತು ರಂಗ ಹೊರಗೆ ಹೋಗುತ್ತಾರೆ.)

ಗುಂಡೇ:– ಹಂಗಾರ, ಮುಂದ ಏನಂತೀರಿ ವಿಠ್ಠಲರಾವ್ ?

ವಿಠ್ಠಲ:– ಅದs, ಏನು ಮಾಡೋಣ ಅಂತ ? ನಾ ಊಟಾ ಮುಗಿಸಿಕೊಂಡು, ಒಮ್ಮೆ ಮಗಳ ಖೋಲೀ ಕಡೆಗೆ ಹೋಗಿಬರ್‍ತೀನಿ. ಇರಲಿಲ್ಲ ಅಂದರ.... ಮತ್ತ ಸಾಯಂಕಾಲ ತೋರಿಸೋದೇನು ಆಗೋದಿಲ್ಲ. ನಾಳೆಗೇ ಬಿದ್ಹಾಂಗ. ನಾಳೆ ಕೋರ್ಟಿನೊಳಗೊಂದು ಮುದ್ದತದ. ನಾ ಹೋಗಲಿಕ್ಕೇಬೇಕು. ಏನು ಮಾಡೋಣ ?

ಗುಂಡೇ: ಏನು, ತೋರಿಸೋದೇನು ಕಾರಣಿಲ್ಲ, ವಿಠ್ಠಲರಾವ್.

ವಿಠ್ಠಲ:– (ಗಾಬರಿಗೊಂಡು) ಯಾಕ ಗುಂಡೇರಾಯರ, ಮತ್ತೇನು ವಿಚಾರ ಬದಲಾತೇನು ನಿಮ್ಮ ಮಗನ್ನ ಕೇಳಿದ ಮ್ಯಾಲ ?

ಗುಂಡೇ:– (ಗಂಭೀರರಾಗಿ) ನಮ್ಮ ರಂಗ ನಿಮ್ಮ ಹುಡುಗಿನ್ನ ನೋಡ್ಯಾನ.

ವಿಠ್ಠಲ:– ನೋಡಿರೋ ಸಂಭವ ಅದ. ಯಾಕಂದರ ಒಂದೇ ಕಾಲೇಜಿನೊಳಗ....

ಗುಂಡೇ:– ಅಷ್ಟೇ ಅಲ್ಲ, ಒಂದೇ ಕ್ಲಾಸಿನೊಳಗ ಕಲೀತಾರ.

ವಿಠ್ಠಲ:– ಅಂದ ಮ್ಯಾಲ ಮುಗದsಹೋತು.

ಗುಂಡೇ:– (ಬೇಸರದಿಂದ) ಅದಕ್ಕ ರಂಗನ್ನ ಕೇಳಿದೆ, ಜರೂರಿಲ್ಲ ಅಂದ.

ವಿಠ್ಠಲ:– (ದೈನಾಸದ ದನಿಯಲ್ಲಿ) ಅಂದರ .... ಏನು .... ತಿಳೀಲಿಲ್ಲ ನನಗ. ಅಂದರ .... ಹುಡಿಗಿ .... ಒಪ್ಪಿಗಿ ಅಂಥಾಂಗೋ .... ಹ್ಯಾಂಗ ಅಂತ ?

ಗುಂಡೇ:– (ಬೇಜಾರುಗೊಂಡವರಂತೆ) ಏನು ಹೇಳಲೀ ಇಲ್ಲರೆಪಾ. ನೋಡೀನಿ, ಪುನಃ ನೋಡೋ ಜರೂರಿಲ್ಲ ಅಂತ ಇಷ್ಟs ಅಂದ.

ವಿಠ್ಠಲ:– ಅವರು ಒಪ್ಪಿದರ ಛಲೋ ಆಗ್ತದ ರಾಯರ. ನಮ್ಮ ಹುಡಿಗೀ ಒಪ್ಪಿಗಿ-ಗಿಪ್ಪಿಗಿ ಬಗ್ಗೆ ನೀವು ಕಾಳಜೀನs ಮಾಡಬ್ಯಾಡ್ರಿ. ಆಕಿ ರಂಗರಾಯರ್ನ ನೋಡಿರ್ತಾಳ–ಮಾಡಿರ್ತಾಳ. ನಿಮ್ಮ ಮಗ ಒಪ್ಪಿದರ ನಾ ಎರಡನೇದೇನನ್ನೂ ನೋಡಲಿಕ್ಕೆ ಹೋಗೋದಿಲ್ಲ. ನಿಮ್ಮ ಮಗ ರಂಗ ರಾಯ (ಪ್ರಫುಲ್ಲಿತರಾಗಿ) ಛಲೊ ಇದ್ದಾರ್ರಿಪಾ ! ನನಗ ಕಲ್ಪನಾ ಇರಲಿಲ್ಲ. Hight ಏನು, ಐಟೇನು, ನ್ಯೈ–ಕಟ್ಟೇನು, ಮತ್ತ ಮ್ಯಾಲ ಸ್ಕಾಲರ್! ನಮ್ಮ ಹುಡಿಗೀ ನಶೀಬು ಇದು ಕೂಡಿ ಬಂದರ !

ಗುಂಡೇ:– ಭಗವಂತನ ಇಚ್ಛೆ ಹ್ಯಾಂಗದನೊ ಯಾರು ಕಂಡಾರ? ಇನ್ನೊಂದು ವಿಷಯ. (ತುಸು ಯೋಚನೆಮಾಡಿದವರಂತೆ ತೋರಿಸಿ) ನಮ್ಮ ಹುಡುಗ ನಿಮ್ಮ ಹುಡಿಗಿ ಕೂಡಿ ಒಂದು ನಾಟಕಾ ಮಾಡ್ಯಾರ, ವಿಠ್ಠಲರಾವ್ !

ವಿಠ್ಠಲ:– (ಆಶ್ಚರ್ಯಗೊಂಡು) ಎಲ್ಲಿ ? ಯಾವಾಗ ?

ಗುಂಡೇ:– ಇಲ್ಲೇ ! ನಾ ಒಂದೆ, ಆದs ಅರ್ಧ ನಾಟಕದ ರಂಗತಾಲೀಮು ಮುಗಿದಿತ್ತು !

ವಿಠ್ಠಲ:– (ಇನ್ನಷ್ಟು ಜಿಜ್ಞಾಸೆಯಿಂದ) ಹು ! ಆಶ್ಚರ್ಯನs ! ಮುಂದ ?

ಗುಂಡೇ:– ಅದು ಅರ್ಧನs ಆಗೇದ. ನಾವೂ ನೀವೂ ಕೂಡಿ ಅದನ್ನ ಮುಗಿಸೋಣು.

ವಿಠ್ಠಲ:– ಏನೋ ರಾಯರ, ಈ ಮುಂಡಿಗೀ ಮಾತು ನನ್ನ ಮಂದಬುದ್ಧೀಗೆ ತಿಳಿಯೋದು ಕಠಿಣಾಗ್ತದ.

ಗುಂಡೇ:– ಇಲ್ಲಿ ಬರ್ರಿ. (ಎದ್ದು ದೂರ ರಂಗದ ಕೊನೆಗೆ ಅವರನ್ನು ಕರೆದು ಕೊಂಡು ಹೋಗಿ, ಅವರ ಕಿವಿಯಲ್ಲಿ ತಾವು ಕೇಳಿದ, ನೋಡಿದ ಸಂಗತಿಯನ್ನೆಲ್ಲ ಮಾತು, ಮುದ್ರೆ, ಅಭಿನಯ, ಓಷ್ಠ–ದಂತಗಳ ಚಲನವಲನ ಇವುಗಳಿಂದ ಸೂಚಿಸುವರು. ಅದನ್ನು ಕೇಳಿದಂತೆಲ್ಲ ವಿಠ್ಠಲರಾಯರ ಮುಖದ ಮೇಲೆ ಕುತೂಹಲ, ನಿರಾಶೆ, ಸಂತಾಪ, ಸಮಾಧಾನ, ಉತ್ಸಾಹ, ಹರ್ಷ ಇವುಗಳ ಚಿನ್ಹಗಳು ಕಾಣಿಸಿಕೊಳ್ಳುತ್ತವೆ. ರಂಗದ ಮೇಲೆ ಈ ಮೂಕಾಭಿನಯವು ೨–೩ ನಿಮಿಷ ನಡೆಯುತ್ತದೆ.)

ಗುಂಡೇ:– ಬರ್ರಿ, ನಿಮಗ ನಿಮ್ಮ ಮಗಳ್ನ ತೋರಿಸ್ತೇನಿ. (ಎಂದು ಕೋಣೆಯ

ಬಾಗಿಲಿನ ಹತ್ತಿರ ಕರೆದುಕೊಂಡು ಬರುತ್ತಾರೆ. ವಿಠ್ಠಲರಾಯರು ಮಗಳನ್ನು ನೋಡಿ ಆನಂದಿತರಾಗುತ್ತಾರೆ.)

ವಿಠ್ಠಲ:- ಕುಮಾ, ಬಾ ಹೊರಗ ಬಾ. (ಕುಮಾ, ಬಿಕ್ಕಿ ಬಿಕ್ಕಿ ಅಳುತ್ತ ಹೊರಗೆ ಬರುತ್ತಾಳೆ. ವಿಠ್ಠಲರಾಯರು ಅವಳ ಬೆನ್ನ ಮೇಲೆ ಕೈಯಾಡಿಸಿ) ನೀ ಏನೂ ಹೆದಂಬ್ಯಾಡ. ರಾಯರು ಎಲ್ಲಾ ಸುದ್ದಿ ಹೇಳಿದರು. ನಿನ್ನದೇನೂ ತಪ್ಪಿಲ್ಲ. ಇಷ್ಟs ಅಲ್ಲ, ರಂಗರಾಯರದೂ ತಪ್ಪಿಲ್ಲ. ರಂಗರಾಯರಿಗೆ ನಿನ್ನ ಕೊಡಬೇಕು ಅಂಬೋ ವಿಚಾರದಿಂದನs ಗುಂಡೇರಾಯರ್ನ ಕರಕೊಂಡು ಬಂದೆ. ರಾಯರು ಒಪ್ಪಿಕೊಂಡಾರ. ಇನ್ನ ರಂಗರಾಯರ್ನ ಅಷ್ಟು ಕೇಳೋದು, ನಿಶ್ಚಯ ಹಾಕಿಬಿಡೋದು. ನಿನಗೂ ಒಪ್ಪಿಗೆ ಅದ ಹೌದಲ್ಲೊ ?

[ಕುಮಾನ ಮುಖದ ಮೇಲೆ ಸಂತೋಷದ ಚಿನ್ಹಗಳು ಮೂಡುತ್ತವೆ. ಅವಳು ನಾಚಿಕೊಂಡು, ಮುಖ ಮರೆಮಾಡಿಕೊಂಡು ಒಳಗೆ ಹೋಗುತ್ತಾಳೆ.]

ಗುಂಡೇ:- ವಿಠ್ಠಲರಾವ್, ರಂಗನ್ನ ಅಷ್ಟು ಕರೆಸಿ ಹೇಳಿಬಿಡೋಣಂತ. (ತಾವೇ ಹೊರಬಾಗಿಲ ವರೆಗೆ ಹೋಗಿ ರಂಗನನ್ನು ಕೂಗುತ್ತಾರೆ. ರಂಗ ಮತ್ತು ರಾಮ ಇಬ್ಬರೂ ಬರುತ್ತಾರೆ. ದನಿ ತುಸು ಗಡುಸು ಮಾಡಿ) ಏ ರಂಗಾ, ಇಲ್ಲೇ ಎದುರಿಗೆ ನಿಲ್ಲು. (ಅವನು ಹಾಗೆ ಮಾಡುತ್ತಾನೆ.) ನಾವು ಇಬ್ಬರೂ ಕೂಡಿ ವಿಚಾರ ಮಾಡೀವಿ. ನೀನು ಮತ್ತು ಇವರ ಮಗಳು—ಇಬ್ಬರೂ—ತುಸು ಹೆಚ್ಚು ಕಡಿಮೆ ಅಷ್ಟೇ ಅಪರಾಧಿಗಳಿದ್ದೀರಿ! ಇನ್ನ ಇದು ಈ ಚಾಳಿನ ಮಾಲಕಗ ಗೊತ್ತಾತು ಅಂದರ ಅಂವ ಸುಮ್ಮನs ಬಿಡೂವಲ್ಲ! ಪೋಲೀಸರು, ಕೋರ್ಟು, ಏನಾದರೂ ಆಗೋದು! ನೀನು ಇವರ ಮಗಳ್ನ ಒಪ್ಪಿ ಮದಿವೀ ಮಾಡಿಕೊಳ್ಳಿಕ್ಕೇಬೇಕು! ಅದೇನ ಬಿಟ್ಟದ್ದಲ್ಲ. ಇನ್ನೇನು, ಈ ವ್ಯವಹಾರದೊಳಗ ಅವರು ಕೊಟ್ಟಷ್ಟು ವರದಕ್ಷಿಣೆ ನಾ ತಗೋಬೇಕಾಗ್ತದ. ಉಪಾಯ ಇಲ್ಲ. ಅದಕ್ಕೊ ನಾ ಸಂತೋಷದಿಂದ ಕಬೂಲಿದ್ದೀನಿ ಯಾಕ್ರಿ ರಾಮರಾವ್, ಇದು ಯೋಗ್ಯ ಶಾಸನ ಆಗ್ತದೋ ಇಲ್ಲೊ ನಿಮ್ಮ ರಂಗ್ಯಾಗ ?

ರಾಮ:- ಅಂವಗ ಹಿಂಗs ಆಗಬೇಕಾಗಿತ್ತು. ತಕ್ಕ ಶಾಸನಾತು! ರಾಯರ, ಇದರೊಳಗ ಅವನ್ನೇನು ಕೇಳೋದು? ಶಿಕ್ಷಾ ಕೊಡುವವರು ಅಪರಾಧಿನ್ನ

ಕೇಳಿ ಕೊಡ್ತಾರೇನು? ಇದನ್ನ ಕಾಯಂ ಮಾಡೇಬಿಡ್ರಿ! ಹುಂ ಅನ್ನೋ ರಂಗ್ಯಾ.

ರಂಗ:— (ರಾಮೂನ ಕಡೆಗೆ ನಗುಮುಖದಿಂದ ನೋಡುತ್ತ) ನನಗ ಮಾನ್ಯ ಅದ!

ವಿಠ್ಠಲ:— ಕುಮಾ, ಅದೇನು ಚಹಾ ಕಾಫಿ ಏನಾದರೂ ಮಾಡಿದ್ದರ ತಂದು ಕೊಟ್ಟುಬಿಡವ್ವಾ.

ಕುಮಾ:— (ಬಾಗಿಲಲ್ಲಿಯೇ ನಿಂತು) ನಾ ಚಹ ಮಾಡೇ ಇಲ್ಲ. ಹಾಲು ಅದ ಬೇಕಾದರ.

ಗುಂಡೇ:— ಬಹಳ ಛಲೋ ಆತು. ಎಲ್ಲಾರಿಗೂ ಹಾಲು ಸಕ್ಕರೆ! ಹಾಲು ಅದನೋ ಇಲ್ಲೋ ಸಾಕಷ್ಟು?

ರಂಗ:— ಓ, ಅದ. ದಿನಾಲು ಸೇರು ಹಾಲು ತಗೋತೀನಿ.

[ಎಲ್ಲರೂ ಕೂಡುತ್ತಾರೆ. ರಂಗ ಕೋಣೆಯ ಬಾಗಿಲ ಬಳಿ ಹೋಗುವಷ್ಟರಲ್ಲಿ ಕುಮಾ ಹಾಲಿನ ಕಪ್ಪುಗಳನ್ನು ತಟ್ಟೆಯಲ್ಲಿ ತಂದು ರಂಗನ ಕೈಯಲ್ಲಿ ಕೊಡುತ್ತಾಳೆ. ಅದನ್ನು ಕೊಡುವಾಗ ರಂಗನನ್ನು ಪ್ರೇಮದೃಷ್ಟಿಯಿಂದ ನೋಡುತ್ತಾಳೆ. ರಂಗ ಹಾಲಿನ ಕಪ್ಪುಗಳನ್ನು ಎಲ್ಲರ ಮುಂದೆ ಹಿಡಿಯುತ್ತಾನೆ. ಎಲ್ಲರೂ ತೆಗೆದುಕೊಳ್ಳುತ್ತಾರೆ.]

ಗುಂಡೇ:— ರಂಗಾ, ಕುಮಾನ ಹೊರಗ ಕರಿ. ನಮ್ಮ ಜೋಡಿಗೆ ಆಕೀನೂ ಹಾಲು ಕುಡೀಲಿ. ಒಬ್ಬಾಕೇ ಒಳಗ್ಯಾಕ?

ವಿಠ್ಠಲ:— ಕರೀರಿ. ಅವಶ್ಯ ಕರೀರಿ.

ರಂಗ:— (ಬಾಗಿಲ ಬಳಿ ಹೋಗಿ) ಮಿ—ಮಿ—ಕು— ಹೊರಗs ಬರಬೇಕಂತ.

ಗುಂಡೇ:— ರಂಗ್ಯಾ, ಮಿ—ಕು—ಮಿ—ಕು ಅಂತ ಏನು ಅಂದಿ?

ರಂಗ:— ಮಿಸ್ ದೇಶಪಾಂಡೆ ಅಂತ ಅನಲಿಕ್ಕೆ ಹೋದೆ, ಬ್ಯಾಡನಿಸಿತು.

ಗುಂಡೇ:— ಮತ್ತ 'ಕು' ಏನು?

ರಂಗ:— ಕುಮು ಅಂತ ಕರೀಬೇಕು ಅಂತ ಮಾಡಿದ್ದೆ. ನೀವಿದ್ದೀರಿ ಅಂತ ಬಿಟ್ಟೆ!

[ಕುಮಾ ಬರುತ್ತಾಳೆ. ರಂಗ ಮತ್ತು ರಾಮು ಕಾಟಿನ ಮೇಲಿಂದ ಎದ್ದು ಅವಳಿಗೆ ಜಾಗ ಮಾಡಿಕೊಡುತ್ತಾರೆ.]

ಗುಂಡೇ:— ಅಲ್ಲಿ ಕೂಡು. (ಕುಮಾ ಕೂಡುತ್ತಾಳೆ. ಎಲ್ಲರೂ ಹಾಲು ಕುಡಿಯುತ್ತಾರೆ.) ವಿಠ್ಠಲರಾವ್, ಎಲ್ಲರೂ ಇಲ್ಲೇ ಕೂಡಿ ಉಂಡರ ಹ್ಯಾಂಗ?

ವಿಠ್ಠಲ:— ಬ್ಯಾಡ ರಾಯರ, ನನಗ ಆ ಸ್ನೇಹಿತನ ಕಡೆಗೆ ಕೋರ್ಟ್ ವ್ಯವಹಾರ

ಕ್ಕಾಗಿ ಹೋಗsಬೇಕಾಗೇದ.

ಕುಮಾ:– ನಾನೂ ಒಬ್ಬ ಗೆಳತಿಗೆ ಊಟಕ್ಕ ಬರ್ತೀನಿ ಅಂತ ಹೇಳೀನಿ. ಆಕಿ ದಾರಿ ಕಾಯ್ತಿರಬಹುದು.

ಗುಂಡೇ:– ಒಳ್ಳೇದು, ಆಗಲಿ ಹಂಗಾರ. ಸಾಯಂಕಾಲ ನಿಶ್ಚಯದ ಕೆಲಸವಷ್ಟು ಮುಗಿಸಿಬಿಡೋಣ, ವಿಠ್ಠಲರಾಯರ.

ವಿಠ್ಠಲ:– ಓಹೊ, ಅವಶ್ಯ. ನಾ ಏಳಕ್ಕs ಬರ್ತೀನಿ.

[ಕುಮಾ ಎಲ್ಲ ಕಪ್ಪುಗಳನ್ನೊಯಿದು ಒಳಗಿಡುತ್ತಾಳೆ. ಹೊರಗೆ ಬಂದು ತನ್ನ ಕೈಚೀಲವನ್ನು ತಕ್ಕೊಳ್ಳುತ್ತಾಳೆ.]

ಗುಂಡೇ:– ಹಂ, ಅದರೊಳಗಿನ ಆ ನಿಮ್ಮ ಪತ್ತಲ ರಂಗ್ಯಾಗ ಕೊಟ್ಟೆದ್ದು ಹೌದಲ್ಲೊ– ಅದು ಅನಕಾತ ಇಲ್ಲೇ ಇರತಕ್ಕದ್ದು! ಇನ್ನೂ ಕೆಲವು ದಿವಸ ಅದು ಅಂವಗ ಬೇಕಾದೀತು! ಅದರ ಬದಲಾಗಿ ಇವತ್ತು ಸಾಯಂಕಾಲ ನಿನಗೊಂದು ಹೊಸ ಪತ್ತಲ ಬರ್ತದ! ಅದನ್ನೊಯ್ದು ಇದನ್ನ ರಂಗ್ಯಾಗ ಕೊಟ್ಟುಬಿಡು.

[ಕುಮಾ ನಗೆಯನ್ನು ಪ್ರಯಾಸದಿಂದ ತಡೆಯುತ್ತ ಚೀಲದೊಳಗಿಂದ ಪತ್ತಲವನ್ನು ತೆಗೆದು ರಂಗನ ಕೈಯಲ್ಲಿ ಕೊಡುತ್ತಾಳೆ. ಅವನು ಅದನ್ನು ಮೊದಲಿನಂತೆ ತಂತಿಯ ಮೇಲೆ ಹಾಕುತ್ತಾನೆ.]

ವಿಠ್ಠಲ:– ಬರ್ತೀವಿನ್ನ ನಮಸ್ಕಾರ. ಕುಮಾ, ಹಿರಿಯರಿಗೆ ನಮಸ್ಕಾರ ಮಾಡು.

[ಕುಮಾ ಸಂಪ್ರದಾಯದಂತೆ ಎಲ್ಲರಿಗೂ ನಮಸ್ಕಾರ ಮಾಡುತ್ತಾಳೆ. ಎಲ್ಲರೂ ಅವರನ್ನು ಬಾಗಿಲ ವರೆಗೆ ಕಳಿಸುವಾಗ]

ತೆರೆ ಬೀಳುತ್ತದೆ.

ಅತಿಥಿ ಸಾರ್ವಭೌಮ

★

ಪಾತ್ರಗಳು :

ರಾಮಣ್ಣ:	ಯಜಮಾನ
ಹಣಮಂತರಾಯ:	ರಾಮಣ್ಣನ ಗೆಳೆಯ
ದುರ್ವಾಸ:	ಅತಿಥಿ
ಶಾಂತಿ:	ದುರ್ವಾಸನ ಹೆಂಡತಿ

ದೃಶ್ಯ ೧

[ರಾಮಣ್ಣನ ಮನೆ. ರಾಮಣ್ಣ ಶನಿವಾರ ಎಂದು ಕೆಲಸದಿಂದ ಬೇಗ ಮನೆಗೆ ಬಂದಿದ್ದಾನೆ. ಹಣಮಂತರಾಯ ಹರಟೆಕೊಚ್ಚಲು ಬರುತ್ತಾನೆ.]

ಹಣಮಂತರಾಯ:– ಯಾಕೊ ರಾಮಣ್ಣಾ, ಒಬ್ಬನೇ ಏನು ಆಲೋಚನಿ ನಡಿಸೀದಿ? ಚಿಂತಾಕ್ರಾಂತನಾಗಿ ಕೂತಿದ್ದೀಯಲ್ಲ, ಮಿತ್ರಾ? ಅಂಥ ಸಂಕಟೇನು ಬಂದದೊ ?

ರಾಮಣ್ಣ:– ಬಂದದ, ಬಾರಪಾ ಮಾರಾಯಾ. ಆಫೀಸಿನಿಂದ ಬರೋ ಪುರಸತ್ತಿಲ್ಲದ ಎದೀಗೆ ಗುಂಡು ಹೊಡೆದ್ಹಾಂಗ ಪತ್ರ !

ಹಣಮಂತ:– ಎಲ ಎಲ ! ಯಾರದು ? ಏನು ?

ರಾಮ:– ಅದನ್ನ ಕೇಳಬ್ಯಾಡ. ಒಂದೊಂದು ಅಂದರ ಅತಿಥಿಗಳು ಬರೋದು ಪತ್ರ. ಹಾಂಗ ಮೃತ್ಯುಪತ್ರ ಸಹಿತ ನಮಗ ಯಾವೂ ಬರೋದಿಲ್ಲ ನೋಡು !

ಹಣಮಂತ:– ಅಲ್ಲೊ ? ಈ ಅತಿಥಿಗಳ ಉಪಟಳಕ್ಕ ಬ್ಯಾಸತ್ತ ನೀ ಮತ್ತ ಈಗ ಊರ ಹೊರಗ ಮನೀ ಮಾಡಿದಿ. ಮನಿ ಬದಲು ಮಾಡಿದ್ದು ಸಹಿತ

ಯಾರಿಗೂ ತಿಳಿಸಲಿಲ್ಲ ....

ರಾಮ:– ಇಲ್ಲ. ಇಷ್ಟು ಯಾಕ, ಪ್ರೊಫೆಸ್ಸರನ್ನ ಸಹಿತ ನಾ ಹೊಸಾ ಮನೆ ಅಡ್ರೆಸ್ ಕೊಟ್ಟಿಲ್ಲ. ಆದರೂ ಆ ಮಾಗ ಅಧಿಕಪ್ರಸಂಗತನ ಮಾಡಿ ಪತ್ರ ಇಲ್ಲಿಗೇ ಕಳಿಸ್ಯಾನ! ನನಗ್ಯಾಕೊ ಇತ್ತೀಚೆಗೆ ಇನೊಂದು ಶಾಕ್ ಕೂತ್ಹಾಂಗ ಆಗೇದ! ಮತ್ತ ನನಗ ನಿಶ್ಚಿತದ: ನಾ ಸಾಯೋದು ಆದರ, ಉಳಿವ ಯಾವ ರೋಗದಿಂದಲೂ ಸಾಯೋದಿಲ್ಲ; ಈ ಅತಿಥಿಗಳು ಕೊನೀಗೆ ನನ್ನ ಪ್ರಾಣಹರಣ ಮಾಡ್ತಾರ ಅಂತ!

ಹಣಮಂತ:– ಯಾರಾರೇ ಹುಚ್ಚ ಅಂದಾರು!

ರಾಮ:– ಇಲ್ಲ, ನಿನಗಿನ್ನೂ ಇದರ ಕಲ್ಪನಾ ಇಲ್ಲ. ಇತ್ತೀಚೆಗೆ ನನಗ ಬರೋ ಪತ್ರಗಳನ್ನ ನಾ ಓದೋದು ಬಿಟ್ಟುಬಿಟ್ಟೇನಿ. ಇಷ್ಟು ಯಾಕ, ಊರೊಳಗ ಹೊರಟಾಗ ಯಾವುದರೆ ಹೊಸ ಮುಖ ಕಣ್ಣಿಗೆ ಬಿತ್ತು ಅಂದರ, ನನ್ನ ಕಡೇ ಅತಿಥಿ ಬಂದನೇನೊ ಅಂತನಿಸಿ, ನಾ ಹಾದೀನ ತಪ್ಪಿಸ್ತೇನಿ! ಅಲ್ಲೊ, ಈ ಅತಿಥಿಗಳಂದರಾದರೂ ಎಷ್ಟು ನಮೂನಿ ಬರ್ತಾರಂತಿ? ಸ್ನೇಹಿತ ಅತಿಥಿಗಳು, ಆಪ್ತ ಅತಿಥಿಗಳು, ಪ್ರವಾಸಿ ಅತಿಥಿಗಳು ಪರೀಕ್ಷೆಯ ಅತಿಥಿಗಳು, ವರಾನ್ವೇಷಣದ ಅತಿಥಿಗಳು, ಸಭೆ ಸಮ್ಮೇಲನದ ಅತಿಥಿಗಳು, ಚೈನೀ ಅತಿಥಿಗಳು, ದೇಶಭಕ್ತ ಅತಿಥಿಗಳು– ಒಂದಲ್ಲ ಎರಡಲ್ಲ, ಕೆಲವರು ಧೂಮಕೇತುವಿನ್ಹಾಂಗ ಒಮ್ಮೆಲೇ ಮೂಡ್ತಾರ; ಕೆಲವರು ಕಟ್ಟಿನ ಜ್ವರಧಾಂಗ ಪಟ್ ಹಿಡದು ಕೂತುಬಿಡ್ತಾರ!

ಹಣಮಂತ:– ಈಗ ಬರೋವರು ಯಾವ ನಮೂನಿಯೊಳಗ ಬರ್ತಾರಂತಿ ನೀನು?

ರಾಮ:– ಈ ಪತ್ರಾನ ಓದು. ಘಾಬರಿಯಿಂದ ನಾ ಇದನ್ನ ನೆಟ್ಟಗ ಓದಲೇ ಇಲ್ಲೇನಪಾ! ಘಟ್ಟ್ಯಾಗೇ ಓದಿಬಿಡು. ನನಗೂ ಅದರ ಮಜಕೂರು ನೆಟ್ಟಗ ಇನ್ನೊಮ್ಮೆ ತಿಳೀಲಿ.

ಹಣಮಂತ:– ಓದಲ್ಯಾ? ಕೇಳು ಹಾಗಾರೆ. (ಪತ್ರವನ್ನು ತೆರೆದು ಓದುತ್ತಾನೆ)

ಪ್ರಿಯ ರಾಮರಾವ್,

ಬಹಳ ದಿವಸಗಳಿಂದ ನಿನ್ನಿಂದ ಪತ್ರಿಲ್ಲ. ನೀನು ಬ್ಯಾರೆ ಮನೀ ಹಿಡಿದೀದಿ ಅಂತ ತಿಳೀತು. ಬದಲಾದ ವಿಳಾಸ ತಿಳಿಸಲಿಲ್ಲ. ಅಂತನ ಈಗ ಹಳೇ ಅಡ್ರೆಸ್ಸಿಗೇ ಕಾಗದಾ ಬರೆದೇನಿ. ಹೊಸತಾಗಿ ಮದಿವ್ಯಾದ ನನ್ನ ಈ ಗೆಳೆಯ ಶ್ರೀ. ದುರ್ವಾಸ ದೇಶಪಾಂಡೆ, ತನ್ನ ಹೆಂಡತಿಗೆ ಊರು ತೋರಿಸ

ಬೇಕು ಅಂತ, ನಾಳೆ ರಾತ್ರೀ ಗಾಡಿಯಿಂದ ಅಲ್ಲಿಗೆ ಬರ್ತಾನೆ. ಅವರ್ನ ಸ್ಟೇಶನ್‌ನಿಂದ ಕರಕೊಂಡು ಹೋಗಿ, ನಾಲ್ಕು ದಿವಸ ಮನ್ಯಾಗಿಟ್ಟು ಕೊಂಡು, ಎಲ್ಲಾ ವ್ಯವಸ್ಥಾ ಮಾಡಬೇಕು. ಅವರಿಗೆ ಸರಿಯಾಗಿ ಆದರೋಪ ಚಾರಮಾಡು ಅಂತ ನಿನಗ ಬರಿಯೋ ಕಾರಣಿಲ್ಲ. ನಿಮ್ಮೂರಿಗೆ ಬಂದರ ಎಲ್ಲಿ ಇಳೀಬೇಕು— ಅಂತ ಅವನು ಯೋಚನಿಯೊಳಗ ಇದ್ದಾಗ, ನಾನs ನಿನ್ನ ಹೆಸರು ಹೇಳಿ ಕಳಿಸೀನಿ. ಆಯ್ತಾ ಹೊತ್ತಿಗೆ ಪತ್ರ ಬರೆದದ್ದಕ್ಕ ಕ್ಷಮಿಸು. ಅತ್ತಿಗ್ಗೆ ನಮಸ್ಕಾರ, ಅರವಿಂದಗ ಆಶೀರ್ವಾದ.

ನಿನ್ನ

ನರಸಿಂಹ ಇನಾಮತಿ

ಅಲ್ಲಪಾ ರಾಮಣ್ಣಾ, ಈ ನಿನ್ನ ಜೀವಶ್ಚ ಮಿತ್ರ ನರಸಿಂಹ, ತನ್ನ ಕಂಠಶ್ಚ ಮಿತ್ರನ್ನ ಕಳಿಸಿ ನಿನ್ನ ಕೊರಳಿಗೆ ಉರ್ಲು ಮಾಡೋದು ಅಂದ್ರ ಎಲ್ಲೀ ನ್ಯಾಯ?

ರಾಮು:– ಮತ್ತ, ಈ ಮಗ ನರಸಿಂಹ ಇಷ್ಟು ಹೆಕ್ಕೀಲೆ ಈಗ ಪತ್ರ ಬರೀತಾ ನಲ್ಲಾ! ಇವನ ಮನೀಗೆ ನಾ ಅಪರೂಪಧಾಂಗ ಒಮ್ಮೆ ಅತಿಥಿ ಅಂತ ಹೋದ್ರ, ನನ್ನ ಮಾರೀ ನೋಡಿ, ಹುಡತೀನ್ನ ಹೊರಗ ಕೂಡಿಸಿದ ಲುಚ್ಚಾ!

ಹಣಮಂತ:– ಮುಂದ?

ರಾಮು:– ಮುಂದೇನು? ಎಲ್ಲಾರೂ ಕೂಡೇ ಖಾನಾವಳೀಗೆ ಹೋದಿವಿ. ಮತ್ತ ಅದರ ಬಿಲ್ಲು ನಮಗ ಬಡಕೊಂಡಿತು!

ಹಣಮಂತ:– ಅಲ್ಲೊ ರಾಮಣ್ಣಾ, ಈಗ ಆ ನಿನ್ನ ಗೆಳೆಯನ ಗೆಳೆಯ ದುರ್ವಾಸ ಬರ್ತಾನಲ್ಲಾ- ನೀನೂ ಹೀಂಗ ಮಾಡಿ ಹಿಂದಿನ ಸೇಡು ತೀರಿಸು ಅಂತೀನಿ.

ರಾಮು:– ಹೋಗೋ ನಿನ, ನನ್ನ ಹೆಂತ್ತಿ ಇಂಥಾವೆಲ್ಲಾ ಮಾಡಲಿಕ್ಕೆ ತಯಾ ರಾಗೋದಿಲ್ಲ, ಮಾರಾಯ!

ಹಣಮಂತ:– (ತುಸು ಯೋಚಿಸಿದಂತೆ ಮಾಡಿ) ಒಂದು ಯುಕ್ತಿ ಹೇಳ್ತೀನಿ, ಮಾಡ್ತಿಯೇನು ?

ರಾಮು:– ಏನು? ಈಗ ಹೇಳಿದಂಥಾದs ಹುಚ್ಚುಚ್ಚಾರ ಏನಾರೇ ಹೇಳಬ್ಯಾಡ.

ಹಣಮಂತ:– ಉಂಹುಂ. First Class ಯುಕ್ತಿ! ಈ ದುರ್ವಾಸ ನಿನ್ನ ಎಂದsರೆ ನೋಡ್ಯಾನೇನು ?

ರಾಮು:– ಎಲ್ಲಿದೋ? ಈ ಕಾಲದಾಗ ಈ ಹೆಸರಿನವರು ಇರ್ತಾರಂಬೋದು ಸಹಿತ ಇದs ಮೊದಲನೇ ಸಲ ಕೇಳೋದು ನಾನು.

ಹಣಮಂತ:– ಇದೊಂದು ಚಲೋನs ಆತು. ಇದು ನೋಡು, ಹೀಂಗ ಮಾಡು ಹಂಗಾರ: ಈ ದುರ್ವಾಸ ಇಂದು ರಾತ್ರೀಗಾಡಿಗೆ ಬರ್ತಾನಲ್ಲ. ನೀ ಹೋಗsಬ್ಯಾಡ ಸ್ಟೇಶನ್ನಿಗೆ.

ರಾಮು:– ಮತ್ತ? ಅವಗ ಮನಿ ಗೊತ್ತಿಲ್ಲ, ಫಜೀತಿ ಆಗೋದು!

ಹಣಮಂತ:– ಆಗಲಿ.

ರಾಮು:– ಛೆ, ಛೆ. ಜೇಕಂತ ಮಾಡಿಧಾಂಗಾಗ್ತದ.

ಹಣಮಂತ:– ಹಂಗಾರ ನಿನ್ನ ಒದಲಾಗಿ ನಾ ಹೋಗ್ತೇನಿ.

ರಾಮು:– ಹೋಗಿ?

ಹಣಮಂತ:– ರಾಮಣ್ಣ ಊರಾಗಿಲ್ಲ ಅಂತ ಹೇಳಿಬಿಡ್ತೇನಿ.

ರಾಮು:– ನಾ ಊರಾಗಿಲ್ಲದಿದ್ದರೂ ಮನಿ ಇರ್ತದಲ್ಲಾ ಅಂತ ಮನೀಗೇ ಬಂದ ಅಂದರ, ನಮ್ಮ ಸುಳ್ಳು ಹೊರಬೀಳೋದು.

ಹಣಮಂತ:– ಅದೂ ಖರೇನ! ಒಂದೊಂದು ಅಂಥ ಜಿಗುಟು ಅಸಾಮಿನs ಇರ್ತಾವ! ನೀವು ಜೇಕಾದ ಯುಕ್ತಿ ಮಾಡರಿ, ಎಲ್ಲಕ್ಕೂ ಮೀರಿ ನಿಂತ್ರ ಏನು ಮಾಡೋದು? ಹಂಗಾರ ಇದು ನೋಡು, ನಾ ರಾತ್ರೀಗಾಡಿಗೆ ಹೋಗೋ ಹಾಂಗ ಹೋಗ್ತೇನೇನಪಾ! ಮತ್ತ ರಾಮಣ್ಣ ಊರಾಗಿಲ್ಲ ಅಂತನೂ ಹೇಳ್ತೇನಿ. ಅಷ್ಟಕ್ಕೆ ಅವ ಇಳಕೊಂಬೋ ವಿಚಾರ ಬ್ಯಾರೆ ಮಾಡಿದ, ಪೀಡಾನs ಪರಿಹಾರಾಯ್ತು. ಮತ್ತೂ ಜಗ್ಗಿನs ಬಿದ್ದ, ಅವನ್ನ ಮನೀಗೆ ಕರಕೊಂಡು ಬರ್ತೇನಿ. ನೀನೂ ಒಬ್ಬ ಅತಿಥಿ ಅಂತs ಹೇಳಿ ಬಿಡ್ತೇನಿ ಮತ್ತ! ನೀನೂ ಅತಿಥಿ ಹಾಂಗs ಬತಾವಣೆ ಮಾಡು ಆತು.

ರಾಮು:– ಮತ್ತ ಈಕಿ, ಅರವಿಂದ? ಅವರ ಗತಿ ಏನು?

ಹಣಮಂತ:– ಅನಕಾತ ನಾಲ್ಕಾರು ದಿವಸ ಅತ್ತಿಗೆ–ಅರವಿಂದನ್ನ ನಮ್ಮ ಮನಿಗೆ ಕಳಿಸು. ಅತ್ತಿಗೇನೂ ಬ್ಯಾಸರಾ ಕಳಕೋಬೇಕು ಅಂತಿದ್ಲು. ಆಯ್ತಾ ಸಾಧಿಸ್ತದ.

ರಾಮು:– ಹೌದು ನೋಡು. ಈ ಹಂಚಿಕೆ ಒಂದು ಮೋಜs ಅದ, ಹನುಮಣ್ಣ! ಒಪ್ಪಿತು. ಒಂದು ಪ್ರಯೋಗ ಮಾಡಿ ನೋಡೋಣಂತ. ಲಾಗೂ ಬಿತ್ತು, ಗುಣಾನs ಆತು.

ದೃಶ್ಯ ೨

[ಗಾಡಿ ಆಗ ಮಾತ್ರ ಬಂದಿದೆ. ಪ್ಲ್ಯಾಟ್‌ಫಾರ್ಮಿನ ಮೇಲೆ ಹಣಮಂತ ರಾಯ ದುರ್ವಾಸ ದಂಪತಿಗಳನ್ನು ಅನುಮಾನದಿಂದ ಗುರುತಿಸಿ ಮಾತ ನಾಡಿಸುತ್ತಾನೆ.]

ಹಣಮಂತ:– ನಮಸ್ಕಾರ. ತಾವು ದುರ್ವಾಸ ದೇಶಪಾಂಡೆಯುವರೇನ.?

ದುರ್ವಾಸ: – ಹೌದು. ನಮಸ್ಕಾರ. ತಾವು ಯಾರು? ರಾಮರಾಯರೇನು?

ಹಣಮಂತ:– ಅಲ್ಲ. ನಾನು ರಾಮಣ್ಣನ ಸ್ನೇಹಿತ ಹನುಮಣ್ಣ. ನೀವು ಒರೋ ಕಾಗದ ರಾಮಣ್ಣನ ಮನೀಗೆ ಬಂದಿತ್ತು. ರಾಮಣ್ಣ ಊರೊಳಗಿಲ್ಲ. ನಾಲ್ಕು ದಿವಸದ ರಜಾದ ಮ್ಯಾಲ ಹೋಗ್ಯಾನ.

ದುರ್ವಾಸ:– ಎಲಾ ಇವರ! ಅವರ ಮನೆಯವರಿರಬಹುದಲ್ಲ?

ಹಣಮಂತ:– ಅವರೂ ಇಲ್ಲ. ಎಲ್ಲಾರೂ ಹೋಗ್ಯಾರ.

ದುರ್ವಾಸ:– ಹಂಗಾರ....ಏನು ಮಾಡಬೇಕು? (ಯೋಚಿಸಿ) ಹೀಂಗ ಮಾಡ್ರಿ. ನಮಗ ಅವರ ಮನೀನs ತೋರಿಸಿಬಿಡ್ರಿ. ಅದೆಲ್ಲಿ ಬ್ಯಾರೆ ಹೋಗೋದಿಲ್ಲ? ರಾಮರಾಯರು ನಮ್ಮ ನರಸಿಂಹ ಇನಾಮತಿಯ ಕೇವಲ ಸ್ನೇಹಿತರು. ಅಂದ್ರ ನಮಗೂ ಅಷ್ಟs ಸ್ನೇಹಿತರು ಅನ್ರಿ. ಅವರು ಬರೋವರಿಗೂ ನಾವು ಅವರಲ್ಲೇ ಇರ್ತೀವಿ. ಅದಕ್ಕೇನು? ಮಾಲಕರು ಬರೋವರಿಗೂ ಮನೀ ಕಾಯ್ತಿರ್ತೀವಿ. ದಿವಸ ಕಾಲ ಕೆಟ್ಟವು ನೋಡ್ರಿ!

ಹಣಮಂತ:– ಅದಕ್ಕೇನಡ್ಡಿಯಿಲ್ಲ ಬಿಡ್ರಿ! ಆದರ ಈಗೊಬ್ಬರು ಅತಿಥಿಗಳು ಅವರ ಮನ್ಯಾಗ ಇದ್ದಾರ! ಅದಕ್ಕs ಹ್ಯಾಂಗ ಮಾಡೋವ.?

ದುರ್ವಾಸ:– ಹೀಂಗs? ಅಂದಮ್ಯಾಲಂತೂ ಬಹಳs ಚಲೋ ಆತು. ನಾವೂ ಅವರ ಜತೀಗೆ ಇರಲಿಕ್ಕೆ ಯಾವ ಹರಕತ್ತೂ ಇಲ್ಲ. ಏ ಶಾಂತೀ! ಶಾಂತೀ!

ಶಾಂತಿ:– ಓsss

ದುರ್ವಾಸ:– ನಡಿ. ರಾಮಣ್ಣನ ಸ್ನೇಹಿತರು ಬಂದಾರ ನಮ್ಮನ್ನ ಕರೀಲಿಕ್ಕೆ. ರಾಮಣ್ಣವರ ಮನಿ ಖಾಲೀನ ಅದ ಅಂತ! ನೆಟ್ಟಗಾತೊ ಇಲ್ಲೊ? ಹನುಮಣ್ಣ, ಈಗಿದ್ದ ಅತಿಥಿಗಳು ಒಬ್ಬರs ಇದ್ದಾರೊ?

ಹಣಮಂತ:– ಒಬ್ಬರs ಇದ್ದಾರ.

ದುರ್ವಾಸ:– ಹೆಸರು?

ಹಣಮಂತ:– ಬರೇ ರಾಮಣ್ಣ ಅಂತ. ರಾಮಣ್ಣಾ ಅಂದರೂ ನಡೀತದ.

ದುರ್ವಾಸ:– ಅಡ್ಡಿ ಇಲ್ಲ. ನಿಮ್ಮನ್ನ ನೋಡಿದರ ನಮಗ ರಾಮಣ್ಣಾ ಇಲ್ಲ ಅಂತ ಅನಿಸವೊಲ್ಲದು! ಹನುಮಣ್ಣಾ, ಇದಷ್ಟು ಹೋಲ್ಡಾಲ್ ತಗೋತೀರೇನು? ಸುಮ್ಮಗ ಹಮಾಲಗ್ಯಾಕ ದಂಡಾ ಬಡೀಬೇಕು? ನನ್ನ ಕೈ ತೆರವಿಲ್ಲ. ಒಂದು ಕೈಯಾಗ ಕೊಡೆ, ಇನ್ನೊಂದು ಕೈಯಾಗ ಬೋತರದ ಚುಂಗೂ ಅದ!

ಹಣಮಂತ:– ತರ್ರಿ, ರಾಯರ. ನಿಮ್ಮ ವಜ್ಜಾ ಹಗುರು ಮಾಡಬೇಕಂತs ನಾ ಬಂದೀನಿ! ಮತ್ತ, ಟಾಂಗಾ ಮಾಡಬೇಕೇನು?

ದುರ್ವಾಸ:– ಇನ್ನ ನಮ್ಮನ್ನ ಯಾವುದೂ ಕೇಳಬ್ಯಾಡರಿ, ಹನುಮಣ್ಣಾ. ಅದನ್ನೆಲ್ಲ ನೀವs ನೋಡ್ರಿ. ಮನಿ ಬಹಳ ದೂರಿತ್ತು, ಟಾಂಗಾ ಮಾಡ್ರಿ. ಮೈಲೆರಡು ಮೈಲಿನೊಳಗಿದ್ದರೇನು ಕಾರಣಿಲ್ಲ. ಅಷ್ಟs ನಡದಷ್ಟs ಗಂಟು. ಹಿಡಿದ ಕಾಲು ಸಡಿಲಾದಾವು. ಮತ್ತ ಒಂದು ಹಿಡಿ ಅನ್ನಾನೂ ಹೆಚ್ಚು ಹೋದೀತು.

ಹಣಮಂತ:– ಹೋಗದೇನು ರಾಯರ! ನಡದರ ಹೊಟ್ಟಿ ಚಲೋ ಹಸೀತದ. (ತನ್ನಷ್ಟಕ್ಕೆ) ಎಲಾ ಲುಚ್ಚಾ! ಒರೋ ಪುರಸತ್ತಿಲ್ಲದ ನನ್ನ ಹಮಾಲನ್ನ ಮಾಡಿ ಹೋಲ್ಡಾಲ್ ಹೊರಿಸಿದ್ನಲ್ಲ!

ದೃಶ್ಯ ೩

[ದುರ್ವಾಸ ದಂಪತಿಗಳು ರಾಮಣ್ಣನ ಮನೆಯಲ್ಲಿ ತಳವೂರಿದ್ದಾರೆ. ರಾಮಣ್ಣ ತನ್ನ ಮನೆಯಲ್ಲಿಯೇ ಪರಕೀಯನಂತಿದ್ದಾನೆ. ಈಗ ರಾಮಣ್ಣ ಹೊರಗೆ ಹೋಗಿದ್ದಾನೆ. ದುರ್ವಾಸ, ಅವನ ಹೆಂಡತಿ–ಇಸ್ಸಾರೇ–ಮನೆಯಲ್ಲಿದ್ದಾರೆ.]

ದುರ್ವಾಸ:– ಶಾಂತಿ, ಪ್ಯಾಟ್ಯಾಗ ಹೋಗ್ತೀನಿ. ಏನಾರ ತರಬೇಕೇನು?

ಶಾಂತಿ:- ಅಂತೇನು ಕೇಳ್ತೀರಿ? ಮುಸ್ಯಾಗ ಖಾರಪುಡಿ ಹೊರ್ತು ಏನೂ ಉಳಿದಿಲ್ಲ. ಎಲ್ಲಾ ರುಖಾಡಿ!

ದುರ್ವಾಸ:– ಅಂದರ ಇವತ್ತಿನಿಂದ ನಾವು ಇಲ್ಲಿ ಕೈಖರ್ಚು ಮಾಡಿ ತಿಂಬೋ ಪ್ರಸಂಗ ಬಂತು ಅನ್ನು! ಹರಿಹರಿ! ಏನು ಪ್ಯಾಳ್ಯಾ ತಂದಿಪಾ! ಎಲ್ಲಾ ಫುಕಟಿನಾಗ ಆಗ್ತದ ಅಂತ ತಿಳಿದಿದ್ದಿವಿ. ಈಗ ಸ್ವಂತ ಖರ್ಚು ಮಾಡೋ ಪ್ರಸಂಗ ಬಂತಲ್ಲ! ರಾಮಣ್ಣ ಉದ್ದರೀ ತರೋ ಅಂಗಡಿ ಸಹ ಗೊತ್ತಿಲ್ಲ. ಮತ್ತ ನಮ್ಮ ಪುಣ್ಯವಂತ ಸರಕಾರ, ರೇಶನ್ ಕೂಡ ಉದ್ದರೀ ಕೊಡೋದಿಲ್ಲ.

ಶಾಂತಿ:– ದೇವರು ರಾಮಣ್ಣನ್ನs ಊರಾಗ ಇರೋಹಾಂಗ ಮಾಡಿದ್ದರ ಎಷ್ಟು ಭಂಗಾರಾಗ್ತಿತ್ತು! ಇರಲಿ, ಚಡಪಡಿಸಿದರ ಬರೋದೇನು? ಸಾಮಾನಂತೂ ತಂದುಹಾಕರಿ.

ದುರ್ವಾಸ:– ರಾಮಣ್ಣ ಊರಾಗಿಲ್ಲ. ಆಯುತ ಮನಿ ತಾಬಾಕ್ಕ ಸಿಕ್ಕsದ. ಇಬ್ಬರs ಹೊಡಿಯೋಣು ಅಂದರ, ಈ ಬಲರಾಮನೊಬ್ಬ ಅತಿಥಿ ಇದs ಕೊತ್ತಿಗೇ ಗಂಟುಬೀಳಬೇಕು?

ಶಾಂತಿ:– ಮತ್ತ ಕೂಸರ ಎಷ್ಟು ತಿಂತಾನ ಸುಡ್ಲಿ! ಮೊದಲನೆ ದಿನ ಅವನ ಊಟಾ ನೋಡಿ, ನಾ ಅಂತೂ ಒಟ್ಟುಕಚ್ಚಿದೆ! ಯಾಕಂದರ, ನನ್ನ ಪಾಲಿಗೆ ಏನೂ ಉಳಿದಿದ್ದೇ ಇಲ್ಲ! ಆವತ್ತಿನಿಂದ ನನ್ನದು ಪೂರಾ ತೆಗದಿಟ್ಟುಕೊಂಡs ಬಡಿಸ್ತೀನಿ. ಅದಿರಲಿ, ಇವತ್ತಂತೂ ನೀವು ಸಾಮಾನು ತಂದುಹಾಕಿದ ಮ್ಯಾಲs, ಒಲೀಗೆ ಬೆಂಕೀಹಾಕೋದು!

ದುರ್ವಾಸ:– ಅಲ್ಲs ಶಾಂತಿ, ನಾವs ತಂದುಹಾಕ್ಕೊಂಡು ತಿಂಬೋದು ನಮ್ಮೂರಿಗೆ ಹೋದ ಮ್ಯಾಲ ಅದನs ಅದ! ಈಗ ಖಾನಾವಳಿಯಿಂದ್ಲೇನs ಡಬ್ಬಿ ತರಿಸಿದರ ಹ್ಯಾಂಗಂತೀ?

ಶಾಂತಿ:– ನೆಟ್ಟಗs ಆತು. ಎರಡೂ ವ್ಯಾಳ್ಯಾ ಅಡಿಗೀ ಮಾಡೋ ಧಾವತಿ ತಪ್ಪಿತು. ಮತ್ತ ಖಾನಾವಳೀ ಬಿಲ್ಲು ನೀವs ಕೊಡೋದಾದರ ಅದೇನು ಶಹಣೇತನ?

ದುರ್ವಾಸ:– ಹೂಂ, ಇಷ್ಟs ನನ್ನ ಶಹಣೇತನ ಇದ್ದರ ನೀ ನನ್ನ ಮದಿವ್ಯಾಗ್ತಿದ್ಯಾ? ನಾನೂ ಇನ್ಶ್ಯೂರನ್ಸ ಏಜಂಟ್ ಇದ್ದೀನಿ. ಅದೇನಿಲ್ಲ; ಈಗ ರಾಮಣ್ಣನ ಹೆಸರಿನ ಮ್ಯಾಲ ಖಾನಾವಳಿಯಿಂದ ಡಬ್ಬಿ ತರಿಸೋದು,

ಎರಡೂ ಹೊತ್ತೂ ಹೊಡೆಯೋದು. ಮುಂದ ರಾಮಣ್ಣ ಭಲಾ, ಖಾನಾವಳಿ ಶಾಮಣ್ಣ ಭಲಾ!

ಶಾಂತಿ:- ಮತ್ತ ಆ ಡಬ್ಬಿ ನೀವು ತರಬ್ಯಾಡಿರಿ, ಖಾನಾವಳಿಯವಗs ಹೇಳಿರಿ. ಇಲ್ಲs ಆ ಕೂಳುಬಾಕ ಬಲರಾಮಣ್ಣಗs ಹೇಳ್ರಿ. ಮತ್ತ ಚಹಾದ್ದು ಹ್ಯಾಂಗ ಮಾಡ್ತೀರಿ? ಅದೂ ಪುಡಿ, ಸಕ್ಕರಿ, ಶೀರೇದ!

ದುಮಾಸ: ಎದುರಿಗೇ ಚಹಾದ ಅಂಗಡಿ ಅದ್ಲ! ಅದನ್ನೂ ಊಟಧಾಂಗs ಉದ್ರಿ ತರಿಸೋದು.

ಶಾಂತಿ:- ಮತ್ತ ವರ್ತನೇ ಹಾಲು ತಗೋಬೇಕೋ ಬ್ಯಾಡೇ?

ದುಮಾಸ: ಏ ಏ ಏ, ಅದನ್ನೂ ತಗೊಂಡೋ ಹಾಂಗ ತಗೊಳ್ಳೋದs! ಬಲರಾಮಣ್ಣನ ಕಣ್ತಪ್ಪಿಸಿ ನಮ್ಮಿಬ್ಬರಿಗೇ ಕುಡೀಲಿಕ್ಕೆ ಬಂದ! ಆssss ಮತ್ತ, ಕೂದಲಾನು ಬಹಳ ಬೆಳೆದಾವ. ಸಲೂನಿನೊಳಗ ಉದ್ರಿ ನಡೀತಿದ್ದರ, ರಾಮಣ್ಣನ ಹೆಸರ್ಲೆ ಅದನ್ನೂ ಮುಗಿಸಿಬಿಡ್ತೀನಿ. ಏನಂತೀ?

ಶಾಂತಿ: ಅಗತ್ಯ ಆಗಲಿ. ಅಷ್ಟs ಯಾಕ, ಅರಿವೆಲ್ಲಾ ಹೊಲಸಾಗ್ಯಾವ ಅಂತಿದ್ರಿ. ಲಾಂಡ್ರಿಯೊಳಗ ಅರ್ಜಂಟ್ ಕೊಟ್ಟು, ಅವನ್ನೂ ಒಗಿಸಿಬಿಡ್ರಿ. ಊರಿಗೆ ಹೋದ ಮ್ಯಾಲ ತಿಂಗಳೆರಡು ತಿಂಗಳು ಅದರ ಉಸಾಬರಿ ಬ್ಯಾಡ.

ದುಮಾಸ:- ನೀ ಹೇಳೋದೂ ರಾಸ್ತ ಅದ. ಉಳಿದದ್ದನ್ನೆಲ್ಲಾ ರಾಮಣ್ಣವರ ಮ್ಯಾಲ ಭಾರಹಾಕ್ತೀವಿ; ಇದೊಂದs ಯಾಕ ಬಿಡಬೇಕು ಅಂತ ನೀ ಅಂತೀದಿ. ಅದೂ ನಡೀತಿದ್ದರ ಮಾಡಿಬಿಡೋಣು. ಅತಿಥಿಗಳಾಗಿ ಮನ್ಯಾಗಿದ್ದೀವಿ ಅಂದಮ್ಯಾಲ ತಪ್ಪೇನಿಲ್ಲ ಬಿಡು. ನಾವು ಯಾವುದಕ್ಕೂ ಭಿಡೆ ಮಾಡಿಕೊಂಡು ಭವಣೆಬಟ್ಟರ, ರಾಮಣ್ಣವರಿಗೇ ನಾಳೆ ಕೆಟ್ಟನಿಸೋದು!

ಶಾಂತಿ:- ಅಹಾ! ಎಂಥಾ ಮಾತು! ಅನಿಸವೇನು ಪಾಪ!

ದೃಶ್ಯ ೪

[ಎರಡು ದಿನಗಳ ನಂತರ. ರಾಮಣ್ಣ– ಅಲ್ಲ ಬಲರಾಮಣ್ಣ– ಅತಿಥಿಗಳನ್ನು ಹೊರಗೆಹಾಕಲು ಇನ್ನೊಂದು ಯುಕ್ತಿ ಹೂಡಿದ್ದಾನೆ. ದುರ್ವಾಸ ದಂಪತಿಗಳು ಕೋಣೆಯಲ್ಲಿ ಮಲಗಿ ನಿದ್ದೆಹೋಗಿದ್ದಾರೆ. ಬಲರಾಮಣ್ಣ ಅವರನ್ನು ಎಚ್ಚರಿಸುತ್ತಿದ್ದಾನೆ.]

ರಾಮು:– ದುರ್ವಾಸರ, ಏಳ್ರಿಸಾ, ಹತ್ತುಹೊಡೀತು.

ದುರ್ವಾಸ:– (ಒಳಗಿಂದ ದನಿ) ಯಾರವರು?

ರಾಮು:– ನಾನು ಬಲರಾಮಣ್ಣ. ರಾಮಣ್ಣಾವರಿಂದ ಕಾಗದ ಬಂದದ. ಬರ್ರಿ ಹೊರಗ ತುಸು.

ದುರ್ವಾಸ:– ಹೀಂಗs? ಅಂಗಡ್ಯಾಗ ಎರಡು ಚಹಾ ಹೇಳ್ರಿಸಾ. ನಿಮ್ಮದು ಆಗೇ ಇದ್ದೀತು?

ರಾಮು:– ಎದ್ದಂತೂ ಬರ್ರಿ ಮೊದಲು. ಈ ಪತ್ರ ಓದಿಕೊಂಡು ಮುಂದ ಮಾತು.

ದುರ್ವಾಸ: - (ಆಕಳಿಸುತ್ತ ಹೊರಗೆ ಬಂದು) ಏನಂತೀರಿ?

ರಾಮು:– ಇನು ನೋಡಿರಿ. (ಕಾಗದವನ್ನು ತೋರಿಸುತ್ತ) ರಾಮಣ್ಣವರ ಕಾಗದ ಬಂದದ. ಒಬ್ಬರ ಕೈಲೆ ಕಳಿಸಿಕೊಟ್ಟಾರ. ಅವರು ಅನಕಾತ ಊರಿಗೆ ಬರೋದಿಲ್ಲಂತ. ಮನೀಗೆ ಕೀಲಿ ಹಾಕ್ಕೊಂಡು ಕೂಡಲೆ ಬಾ ಅಂತ ನನಗ ಬರದಾರ. ಅದಕ್ಕ ನಾ ಇವತ್ತs ಹೋಗಬೇಕು. ಇನ್ನೊಂದು ತಾಸಿಗೆ ಗಾಡಿ ಅದ.

ದುರ್ವಾಸ: - ಮತ್ತ ನಮ್ಮ ವ್ಯವಸ್ಥಾ....

ರಾಮು:- ನಿಮ್ಮ ವ್ಯವಸ್ಥಾ ನೀವು ನೋಡಿಕೊಳ್ರಿ. ರಾಮಣ್ಣವರ ಮನೀದಂತೂ ಮುಗೀತು; ಇನ್ನ ಭೀಮಣ್ಣವರ ಮನಿ....ಅಲ್ಲ, ಇದ್ದರ ನೋಡ್ರೆಲ್ಲ........

ದುರ್ವಾಸ:– ಯಾಕ್ರಿ, ಮಾತು ತುಸು ಕೊಂಕೊಂಕು ಬರ್ತಾ ಅವ? ನಿಮ್ಮದು ರಾಮಣ್ಣನದು ಅಷ್ಟವ್ಯಷ್ಟs ಇರಬಹುದು. ಆದರ ನಮ್ಮದೂ ರಾಮಣ್ಣನದೂ ಚಲೋ ಸ್ನೇಹ ಅದ!

ರಾಮು:– ಚಲೋ ಸ್ನೇಹ? ಅವರ ಮಾರೀನಾದರೂ ನೋಡೀರೇನು ರಾಯರ?

ದುರ್ವಾಸ:– ನಾ ನೋಡದಿದ್ದರೇನಾತು? ನೋಡಿದವರಿಗೂ ನನಗೂ ಸ್ನೇಹ ಅದ, ಸಾಕು!

ರಾಮು:– ಸಾಕು, ಸಾಕು! ಒಂದು ಠಾಣೇಹಾಕಲಿಕ್ಕೆ ಹೆಚ್ಚು ಯಾಕ ಬೇಕಾಗ್ತದ?

ದುರ್ವಾಸ:– ಅಲ್ರಿ? ನೀವೂ ನಮ್ಮ ಹಾಂಗ ಠಾಣೇಹಾಕಿದವರs ಅಲ್ಲ! ನಮ್ಮ ಕಿಂತ ನಾಲ್ಕು ದಿವಸ ಮೊದಲs ಬಂದಿದ್ದೀರಿ.

ರಾಮು:– ಒಂದರ್ಥದಿಂದ ಖರೆ ಅದ. ಎಲ್ಲರೂ ನಾಲ್ಕು ದಿವಸ ಬಂದು ಇದ್ದು ಹೋಗುವವರs! ಏನs ಇರ್ಲಿ ರಾಯರ, ರಾಮಣ್ಣಾವರು ಬರಪಾರ: ಬಂದ ಅತಿಥಿಗಳಿಗೆ ಒಳ್ಳೇ ಮಾತಿಲೆ ತಿಳಿಹೇಳಿ, ಕೀಲಿ ಹಾಕ್ಕೊಂಡು ಬರಬೇಕು ಅಂತ!

ದುರ್ವಾಸ:– ಛೆ, ಹಾಂಗ ರಾಮಣ್ಣಾವರು ಬಹಳ ಸಜ್ಜನರು! ಅತಿಥಿಸತ್ಕಾರ ಅಂದರ ಅವರಿಂದಲೇ ಕಲೀಬೇಕು. ಇಲ್ಲದಿದ್ದರ ಕೆಲವರಿರ್ತಾರ, ಸ್ವಂತಕ್ಕ ತಾವಂತೂ ಮಾಡೋ ಹಾಂಗಿಲ್ಲ, ಮಂದಿ ಮಾಡಿದ್ದು ಸಹನಾಗೋ ಹಾಂಗಿಲ್ಲ. ನಮ್ಮದೇನು ಬಿಡ್ರಿ— ನಾವೇನು ಇಲ್ಲಿ ಅನುಗಾಲ ಇರಬೇಕಾಗೇದ? ನಮ್ಮ ಇನಾಮತಿ ನರಸಿಂಹನ ಆಗ್ರಹಕ್ಕ ನಾ ಇಲ್ಲೇ ಇಳ್ದೀನಿ. ನಾ ಹಾಂಗ ಖರ್ಚಿಗೆ ಅಂತ ರೊಕ್ಕ ಕಟಗೊಂಡs ಬಂದಿದ್ದೆ. ಆದರ ನರಸಿಂಹನ ಸ್ನೇಹಿತರ ಮನೆಯೊಳಗಿದ್ದು ನಾವs ಎಲ್ಲಾ ಕೈಖರ್ಚು ಮಾಡೋದು ಅಂದರ, ನಾಳೆ ರಾಮಣ್ಣಾಗs ಕೆಟ್ಟನಿಸೋದು ಅಂತ, ನಾ ಕೈ ಬಿಗಿಹಿಡಿದೆ.

ರಾಮು:– ಈಗಾದರೂ ಅವರಿಗೆ ಕೆಟ್ಟನಿಸಿಲ್ಲ ಅಂತ ತಿಳಿದೀರೇನು? ಸಾಕಷ್ಟು ಪಶ್ಚಾತ್ತಾಪ ಆಗೇದ ರಾಯರ!

ದುರ್ವಾಸ:– ಆಗಿದ್ದೀತು—ಬಂದ ಅತಿಥಿಗಳನ್ನ ಮನಿಬಿಡಿಸಿ ಕಳಿಸಬೇಕಾಯಿತಲ್ಲಾ ಅಂತ. ಖರೆ ಅದ. ಆಗಲಿ. ಸವುಡು ಮಾಡಿಕೊಂಡು ಇನ್ನೊಮ್ಮೆ ಅವರಿದ್ದಾಗs ಬರ್ತೀವೇನ್ರಿಪಾ!

ರಾಮು:– ಓಹೋ, ಅಗತ್ಯ ಬರ್ರಿ. ಆದರ ಬರೋ ಮೊದಲು ಕಾಗದ ಹಾಕಿ ಬರ್ರಿ ಆತು!

ದುರ್ವಾಸ:– ಆಗಲಿ, ಹಾಂಗs ಮಾಡೋಣು. ರಾಮಣ್ಣಾವರಿಗೆ ನಮ್ಮ ನಮಸ್ಕಾರ ತಿಳಿಸಿ, ನಮ್ಮ ನೆನಪಿರ್ಲಿ ಅಂತ ಹೇಳ್ರಿ.

ರಾಮು: ಅದನ್ನ ಎಂದೂ ಮರಿಯೋದಿಲ್ಲ ಬಿಡ್ರಿ, ರಾಯರ.

ದುರ್ವಾಸ:– ಒಳ್ಳೇದು ಹಾಂಗಾರ. ನಾವು ಹೊರಡೋ ತಯಾರಿ ಮಾಡ್ತೀವಿ. ಚಹಾ–ಫರಾಳದ ಜೊತೀಗೆ ಟಾಂಗಾನೂ ಅಷ್ಟು ಹೇಳಿಬಿಡ್ರಿ. ಮತ್ತ ಅಂವಗ ಏನು ಕೊಡೋದೋ ಕೊಟ್ಟು ರಾಮಣ್ಣಾವರಿಗೆ ತಿಳಿಸ್ರಿ ಆತು.

ಈ ಟಾಂಗಾದವರು ಹೊಸಬರ್ನ ನೋಡಿದರ ಬಲು ರೊಕ್ಕ ಹಿರೀತಾರ! ಶಾಂತಿ, ಏ ಶಾಂತಿ, ಏಳು ಹೋಲ್ಡಾಲ್ ಕಟ್ಟು. (ಬಾಗಿಲ ಮೇಲಿನ ಫೋಟೋವಿನ ಕಡೆಗೆ ನೋಡುತ್ತ) ಇದೇನ್ರಿ ಬಲರಾಮಣ್ಣ, ಇದು ಯಾರ ಫೋಟೋ? ರಾಮಣ್ಣವರದಲ್ಲ?

ರಾಮು:– ಹೌದು.

ದುರ್ವಾಸ:– (ರಾಮಣ್ಣನ ಮುಖ ನೋಡುತ್ತ) ಅವರದೂ ನಿಮ್ಮದೂ ಮಾರಿ ಹೋಲಿಕಿ ಒಂದs ಅದ ನೋಡ್ರಿ!

ರಾಮು:– ನಾನು ಮತ್ತು ರಾಮಣ್ಣ ಎಲ್ಲಾದರೊಳಗೂ ಹಾಂಗs ಇದ್ದೀವಿ ರಾಯರ. ಆಗಲಿ. ಚಹಾ ಮತ್ತು ಟಾಂಗಾ ಹೇಳಿಬರ್ತೀನಿ. ನೀವು ಹೋಲ್ಡಾಲ್ ಕಟ್ಟಿ ತಯಾರಾಗ್ರಿ.

ಗೋಪಾಳನ 'ಗೋಪಾಳ'

★

ಪಾತ್ರಗಳು:

ಗೋಪಾಳ:	....	....	....	ಗಂಡ
ಸುಭದ್ರಾ:	....	....	....	ಹೆಂಡತಿ
ನರಸಪ್ಪ:	....	....	....	ಮುತ್ತು ಮಾರುವವನು
ಗಣೇಶ:	....	....	....	ಗೋಪಾಳನ ಗೆಳೆಯ

[ಮಧ್ಯಮ ತರಗತಿಯ ಇರುವಿಕೆಯನ್ನು ತೋರಿಸುವ ಮನೆಯ ದೃಶ್ಯ. ಹೊತ್ತು ಸುಮಾರು ಮುಂಜಾನೆ ೯ ಗಂಟೆ. ಬಕರ್ ಈದ್ ನಿಮಿತ್ತ ರಜೆ ಇರುವ ಕಾರಣ, 'ಗೋಪಾಳನಿಗೆ ಕಚೇರಿಯ ಮತ್ತು ಸುಭದ್ರೆಗೆ ಅಡಿಗೆಯ ಅವಸರವಿಲ್ಲ. ಗೋಪಾಳ ಮುಖಕ್ಷೌರದ ಸಿದ್ಧತೆ ನಡೆಯಿಸಿದ್ದಾನೆ. ಸುಭದ್ರಾ ಕುಂಕುಮದ ಪೆಟ್ಟಿಗೆಯನ್ನು ಮುಂದಿಟ್ಟುಕೊಂಡು ತನ್ನ ಹೆರಳು ಬಿಚ್ಚಿಕೊಳ್ಳುತ್ತಿದ್ದಾಳೆ.]

ಗೋಪಾಳ:– (ಬ್ಲೇಡನ್ನು ಹಿಡಿಕೆಯಲ್ಲಿ ಸೇರಿಸುತ್ತ) ಈ ಬಟ್ಟಲಿನಾಗ ತುಸು ಬಿಸಿ ನೀರಿದ್ದರ ತರಬಾರದs?

ಸುಭದ್ರಾ:– ಬಂಬಿಗೆ ಬೆಂಕಿ ಹಾಕೇ ಇಲ್ಲ ಇನ್ನೂ; ಬಿಸಿನೀರೆಲ್ಲಿಂದ ತರಲಿ?

ಗೋಪಾಳ:– ಮತ್ತ ಕೊಗೆ ಎಲ್ಲಿಂದ ಬರ್ತsದ ಮುನ್ಯಾಗ?

ಸುಭದ್ರಾ:– ಬ್ಯಾಳಿಗೆ ಎಸರಿಟ್ಟೇನಿ.

ಗೋಪಾಳ:– ಅದರಾಗಿಂದs ತುಸು ತರಬಾರದs? ಮತ್ತ ನೀರ್ಹಾಕಿಟ್ಟರಾತು.

ಸುಭದ್ರಾ:– ಬ್ಯಾಳಿಗಿಟ್ಟ ನೀರು ನಿಮ್ಮ ಹಜಾಮತಿಗೆ? ನೀವಂತೂ ತೀರ ಶಾಣೆ ಬಿಟ್ಟೇರಿ.

ಗೋಪಾಳ:– ಹೀಂಗ ಮಾಡು ಹಂಗಾದ್ರ. ಹಜಾಮತಿಗಷ್ಟು ನೀರು ಕೊಟ್ಟು

ಉಳಿದ ನೀರಿಂದು ಚಹಾ ಮಾಡಂದರಾತು!

ಸುಭದ್ರಾ:– ಉಂ, ಮತ್ತೇನು ಮಾಡಬೇಕು? ಈ ಸೂಟಿ ಯಾಕ ಕೊಡ್ತಾರೋ ಸರಕಾರದವರು ಅಂತಿನಾ! ಕಚೇರಿ ಕೆಲಸ ಇರಲಿಲ್ಲ ಅಂದ್ರ ಬರೇ ತಿಂಬೋದರಾಗs ಇರ್ತೀರಿ ನೋಡ್ರಿ ನೀವು! ಅದರಾಗ ಹುಡುಗರು ಊರಿಗೆ ಹೋದಾಗಿನಿಂದ, ನೀವs ಹುಡುಗರಾಗೀರಿ!

ಗೋಪಾಳ:– ನೀನೂ ಸ್ವಲ್ಪ ಹುಡುಗಿ ಆಗಿ ಓಡ್ಯಾಡಲ್ಲ!

ಸುಭದ್ರಾ:– ಅಲ್ಲಾ–ಎಷ್ಟದು ನಮ್ಮ ಕಡಿಂದ ಕೆಲಸಾ ಮಾಡಿಸಿಕೊಂಬೋದು? ನೀವು ಮನೀ ಕೆಲಸದಾಗ ಒಂದು ದಿವಸಾದರೂ ನಮಗ ನೆರವಾಗ್ತೀರೇನು? ನೀವs ಹೇಳ್ರಿ!

ಗೋಪಾಳ:– ಅದಿರಲಿ. ನೀ ತರ್ತೀಯೊ, ನಾನs ತರಲ್ಯೋ ನೀರು?

ಸುಭದ್ರಾ:– ಸುಟ್ ಸುಟ್ಟೆ ಕೈಲೆ ಆ ಬ್ಯಾಳೀ ಭಾಂಡೀ ಮುಟ್ಟಬ್ಯಾಡ್ರಿ! ನಾ ಎಲ್ಲಾ ತಂದುಕೊಡ್ತೀನಿ. ಸ್ವಲ್ಪ ನಿಧಾನಿಸ್ರಿ. ಕೈಯಾಗಿನ ಹೆರಳು ಮುಗೀಲಿ.

ಗೋಪಾಳ:– ಅಲ್ಲೀತನಕ ಹಾಂಗs ಕೂಡಲೇನು ನಾ?

ಸುಭದ್ರಾ:– ಅಷ್ಟರಾಗs ಗಡ್ಡ ಬೆಳೆದು ಬಾವಾಜೀನs ಆಗ್ತಿದ್ದೀರಿ ನೋಡ್ರಿ! ತುಸು ಕೂತರೇನು ತಪ್ಪಾತು?

ಗೋಪಾಳ:– ಅಲ್ಲs, ನೀ ನೀರು ತಂದುಕೊಟ್ಟೀ ಅಂದರ ಇಬ್ಬರದೂ ಕೆಲಸ ನಡೀತದ.

ಸುಭದ್ರಾ:– ಅಂದ್ರ? ನಿಮ್ಮ ಹಜಾಮತೀ ನೀರು ನನಗೆದಕ್ಕ ಬೇಕಾಗ್ತದ ಸುಡ್ಲಿ?

ಗೋಪಾಳ:– ಹಾಂಗಲ್ಲs? ಅಂದರ ನನ್ನ Shavingಉ, ನಿನ್ನ Toiletಉ ಕೂಡೇ ನಡೀತಾವ; ಅಂತ.

ಸುಭದ್ರಾ:– ನಂದೇನಂದ್ರಿ?

ಗೋಪಾಳ:– Toiletಉ! Toilet ಅಂದರ ಈಗೇನ್ನೀ ನಡಸೀಯಲ್ಲಾ ಅದs! ಏಳು ಏಳು, ಲಗು ತಂದುಕೊಡು ನೀರು.

ಸುಭದ್ರಾ:– ಬಾಯಾಗ ಬರೋದೊಂದs ತಡ– ಜೀವಕ್ಕ ನಿಧಾನ ಅಂತ ಇಲ್ಲs ಇಲ್ಲ. ನಾ ಅಂತs ಪೂರೈಸೀನಿ!

ಗೋಪಾಳ:– ಮತ್ತ ನಾ ಅಂತs ನಿನ್ನ ಸಂಭಾಳಿಸಿಕೊಂಡೀನಿ!

ಸುಭದ್ರಾ:– ಯಾಕ? ಏನು ಕಡಿಮ್ಯಾಗ್ಯೇದ ನಿಮ್ಮ ಉಪಚಾರದಾಗ? ನಾ ಮಾಡಿದಷ್ಟು ಯಾವ ಹೆಂಡದ್ರು ಮಾಡ್ತಿರಲಿಕ್ಕಿಲ್ಲ!

ಗೋಪಾಳ:– ಎಲ್ಲಾ ಮಾಡ್ತೀದಿ! ಒಂದs ಮಾಡೋದಿಲ್ಲ ನೋಡು!

ಸುಭದ್ರಾ:– ಅದ್ಯಾವುದ?

ಗೋಪಾಳ:– ನಾ ಹೇಳಿದ್ದು!

ಸುಭದ್ರಾ:– ಅದ್ಯಾಕ? ಯಾವ ಕೆಲಸಾ ಮಾಡಿಲ್ಲ?

ಗೋಪಾಳ:– ಈಗ ನೀರು ತಂದುಕೊಡು ಅಂತ ಎಷ್ಟು ಸಾರೆ ಹೇಳಿದೆ?

ಸುಭದ್ರಾ:– ಕೊಡ್ತೀನಂತ ಹೇಳೀನಲ್ಲ! (ಬಿಚ್ಚಿದ ಕೂದಲನ್ನು ಹಾಗೇ ಕಟ್ಟಿಕೊಂಡು, ಎದ್ದು ಗಂಡನ ಹತ್ತಿರ ಬರುವಳು. ಗೋಪಾಳ ಆವಳ ಕೈಯಲ್ಲಿ ಒಟ್ಟಿಗೆ ಕೊಡಲು) ನೀರಷ್ಟು ತಂದುಕೊಟ್ರ ಆತಿಲ್ಲೊ? ಮತ್ತೇನೂ ಕೇಳಬಾರದು!

ಗೋಪಾಳ:– ನನ್ನ ಹೆಣ್ತಿ ಶಾಣ್ಯಾಕಿ ಅಲ್ಲs!

ಸುಭದ್ರಾ:– ಅಹಹ! ಉಬ್ಬಿಸಬ್ಯಾಡ್ರಿ ನನ್ನ! ನನಗೆಲ್ಲಾ ನಿಮ್ಮ ಹಂಚಿಕಿ ತಿಳೀತಾವ!

ಗೋಪಾಳ:– ಹೀಂಗ್ ನೋಡು— ಆ ನೀರಂತೂ ಇನ್ನ ಬ್ಯಾಳಿಗೆ ಬರೂದಿಲ್ಲ! ಅಂದಮ್ಯಾಲ ಕಾದ ನೀರು ಕೆಡಿಸೋದೇನು! ಅದರ ಉಪಯೋಗಸರ ಮಾಡಿಕೊಂಡೋಣು. ಅದನ್ನ ಕಾಯಿಸಲಿಕ್ಕೆ ನಾಲ್ಕೆಂಟು ಇದ್ದಿ ಯಾವರೂ ಸುಟ್ಟಿದ್ದಾವು! ಅದು ವ್ಯರ್ಥ ಹೋಗ್ತದೊ ಇಲ್ಲೊ?

ಸುಭದ್ರಾ:– ಹೌದು ಪಾಪ! ಇಂಥಾ ಲೆಕ್ಕಾಚಾರಕೇ ಮನಿ ಅಂಬೋದು ಮಠಾ ಮಾಡಿಟ್ಟೀರಿ! ನೀವೊಂದು ಲಂಗೋಟಿ, ನಾನೊಂದು ಕಫನಿ ಎರಡs ಮಾಡೋದು ಉಳದsದ ಈಗ! ಈಗ ಎರಡು ವರ್ಷ ಆತು— ಒಂದು ಮುತ್ತಿನ ಬೆಂಡ್ವಾಲೀ ತಗೊಬೇಕಂತೀನಿ, ಅದೇನಾಗವೊಲ್ಲದು! ಆ ಕಲ್ಚರ್ಡ್ ಮುತ್ತು ಮಾರೋ ನರಸಪ್ಪ ವರ್ಷಾ ಬಂದು ಬಂದು ಹೋಗ್ತಾನ.. ....ಒಮ್ಮೆ ಆದರೂ ಅವನ ಹತ್ತರ ವ್ಯಾಪಾರ ಮಾಡಲಿಲ್ಲ. ಇವತ್ತು ನಾಳೆ ಇಷ್ಟರಾಗs ಬರೋ ದಿವಸ ಅಂದ! ಈ ಸಾರೆ ಮಾತ್ರ ನಾಯೇನೂ ಬಿಡೋ ಆಕಿ ಅಲ್ಲ. ಈ ಸಾರೆ ತಯಾರೀ ಬೆಂಡ್ವಾಲಿನs ತರ್ತೀನಂತ ಹೇಳ್ಯಾನ! ಇನ್ನ ನನಗ ವರ್ಷತ್ತನಕಾ ಸೀರೀ ಕೊಂಡುಕೊಬ್ಯಾಡ್ರಿ; ಇದ್ದದರ ಮ್ಯಾಲ ನಡಿಸ್ತೇನಿ. ಬೇಕಾದರ ಸಿನೇಮಾನೂ

ತೋರಿಸಬ್ಯಾಡ್ರಿ. ಅದಕ್ಕ್ಯಾ ನನ್ನ ಕಬೂಲಿ! ಬೆಂಡ್ವಾಲಿ ಮಾತ್ರ ತಗೊಳ್ಳೇಬೇಕು.

ಗೋಪಾಳ:– ಹಾಂಗs ಮಾಡೋಣೇಳು ! ಏನು, ಬೀಳ್ತsದರ ಎಷ್ಟದಕ?

ಸುಭದ್ರಾ:– ಈಗ ಬೆಲೆ ಹೆಚ್ಚಾಗೆದಂವನ್ರಿ ೫೦ ರೂಪಾಯಿ ಬಿದ್ದೀತು.

ಗೋಪಾಳ:– ಇಷ್ಟsನs! ಅದಕ್ಯಾಕ ಕಾಳಜಿ ಮಾಡ್ತಿ! ಅಂವ ಬಂದರ ಬರಲಿ. ಈ ಸಾರೆ ತಗೊಂಡsಬಿಡೋದು. ಹತ್ರ ಇಲ್ಲದಿದ್ದರ ಎಲ್ಲಾರ ಜೀವಾ ಒತ್ತಿಯಿಟ್ಟು ತಂದುಕೊಡ್ತೀನಿ, ಅಂದ್ರ್ಯಾತಿಲ್ಲೊ? ಉಂ..........ಚಹಾದ ಜೋಡಿಗೆ ಮತ್ತೇನಾರs ಮಾಡ್ತಿಯೇನು? ಬರೇ ಚಹಾ ಕುಡಿಬ್ಯಾಡ್ರೀ ಅಂತ ಹೇಳ್ಯಾನ ಡಾಕ್ಟರು!

ಸುಭದ್ರಾ:– ಹೇಳಿದ್ದಾನು ಪಾಪ! ಹೇಳ್ಲಿಕ್ಕೇನು ಹೋಗ್ತsದ! ಇಲ್ಲಿ ಫರಾಳದ್ದು ಮಾಡಲಿಕ್ಕ ತನ್ನ ಹೆಂಡ್ತಿನ್ನ ಕಳಿಸಿಕೊಡ್ತಾನಂತೇನು? ಬರೇ ಹೇಳೋವ್ರ ಗಂಟೇನು ಹೋಗ್ತsದ! ಇಷ್ಟಾಗಿ ಡಾಕ್ಟರು ಹೇಳ್ಯಾರೊ, ನೀವs ಹೇಳ್ತೀರೊ?

ಗೋಪಾಳ:– ಯಾರು ಹೇಳಿದರೂ ಕೆಟ್ಟದು ಬ್ಯಾರೇ ಅಲ್ಲs? ಉಂ, ಏನ್ ಮಾಡ್ತೀ ಹಂಗಾರ?

ಸುಭದ್ರಾ:– ಏನಾರs ಮಾಡ್ತೀನಿ. ಆ ಬೆಂಡ್ವಾಲಿ ಆಸೇ ಒಂದು ಹಚ್ಚೀರಲ್ಲ! ಅಂತೂ ಒಮ್ಮೆ ನಿಮ್ಮ ಬಾಯಿಲೆ ಬಂದsದ, ಇದs ದೊಡ್ಡದು! ಈ ಸಾರೆ ನಿಮ್ಮನ್ನೇನ ಬಿಡೋದಿಲ್ಲ ನಾ! (ಒಳಗೆ ಹೋಗುವಳು.)

ಗೋಪಾಳ:- ನಮ್ಮನ್ನು ದೇವರೇ ಕಾಪಾಡಬೇಕು! ನಮ್ಮ ದುರದೃಷ್ಟಕ್ಕ ಒಂದೆರಡು ದಿವಸದಾಗs ಆ ಮುತ್ತಿನವ ಬಂದುಬಿಟ್ಟನು, ನಮ್ಮ ಫಜೀತಿ ಯಾತಕ್ಕೂ ಬ್ಯಾಡ! ಬಂದಂವರ ಆಗ ಏನಾರ ಮಾಡೋಣಂತ. ಎರಡು ದಿವಸ ಮಾರೀ ತಪ್ಪಿಸಿಬಿಟ್ಟ; ಅಥವಾ ಇನ್ನೇನಾರೇ ಉಪಾಯ ಮಾಡಿ ಅವಗ ಚಕ್ರಾಕೊಟ್ಟ! ನೋಡೋಣಂತ. ಪ್ರಸಂಗ ಬಂದಾಗ ಯುಕ್ತಿ ತೋಚುತಿರ್ತಾವ! ಈಗ್ಯಾಕ ಅದರ ವಿಚಾರ? (ಹೊರಗೆ 'ಬಾಯೇರ, ಬಾಯೇರ' ಎಂದು ಕೂಗಿದ ಧ್ವನಿ. ಗೋಪಾಳ ಬೆಚ್ಚಿಬಿದ್ದ.) ಯಾದು ಕೂಗುತಾರಪಾ ಇದು? ಆ ನರಸಪ್ಪನs ಬಂದನೋ ಏನು ಸುಡುಗಾಡೊ! ಸಂಕಟ ಹೇಳೀ ಕೇಳೀ ಬರೋದಿಲ್ಲಾ ಅಂತಾರ ! ನಮ್ಮ ಪಾಲಿಗೆ ಹೇಳೀ ಕೇಳೀ ಬಂದಾಂಗಾದೀತು! ದೇವರೇ, ವೆಂಕಟರಮಣಾ, ಈಗ ಬಂದಾವ

ನರಸಪ್ಪ ಆಗದ, ಮತ್ಯಾಂವಾರ ಆಗೋ ಹಾಂಗ ಮಾಡೋ ಮಹಾರಾಯಾ! ನವರಾತ್ರಿ ಒಂಬತ್ತು ದಿವಸ ದಿನಾ ಒಂದು ಕಾಯಿ ಒಡಸ್ತೀನಿ ನಿನಗ! (ನರಸಪ್ಪ ಒಳಗೆ ಬರುವನು. ಅವನನ್ನು ನೋಡಿ) ಇದು ಯಾರ ಮನೆ ಅಂತ ಬಂದಿ? ಯಾರು ನೀನು?

ನರಸಪ್ಪ:– ನಿಮ್ಮ ಮನೀ ಅಂತss ಬಂದೀನಿ ರಾಯರss! ಬಾಯೇರು ಇಲ್ಲೇನ್ರಿ?

ಗೋಪಾಳ:– ಬಾಯೇರು ಇಲ್ಲಿ. ನಮ್ಮ ಮನೀ ಅಂದಂ? ನಮ್ಮ ಹೆಸರss ಗೊತ್ತದ ಏನು?

ನರಸಪ್ಪ:- ಹೆಸರೇನ್ರಿ, ರಾಯರು ಅಂಬೋದಷ್ಟು ಗೊತ್ತು! ಹೆಚ್ಚಿಂದು ತಗೊಂಡು ನನಗೇನು ಮಾಡೋದದರಿ! ಮುತ್ತು ಮಾರೋವಂಗ ಹೆಸರು ಗಿಸೀ ಯಾಕ ಬೇಕ್ರಿ?

ಗೋಪಾಳ:– ಅಂದರ ಆ ನರಸಪ್ಪನss ಏನ್ನೀನು? (ಅಡಿಗೆ ಮನೆಯ ಬಾಗಿಲ ಕಡೆಗೆ ಆಗಾಗ ನೋಡುವನು.)

ನರಸಪ್ಪ:– ಹೌದ್ರಿ, ಯಾಕ್ರಿ?

ಗೋಪಾಳ:– (ನಿಟ್ಟುಸಿರು ಬಿಟ್ಟು) ಕಾಡೊ ವ್ಯಾಳ್ಯಾ ಅಂದರ ಹೀಂಗss ಇರ್ತದಪಾ!

ನರಸಪ್ಪ:– ಯಾಕ್ರೀ ರಾಯರ? ಏನಾತು?

ಗೋಪಾಳ:– ನಮಗೇನಾಗಿಲ್ಲಪಾ! ಆದರ ನೀ ಬಂದ ವ್ಯಾಳ್ಯಾ ಚಲೋ ಇಲ್ಲಾ ಅಂತ!

ನರಸಪ್ಪ:– ಯಾಕ್ರಿ? ಬಾಯೋರಿಲ್ಲೇನ್ರಿ ಊರಾಗ?

ಗೋಪಾಳ:– ಇಲ್ಲಪಾ, ಊರಾಗಿಲ್ಲ. ನಾನೂ ಅದss ಹೇಳಬೇಕಂವೆ. ಆಕಿ ತವುರ್ಮನಿಗೆ ಹೋಗ್ಯಾಳ. ಒಳ್ಳೆದು- ನನಗ ಬ್ಯಾರೇ ಕೆಲಸದss! ನೀ ಮುಂದಿನ ಸಾರೆ ಬಾ ಏನಪಾ!

ನರಸಪ್ಪ:– ಬಾಯೊರೆಂದು ಬರ್ತಾರ್ರಿ? ನಾ ಇನ್ನೂ ೧೫ ದಿನ ಇಲ್ಲೇ ಇರ್ತೀನ್ರಿ. ಅಷ್ಟರಾಗss ಮತ್ತೊಮ್ಮೆ ಹಾಯ್ಲೇನ್ರಿ?

ಗೋಪಾಳ:- ಅವಳು ಅಷ್ಟರಾಗss ಬರಲಿಕ್ಕಿಲ್ಲ! ನೀ ಮುಂದಿನ ವರ್ಷ ಬರ್ತೀಯಲ್ಲ, ಆಗss ನೋಡೋಣೇನಪಾ!

ನರಸಪ್ಪ:– ಅದಾತ್ರಿ. ಅವರ ದಸಿಂದ ಒಂದು ತಯಾರೀ ಪೆಂಡ್ಯಾಲೀನss ತಂದಿದ್ನಿನ್ರಿ. ಈಗ ನಿಮ್ಮ ಕಣ್ಣಿಗೆ ಹಾಕಿದ್ತೀನ್ರಿ! ಒಮ್ಮೆ ನೋಡ್ಯಾರss

ನೋಡ್ರಿ–ಮಾಲು ಭಾಳ ಫಾಸ್ಟೈತ್ರಿ. ಈ ದಿವಸದಾಗ ಇಂಥಾ ಮಾಲಕ ಬರೋಂಗಿಲ್ರಿ! ೨೫ ವರ್ಷ ಗ್ಯಾರಂಟೀ ಕೊಡ್ತೇನ್ರಿ

ಗೋಪಾಳ:– ಈಗಂತೂ ನೀ ಹೋಗೇನಪಾ! ಒಂದು ಮಿನಿಟು ನಿನ್ನ ಸಂಗತಿ ಹೆಚ್ಚು ಮಾತಾಡೋದು ಅಂದರೂ ಕಠಿಣಾನs ಅದ ಏನsಪಾ!

ನರಸಪ್ಪ:– ಇವತ್ತ ನಿಮಗ ಗಡಿಬಿಡಿ ಇದ್ದರ ನಾಳೆ ತೋರಿಸ್ತೇನ್ರಿ. ಅದಕ್ಕೇನು! ನನಗ ಹೇಳ್ರಿ– ನೀವು ಯಾವ ಹೊತ್ತಿಗ ಬಾ ಅಂದರೂ ಆ ಹೊತ್ತಿಗೆ ಬರ್ತೇನ್ರಿ! (ಸುಭದ್ರಾ ಒಳಗಿನಿಂದ ಬಂದು ಸದ್ದು ಮಾಡದೆ ಗೋಪಾಳನ ಹಿಂದೆ ನಿಲ್ಲುವಳು. ನರಸಪ್ಪ ಸುಭದ್ರೆಯನ್ನು ನೋಡಿ ಆಶ್ಚರ್ಯಗೊಳ್ಳುವನು. ಅದನ್ನು ತೋರಗೊಡದೆ) ಈ ಬಾಯೋರಿದ್ದಾರಲ್ರಿ, ಸಮಾದಾನ ನೋಡಬಹುದ್ರಿ!

[ಗೋಪಾಳ ಹಿಂತಿರುಗಿ ನೋಡುವನು ಸುಭದ್ರೆ ಪೆಚ್ಚಾಗುವುದು. ಸುಭದ್ರೆಯ ಕೈಯೊಳಗಿನ ಒಟ್ಟಲು ತಕ್ಕೊಂಡು ಕಸ್ಪಾಂದ ಸ್ಥಳದಲ್ಲಿ ಹೋಗಿ ಕುಳಿತುಬಿಡುವನು.]

ಸುಭದ್ರಾ:– ಏನ್ ನರಸಪ್ಪಾ, ಯಾವಾಗ ಬಂದಿ? ನಿನ್ನ ಇದs ಈಗ ನೆನಿಸಿದಿವಿ! ತಂದೀಯೇನು ಬೆಂಡ್ವಾಲಿ?

ನರಸಪ್ಪ:– ನೀವು ಹೇಳಿದ ಮಾಲ ತಾರದs ಇದ್ದೇನ್ರಿ?

ಸುಭದ್ರಾ:– ಬಾ, ಕೂಡು ಬಾ. (ಇಬ್ಬರೂ ಎದುರುಬದುರು ಕೂಡುವರು. ಗೋಪಾಳ ಇವರ ಕಡೆಗೆ ಬೆನ್ನುಮಾಡಿ ಕುಳಿತಿರುವನು. ನರಸಪ್ಪ ಆಗಾಗ ಗೋಪಾಳನ ಕಡೆಗೆ ತಿರುಗಿನೋಡುವನು.) ಇವರು ನಿನಗೇನು ಹೇಳ್ತಿದ್ರೊ?

ನರಸಪ್ಪ:– ಏನಿಲ್ಲೇಳ್ರಿ! ನೀವು ಊರಾಗಿಲ್ಲಾ ಅಂತ ಸುಮ್ಮನs ನಕಲೀ ಮಾಡಿದರ್ರಿ!

ಸುಭದ್ರಾ:– ನಾ ಊರಾಗಿಲ್ಲಾ ಅಂತ ಹೇಳಿದರs?

ನರಸಪ್ಪ:– ಹಾಂಗs ಚಾಷ್ಟಿಗೆ ಅಂದರ್ರಿ! ಅದೇನು ಖರೇ ಅಲ್ರಿ! (ಮುತ್ತಿನ ಬೆಂಡೋಲೆಯ ಡಬ್ಬಿಯನ್ನು ತೆಗೆದು) ಇವು ನೋಡ್ರಿ ಬಾಯೇರs ನಿಮ್ಮ ಬೆಂಡ್ವಾಲಿ! ಎರಡು ಸಾವಿರ ಮುತ್ತಿನಾಗಿಂದ ಆರಿಸಿ ತೆಗೆದದ್ದವು ಬಾಯೇರ, ಈ ನಿಮ್ಮ ಬೆಂಡ್ವಾಲೀ ಮುತ್ತು! ಯಾತರಾಗೂ ತೆಗಿಯೋ ಹಾಂಗಿಲ್ರಿ ಬಾಯೇರ! ನಿಮ್ಮ ಮೈಬಣ್ಣ ಈ ಮುತ್ತಿನ ಬಣ್ಣ ಒಂದs ಅದ ನೋಡ್ರಿ! (ಬೆಂಡೋಲೆಯನ್ನು 'ಪಾಲಿಶ್' ಅರಿವೆಯಿಂದ ಒರೆಸಿ ಸುಭದ್ರೆಯ ಕೈಯಲ್ಲಿ ಕೊಡುವನು.) ವಸ್ತ ಅಂದ್ರ ವಸ್ತ!

ಸುಭದ್ರಾ:- (ಉಲ್ಲಸಿತಳಾಗಿ) ತಿರುಗಣಿ ಹೊಸಾ ನಮೂನೆ ಅವೇಲ್ಲಾ ?

ನರಸಪ್ಪ:- ಅದನ್ನ ನಾನs ಡಿಝೈನ್ ಕೊಟ್ಟು ಮಾಡಿಸೇನ್ರಿ! ಈ ಮುತ್ತಂತೂ ಖರೇ ಮುತ್ತಿನ ಮಾರೀವಾಲಿ ಹೊಡಿಯೋ ಹಾಂಗವರಿ! ಎರಕೊಂಡೊ ಮುಂದ ಸಹಿತ ನೀವು ತೆಗೀಬ್ಯಾಡ್ರಿ! ಒಮ್ಮೆ ಕಿಂವ್ಯಾಗ ಹಾಕಿದ್ರಿ ಅಂದ್ರ ಜನ್ಮ ಶಾಶ್ವತ ನೋಡ್ರಿ ಬಾಯೋರ! ಕಿಮ್ಮತ್ತು....ನಾ ನಿಮಗ ಹಿಂದಕ್ಕ ಹೇಳಿದ್ದಕ್ಕಿಂತ ಸ್ವಲ್ಪ ಹೆಚ್ಚಾಗ್ತsದ್ರಿ! ಆದರ ಈ ಮಾಲಿಗೇನು ಅದು ಹೆಚ್ಚಲ್ರಿ ಮತ್ತ!

ಸುಭದ್ರಾ:- ಅಂದ್ರ? ಎಷ್ಟು ಬಿತ್ತsದ? ಸುಮ್ಮನ ಹೆಚ್ಚಿಸಿ ಹೇಳಬ್ಯಾಡಾ!

ನರಸಪ್ಪ:- ಈ ಸಾರೆ ನಾ ನಿಮಗ ಹತ್ತು ರೂಪಾಯಿ ಬಿಟ್ಟs ಕೊಡಬೇಕೂ ಅಂತ ಮಾಡೇನ್ರಿ. ಈ ಹತ್ತು ರೂಪಾಯಿ ಮುಂದ ನಾ ನಿಮ್ಮ ಕಡಿಂದಾನs ಖುಷಿಯಿಂದ ತಗೋತೀನ್ರಿ! ಆ ಧೈರ್ಯ ಅದರಿ ನನಗ.

ಸುಭದ್ರಾ:- ಮುಂದೇನ ದೇ ಮಾಡೀಯಂತ. ಈಗ ಇದರ ಕಿಮ್ಮತ್ತೆಷ್ಟು ?

ನರಸಪ್ಪ:- ಇನ್ನೊಂದು ಸಾರೆ ನನ್ನ ಮಾಲ ವಿಶ್ವಾಸಿಟ್ಟ ತಗೊಳ್ರಿ, ಬಾಯೋರೆ. ನಾ ಹೇಳಿದ ಕಿಮ್ಮತ್ತಿನೊಳಗ ಮಾತ್ರ ಚೌಕಸೀ ಮಾಡಬ್ಯಾಡ್ರಿ.

ಸುಭದ್ರಾ:- ಅದಾತಪಾ. ಇನಿಷ್ಟು ಆಡೋವರ ಒಮ್ಮೆ ಹೇಳಲ್ಲ!

ನರಸಪ್ಪ:- ನಾ ಸುಳ್ಳ ಹೇಳಿದ್ರೂ ನಂಬ್ತೀರಿ, ಖರೆ ಹೇಳಿದ್ರೂ ನಂಬ್ತೀರಿ! ಆದರ ವಿಶ್ವಾಸದ ಜಾಗಾದಾಗ ಜಾಸ್ತಿ ತಗೊಂಡ್ರ ನಮಗದು ಎಂದೂ ದಕ್ಕೂದಿಲ್ಲ. ನಾವು ಮುಂದಿಗೆ ಮೋಸಾ ಮಾಡಿದರ ನಮಗ ಯಾತ ರೋಗರs ಹೊಡತಾ ಕೊಡತೈತ್ರಿ! ನಾ ಭಾಳ ಇದರ ಅನುಭವಪಟ್ಟೇನ್ರೀ!

ಗೋಪಾಳ:- (ರೇಗಿದ ದನಿಯಲ್ಲಿ) ನಿಂದು ಕೊಚ್ಚಿಕೊಳ್ಳೋದs ಭಾಳಾತಲ್ಲ! ಕಿಮ್ಮತ್ತೆಷ್ಟು ಅಷ್ಟು ಹೇಳಿಬಿಟ್ಟರಾಯ್ತುಪಾ!

ನರಸಪ್ಪ:- ಹೇಳ್ತೀನ್ರಿ ರಾಯರ! ಮಾರಲಿಕ್ಕೇ ತಂದಮ್ಯಾಲ ಕಿಮ್ಮತ್ತು ಹೇಳದs ಇರ್ತೀನ್ರೆ? ಮೊದಲನೆ ಸಾರೆ ವ್ಯವಹಾರ ಅಂತ ನಾಕು ಮಾತು ಹೆಚ್ಚು ಆಡಬೇಕಾಗ್ತsದ್ರಿ! ಹಿಂದಾಗಡೆ ಏನೂ ಜರೂರಿಲ್ರಿ!

ಗೋಪಾಳ:- ಮತ್ತೂ ನಿನ್ನ ಪುರಾಣಾನs ಬಿಡವೊಲ್ಲಿ ಅಲ್ಲ ನೀನು!

ಸುಭದ್ರಾ:- ಹೇಳೋ ನರಸಪ್ಪಾ!

ನರಸಪ್ಪ:- ಇವಕ್ಕ ೭೮|| ಆಗ್ತದ್ರಿ. ಮತ್ತ ನಿಮ್ಮುಂದ ಸುಳ್ಳೇನು–ಜಕಾತೀ ತಪ್ಪಿಸಿ ತಂದೇನ್ರಿ! ಆ ಮೂರುವರಿ ರೂಪಾಯಿ ಬಿಟ್ಟು ೭೫ ಬರಾಬರಿ

ಮಾಡಿ ತಗೊಂಡುಬಿಡ್ರಿ! ಇದರಾಗ ಒಂದು ರೂಪಾಯಿ ಬಿಟ್ಟು ಕೊಟ್ಟರೂ ನನಗ ಅಂಲಿನಾಗ ಲುಕ್ಸಾನಆರಿ ಮತ್ತ!

ಗೋಪಾ:– (ಅರ್ಧ ಗಡ್ಡಕ್ಕೆ ಸಬ್ಬು ಹತ್ತಿದ್ದು ಹಾಗೇ ಇರಲು ಎದ್ದು ಬಂದು) ಕಾಣಾ ಕಾಣಾ ಕಲ್ಚರ್ ಮುತ್ತಿನ ಬೆಂಡ್ವಾಲಿ; ಅದಕ್ಕ ೭೫ ರೂಪಾಯೇ? ಯಾರಆದರ ಮನಿ ಹಾಳ್ ಮಾಡೀ! ೨೫–೩೦ ರೂಪಾಯಿ ಅಂದರ ತಲಿ ಬಡದ ಹೋತು! ಹತ್ತು ರೂಪಾಯಿ ಬಿಟ್ಟು ಕೊಡ್ತೀನಿ ಅಂತ ನಮ್ಮ್ಯಾಲ ಉಪಕಾರ! ಈ ನಿನ್ನ ಉಪಕಾರದ ಲಾಭಾ ಪಡೀಲಿಕ್ಕೆ ನಾವು ಯೋಗ್ಯರಿಲ್ಲ! ನೀ ನಿನ್ನ ಮಾಲು ಒಯ್ದುಬಿಡೇನಪಾ!

ಸುಭದ್ರಾ:– ಏನ್ಹಿಂಗ ಮಾತಾಡಿದ್ರಿ? ಬ್ಯಾಡಾ – ಧಾರಣಿ ಮಾಡಿಸಿ, ಅಷ್ಟು ಕಿಮ್ಮತ್ತಿಗೆ ಅಡ್ಡಿಯಿಲ್ಲಾ ಅಂದ್ರ ತಗೊಂಬೋಣಂತ. ಅಂವ ಹೇಳಿದ ಕಿಮ್ಮತ್ತಿಗೇ ತಗೋಬೇಕಂತ ಎಲ್ಲ್ಯದ? ಅವನ ಮ್ಯಾಲ ಯಾಕ ಪಾಪ, ಹರಿಹಾಯ್ತೀರಿ?

ಗೋಪಾ:– ಹೌದು, ಧಾರಣೀ ಮಾಡೋವ್ರು ೭೫ ರೂಪಾಯಂತ ಹೇಳಿದ್ರು, ಅಂತ ಇಟ್ಟಕೊಂಬೋಣು ಓಕ್ಕಾ ತೆರೋಂವಾ ನಾನು ಇಲ್ಲ ಕಡೀಕ?

ನರಸಪ್ಪ:– ರಾಯರ ಈಗೆರಡು ವರ್ಷದಿಂದ ಬಾಯೇರು ಹೇಳ್ತಿದ್ರು ಅಂತ ತಂದೇನಿ. ನೀವು ತಗೋಳ್ದಿದ್ರ ನನಗೇನು ಸಿಟ್ಟಿಲ್ಲ. ಈ ಮಾಲು ಇದ ಊರಾಗ ಒಂದು ತಾಸಿನಾಗ ಮಾರಿಕೊಂಡುಬರ್ತೀನಿ! ಅಷ್ಟ ಅಲ್ಲ, ೭೫ ರೂಪಾಯಕ್ಕ ಮಾರಿಧಾಂಗ ಪಾವತೀ ತೋರಿಸಿ ಹೋಗ್ತೀನಿ ಮತ್ತೇನು!

ಸುಭದ್ರಾ:– ನಾವು ತಗೊಳ್ಳದಿದ್ದರ ನಿನ್ನ ಜೀನಸೇನು ಉಳೀತದೇನು ಬಿಡು. ಯಾರಾದರೂ ತಗೋತಾರ. ಕೊಡೋ ಮಾತು ಹೇಳು. ೭೫ ಅಂದ್ರ ದುಬಾರಿ. ಅದೇನು ಸಾಧ್ಯ ಇಲ್ಲ ನಮ್ಮ ಕಡಿಂದ.

ನರಸಪ್ಪ:– ಬಾಯೇರ, ಕಿಮ್ಮತ್ತಿನಾಗ ಕಡಿಮಿ ಆಗೋದಿಲ್ರಿ. ಅಷ್ಟು ರೂಪಾಯಿ ಇರದಿದ್ದರ, ಈಗ ಇದ್ದಷ್ಟು ಕೊಟ್ಟು ಉಳಿದದ್ದು ೨–೩ ತಿಂಗಳ ಮ್ಯಾಲ ಕೊಟ್ರೂ ನಡಿದೀತ್ರಿ.

ಸುಭದ್ರಾ:– ಏನು ಮಾಡೋಣು ಮತ್ತ? (ಎಂದು ಗಂಡನ ಕಡೆಗೆ ನೋಡುವಳು.)

ಗೋಪಾಳ:– (ಹೆಂಡತಿಯನ್ನು ದುರುಗುಟ್ಟಿ ನೋಡುತ್ತ) ನಿನಗ ಸ್ವಲ್ಪರ ವಿಚಾರದ ಏನು? ವ್ಯಾಪಾರಾಗೋದಕ್ಕ ಅಂವ ಬೇಕಾದ್ದ ಹೇಳ್ತಾನ!

೨-೩ ತಿಂಗಳ ಮ್ಯಾಲಾದರೂ ಪೂರಾ ಕೊಡsಬೇಕಲ್ಲಾ! ಅದೇನು ಬಿಡ್ತೇದೇನು? ಈಗೇನದರಿಂದ ಹರ್‌ಕತ್ತಾಗಿಲ್ಲ. ಬೆಂಡ್ವಾಲಿ ಹಾಕ್ಕೊಂಡು ಮೆರೆದರೂ ನಿನಗ ಮಿನಿಸ್ಟರ್ ಹೆಣ್ತಿ ಅಂತ ಯಾರೇನಂಬೂದಿಲ್ಲ! ಕಾರಕೂನನ ಹೆಣ್ತಿ ಕಾರಕೂನನ ಹೇಣ್ತೀ ಹಾಂಗs ಇರಬೇಕು! ಬಡವರಾಗಿ ನಮಗ್ಯಾಕಿವೆಲ್ಲಾ ?

ಸುಭದ್ರಾ:- ಬಡವರ ಒಯಕಿ ಬೆಂಡ್ವಾಲೀನೂ ಬೇಡಬಾರದs? ನಾ ಬೆಂಡ್ವಾಲಿ ಹಾಕೋ ಅಷ್ಟ ನಮಗ ಯೋಗ್ಯತಾ ಇಲ್ಲೇನು? ಆಗಲೇ ಏನು ಹೇಳಿದೀ ಮತ್ತ?—'ನರಸಪ್ಪ ಬರಲಿ, ಜೀವ ಒತ್ತಿಯಿಟ್ಟಾದರೂ ಬೆಂಡ್ವಾಲಿ ತಗೊಂಬೋಣು' ಅಂತ! ಪೋಸ್ಟಿನಾಗ ಇಟ್ಟಟ್ಟು ಬರ್ತ್ತೀದ್ದಲ್ಲ! ನನ್ನ ದಸಿಂದ ಆದರಾಗಿನ ೭೫ ರೂಪಾಯಿ ತೆಗದರ ಏನಾಗ್ತದ? ದುಡ್ಡು ಹೋದರ ವಸ್ತಾ ಬರ್ತsದ ಮನೀಗೆ!

ನರಸಪ್ಪ:- ೭೫ ರೂಪಾಯಿಗೆ ಬಾಯೇರs, ಒಬ್ಬ ಕಳ್ಳ ತಗೋತಾನ.

ಗೋಪಾಲ:- ಅಂಡಮ್ಯಾಲ ಅಂವಗs ಕೊಡೇನಪಾ! ನಾವೇನು ಕಳ್ಳರಲ್ಲ, ಖರೀತs?

ನರಸಪ್ಪ.- ರಾಯರ, ನೀವು ಹ್ಯಾಂಗ್ ಮಾತಾಡಿದರೂ ನಡೀತದ! ಇದು ಖುಷೀ ಕಲಸ ರಾಯರ. ಈ ಸೊಟ್ಟ ವಸ್ತದ ಕಾಲಾಗ ನಿಮ್ಮ ನಿವ್ಮೊಳಗ ತಂಟೇ ಬ್ಯಾಡ! ನನಗ ಸಾವಿರ ಗಿರಾಕಿ. ಬಾಯೇರು ಹೇಳಿದ್ರೂ ಅಂತ ವಿಶ್ವಾಸದಿಂದ ಮಾಡಿಸಿತಂದಿದ್ದೆ. ಬ್ಯಾಡಂತೀರಿ. ಅದಕ್ಕೂ ನಮ್ಮ ತಕರಾರಿಲ್ಲ. ಬೇಕಾದರ ಹರಳಿನ ಮೂಗುಬಟ್ಟವ, ಉಂಗುರವs! ತಗೋಬೇಕಂಬೊ ಜಬರಿಲ್ಲ. ನೋಡೋ ಮನಸ್ಸಿದ್ರ ಅವನ್ನೂ ತೋರಿಸ್ತೇನಿ.

ಗೋಪಾಲ:- (ಅತ್ತಿಂದಿತ್ತ ಓಡಾಡುತ್ತಿದ್ದವನು ನಿಂತು) ಏ ನರಸಪ್ಪಾ, ನೀ ಇಲ್ಲದ ಬ್ಯಾಟಾ ಮಾಡಬ್ಯಾಡಾ! ನನ್ನ ತಲೀ ಸಮ ಇಲ್ಲೀಗ! ನನ್ನ ಬಾಯಿಂದ ಸುಮ್ಮನs ದುಬಾರಿ ಮಾತು ಆಡಿಸಿಕೊಂಡು ಹೋಗಬೇಕಾದೀತು. ನೀ ಜಾಗಾ ಬಿಡೇನಪಾ!

ನರಸಪ್ಪ:- ಬಾಯೇರ, ಆ ಬೆಂಡ್ವಾಲೀ ಕೊಡ್ರಿಲ್ಲಿ! ನಾ ಲಕ್ಷಾಂತರ ರೂಪಾಯಿ ವ್ಯಾಪಾರ ಮಾಡ್ತೇನ್ರಿ. ಹೀಂಗೆಲ್ಲೂ ಆಡಿಸಿಕೊಂಡಿದ್ದಿಲ್ರಿ. ಆಗಲಿ. ನಿಮ್ಮ ದಸಿಂದ ಆಡಿಸಿಕೊಂಡೆ ಅನಬೇಕು. ಕೊಡ್ರಿ ಬಾಯೇರ, ತಿಳಿಧಾಂಗಾತು. (ಸುಭದ್ರಾ ಬೆಂಡೋಲೆಯ ಡಬ್ಬಿಯನ್ನು ಸಿಟ್ಟಿನಿಂದ ನರಸಪ್ಪನ

ಮುಂದೆ ಎಸೆಯುತ್ತಾಳೆ. ಆವನು ಅದನ್ನೆತ್ತಿ ಜೇಬಿನಲ್ಲಿಟ್ಟು ಹೊರಡಲು ಅಣಿಯಾಗುತ್ತಾನೆ.) ರಾಯರ, ಅಪ್ಪಾವರಿಗೆ ತಗೊಳ್ಳೋವ ನಸ್ಯೆತಿ! ಅವರ ದಸಿಂದs ಕಷ್ಟಪಟ್ಟು ಮಾಡಿಸಿ ತಂದೇನಿ, ತಿರಿಗಿ ಒಯ್ ಬೇಕೂ ಅಂದರ ನನಗೂ ಜೀವಕ್ಕ ಹ್ಯಾಂಗೋ ಅನಸ್ತೈತಿ. ಹತ್ತು ರೂಪಾಯಿ ನಂದs ಹೋಗಲಿ. ೬೦ ರೂಪಾಯಿಗs ತಗೊಂಡ ಬಿಡ್ರಿ ಈ ಕಿಮ್ಮತ್ತು ಯಾರಾದರೂ ಹೆಚ್ಚು ಅಂದರ ನನಗೊಂದು ಪೈ ಕೊಡಬ್ಯಾಡ್ರಿ! ಬೇಕಾದರ ಹೀಂಗೂ ಮಾಡ್ರಿ— ಅರ್ಧ ರೊಕ್ಕಾ ಈಗ ಕೊಡ್ರಿ; ಅರ್ಧ ನಿಮ್ಮ ಸವುಡೀ ಪ್ರಕಾರ ಕಳಿಸ್ರಿ. ಇದಕ್ಕಾದರs ಕಬೂಲಾಗ್ರಿ, ಹೋಗಲಿ!

ಗೋಪಾಳ:— ಮೂವತ್ತು ರೂಪಾಯ್ ಮಾತಿರಲಿ; ಮೂರು ರೂಪಾಯಿ ಸಹಿತ ಈಗ ನಾ ಕೊಡಲಿಕ್ಕೆ ತಯಾರಿಲ್ಲೇನಪಾ !

ಸುಭದ್ರಾ:— ನರಸಪ್ಪಾ, ಆ ಬೆಂಡ್ವಾಲಿ ತಾ ಇಲ್ಲಿ! ನಾಳೆ ಬಾದು ನಿನ್ನ ಅರ್ಧ ರೂಪಾಯಿ ತಗೊಂಡುಹೋಗು !

ಗೋಪಾಳ:— ನರಸಪ್ಪಾ. ಆ ಬೆಂಡ್ವಾಲಿ ನನಗ ಬೇಕಾಗಿಲ್ಲ; ಹ್ಯಾಂಗ ತಂದೀದಿ ಹಾಂಗs ತಗೊಂಡುಹೋಗು!

ಸುಭದ್ರಾ:— ನರಸಪ್ಪಾ, ನಾ ತಾ ಅಂತ ಹೇಳೀನಿ; ಅದರ ಜವಾಬ್ದಾರಿ ನಂದು ! ಅದನ್ನ ಕೊಟ್ಟು ಹೋಗಿಲ್ಲಿ !

ಗೋಪಾಳ:— ನರಸಪ್ಪಾ, ಕೊಟ್ಟೀ ಅಂದರ ಕೆಟ್ಟಿ ! ಅದರ ಜವಾಬ್ದಾರೀ ನಿಂದು ! ತಗೊಂಡು ಹೋಗು, ಒಲ್ಲೆ !

[ನರಸಪ್ಪ ಗೋಪಾಳನ ಕಡೆಗೊಮ್ಮೆ, ಸುಭದ್ರೆಯ ಕಡೆಗೊಮ್ಮೆ ನೋಡುತ್ತಿರುತ್ತಾನೆ.]

ನರಸಪ್ಪ:— ನಾ ಯಾರ ಮಾತಂತ ಕೇಳಬೇಕು ರಾಯರ? ನಾ ಕೊಡೋದೂ ಇಲ್ಲ, ಒಯ್ಯೋದೂ ಇಲ್ಲ— ಇಲ್ಲೇ ಇಟ್ಟು ಹೋಗಬಿಡ್ತೇನಿ. ನೀವು ನೀವು ಬೇಕಾದ್ದು ಮಾಡಿಕೊಳ್ರಿ !

ಗೋಪಾಳ:— ಏ, ಯಾಕ ? ಹುಡುಗಾಟ ನಡಿಸೀಯೇನು ? ಹೋಗ್ತಿಯೊ ಏನಂತಿ? (ನರಸಪ್ಪನ ಮೈಮೇಲೆ ಹೋಗುತ್ತಾನೆ. ನರಸಪ್ಪ ಕಾಲುಕೀಳುತ್ತಾನೆ. ಸುಭದ್ರಾ ಕಾಲಪ್ಪಳಿಸುತ್ತ, ಅಳುಮೋರೆ ಮಾಡಿಕೊಂಡು, ಆದರೂ ಸಿಟ್ಟಿನಿಂದ ಉರಿಯುತ್ತ, ಬಿಮ್ಮನೆ ಗೋಡೆಗೆ ಅತ್ತು ಕುಳಿತುಬಿಡುತ್ತಾಳೆ. ಗೋಪಾಳ ಕನ್ನಡದ ಸಾಹಿತ್ಯವನ್ನೆಲ್ಲ ತೆಗೆದಿಡುತ್ತ) ಅಂತು ವಸ್ತಾ ಅಂದ್ರ ಪ್ರಾಣಾಕೊಡ್ತೀರಿ ನೋಡ್ರಿ ನೀವು ಹೆಂಗುಸರು! ಬೇಕಾದ ವಚನ ಕೊಡಬಹುದು; ವಸ್ತಾ

ಕೊಡಿಸ್ತೀನಿ ಅಂತ ಮಾತ್ರ ಯಾವ ಗಂಡುಸೂ ವಚನಾ ಕೊಡಬಾರದು! ನಮ್ಮ ಮರ್ಯಾದೀನ ತಗೋತಾರ. ಅಲ್ಲ, ನನ್ನ ಹೆಣ್ತಿ ಬಹಳ ವಿವೇಕಿ ಅಂತ ನಾ ಮಂದೀ ಮುಂದ ಕೊಚ್ಚಿಕೋತಿದ್ದೆ. ನೀ ನೋಡಿದರ ವಸ್ತ್ರದ ಕಾಲಾಗ ನನ್ನ ಮರ್ಯಾದಿನ ತೆಗದ ಬಿಟ್ಟೆ! (ತುಸು ಹೊತ್ತು ಸುಮ್ಮನಿದ್ದು) ಉಂ, ಇನ್ನೇನು ನಮಗ ಚಹಾ ಸಿಗ್ತsದ! ಇಂದು ಊಟರೆ ಸಿಗ್ತsದೋ ಇಲ್ಲೋ ಅಂತೀನಿ! ಏಳ್ತಿಯೋ, ಹೀಂಗs ಚಾಮುಂಡೀ ಹಾಂಗ ಕೂದಲಾ ಬಿಟ್ಕೊಗೊಂಡು ಕೂತುಬಿಡ್ತೀಯೋ? (ಸುಭದ್ರಾ ಮಾತನಾಡುವುದಿಲ್ಲ. ಮೋರೆ ಕಾಣಿಸಬಾರದೆಂದು ಗೋಡೆಯ ಕಡೆಗೆ ತಿರುಗುತ್ತಾಳೆ.) ಅಡಿಗಿ ಗಿಡಿಗಿ ಆದsನೊ ಇಲ್ಲೊ ಮನ್ಯಾಗಿವತ್ತು?

ಸುಭದ್ರಾ:– (ಉತ್ತರವಿಲ್ಲ.)

ಗೋಪಾಳ:– (ಅವಳೆದುರಿಗೆ ಹೋಗಿ ನಿಂತು) ಅಡಿಗೀ ಊಟ ಇಲ್ದಿದ್ರ ಹೋಕ್ಹೋತು, ಜಗಳಾಡಿಕೋತಾರೆ ಕೂಡೋಣು. ಅದsರೆ ಒಂದು ಕೆಲಸಾಗಲಿ! (ಸುಭದ್ರಾ ಮೋರೆಯನ್ನು ಇನ್ನೊಂದು ಕಡೆ ತಿರುಹುವಳು. ಗೋಪಾಳನೂ ಅದೇ ದಿಕ್ಕಿನಲ್ಲಿ ಎದುರು ನಿಲ್ಲುವನು. ಸುಭದ್ರಾ ಎದ್ದು ಹೋಗಿ ಬೇರೊಂದು ಕಡೆ ಕೂಡುವಳು.) ಆತು, ಸಂಜೀ ತನಕಾ ಹೀಂಗs ಮಾಡಿಕೋತ ಇರೋಣು! ಇವತ್ತ ಬಕರೀದ್ ಹಬ್ಬ, ಇದs ಆತಂದಾ! (ಹೋಗಿ ಕುರ್ಚಿಯ ಮೇಲೆ ಕೂಡುವನು) ನಾ ಮನ್ಯಾಗಿರಬೇಕೊ ಖಾನಾವಳಿಗ್ಹೋಗಬೇಕೊ?

ಸುಭದ್ರಾ:– ಹೋಗ್ರಿ. ನನ್ನೇನು ಕೇಳ್ತೀರಿ?

ಗೋಪಾಳ:– ನೀ ಅಡಿಗೀ ಮಾಡೋದಿಲ್ಲ ಹೌದಲ್ಲೊ ?

ಸುಭದ್ರಾ:– ಇಲ್ಲ, ಮಾಡೋದಿಲ್ಲ !

ಗೋಪಾಳ:– ಮತ್ತ ನೀನು ?

ರ:– ನನ್ನ ಗೊಡವಿ ನಿಮಗ್ಯಾಕ ?

ಗೋಪಾಳ:– ಇದು ಎಷ್ಟ ದಿನ ಹೀಂಗs ನಡಿಯೋದು ?

ಸುಭದ್ರಾ:– (ಉತ್ತರವಿಲ್ಲ.)

ಗೋಪಾಳ:– ಅಲ್ಲ, ಈಗ ಅರುವತ್ತು ರೂಪಾಯಿ ಕೊಟ್ಟು ಆ ಚೆಂದ್ರಾಳೀ ತಗೋಬೇಕs ?

ಸುಭದ್ರಾ:– ಹೌದು, ತಗೋಬೇಕು ! ತಗೋತೀನಿ ಅಂತ ಹೇಳಿದ್ದಿರಿಲ್ಲೊ?

ಗೋಪಾಳ:– ನೀ ಚಹಾ ಮಾಡಬೇಕು ಅಂತ ಹಾಂಗ ಹೇಳಿದ್ದೆ !

ಸುಭದ್ರಾ:– ಅಂದ್ರ ? ನೀವು ಹೇಳಿದ್ದು ಖರೆ ಅಲ್ಲ ಅನ್ರಿ !

ಗೋಪಾಳ:– ಖರೇ ಅಲ್ಲಾ ಅಂತೇನಲ್ಲ !

ಸುಭದ್ರಾ:– ಸುಳ್ಳಲ್ಲ ಅಂತನೂ ಅಲ್ಲ ! ಹೀಂಗ ಸುಳ್ಳು ಮಾತಾಡಲಿಕ್ಕೆ ಮನಸ್ಸರೆ ಹ್ಯಾಂಗಾಗ್ತದೆ ಅಂತೀನ್ನಾ? ನಮ್ಮ ಜನ್ಮಾನ ನಿಮ್ಮ ಕೈಯಾಗ ಕೊಟ್ಟೇವಿ. ಅಂಥವರಿಗೂ ನೀವು ಸುಳ್ಳಾಡಿ ಮೋಸಾಮಾಡ್ತೀರಿ ಅಂದ ಮ್ಯಾಲ ಉಳಿದವರ ಪಾಡೇನು ?

ಗೋಪಾಳ:– ಮನ್ಯಾಗ ಸುಳ್ಳು ಹೇಳಿದರೂ ನಡೀತದ!

ಸುಭದ್ರಾ:– ಸಾಕು, ಮಾತಾಡಲಿಕ್ಕೊಂದು ನೆಟ್ಟಗ ಬರ್‍ತದ.

ಗೋಪಾಳ:– ಅದಾತು, ಹೀಂಗೆ ಎಷ್ಟೊತ್ತು ನಡಿಯೋದೂ ಆತ? ಜಹಾಗಿಹಾ ಮಾಡ್ತೀಯೊ ಇಲ್ಲೊ? ಏನ್ಹೀಂಗೆ ಕೂತಬಿಡ್ತೀಯೊ?

ಸುಭದ್ರಾ:– ನಾ ಏನೂ ಮಾಡೂದಿಲ್ಲ. ನಿಮಗ ಬೇಕಾದ್ರ ಮಾಡಿಕೊಳ್ರಿ! ಹರಿಬ್ರಹ್ಮ ಬಂದರೂ ಈ ಜಾಗಾ ಬಿಟ್ಟು ಏಳೋದಿಲ್ಲ ನಾ ಏನು! (ಒಮ್ಮೆಲೆ ಗೆಳೆಯ ಗಣೇಶ ಊರಿಂದ ಅಕಸ್ಮಾತ್ ಬರುತ್ತಾನೆ. ಅವನನ್ನು ನೋಡಿದವಳೆ ಸುಭದ್ರಾ ಒಳಗೆ ಓಡಿಹೋಗುತ್ತಾಳೆ. ಗೋಪಾಳ ಆಶ್ಚರ್ಯದೊಡನೆ ಗಣೇಶನನ್ನು ಸ್ವಾಗತಿಸುತ್ತಾನೆ.)

ಗೋಪಾಳ:– ಎಲ, ಇದೇನೊ? ಊರಿಂದನ ಬಂದೇನು? ಬರ್‍ತೀಯಂತ ಕಾಗದಿಲ್ಲ, ಪತ್ರಿಲ್ಲ........

ಗಣೇಶ:– ಈ ಊರಾಗ ವರಾ ನೋಡೋ ಒಂದು ಕೆಲಸ ಹತ್ತ್ಯಾದ ನಮಗ! ಅದಕ್ಕ ಬಂದೆ ಈಗ–ಏಕಾಏಕಿ. ನಿನ್ನ ಮುಖ ಹೀಂಗ್ಯಾಕಾಗೇದ ? ಮತ್ತ, ಅತ್ತಿಗ್ಯಾಕ ನನ್ನ ನೋಡಿದಾಕೇ ಒಮ್ಮೆಲೇ ಒಳಗೆ ಹೋಗಿಬಿಟ್ಲು ? ಏನ್ನಡದದೇನಿದು ? ಹೊಸಾ ಪದ್ಧತಿ ಹಾಕಿಕೊಟ್ಟೀಯೇನು ಮನ್ಯಾಗ?

ಗೋಪಾಳ:– ಎಲ್ಲೀ ಪದ್ಧತಿ! ಹಾಂಗೇನೂ ಇಲ್ಲ. ಕೂಡಲ್ಲಾ! ಎಲ್ಲಾರೂ ನೆಟ್ಟಗಿದ್ದಾರೆ ? ಮತ್ತೇನು ಸುದ್ದಿ? ಯಾವಾಗ ಹೊರಟಿದ್ದಿ ?

ಗಣೇಶ:– ನಿನ್ನೆ ರಾತ್ರೀ ಹಡಿಗೆ ! ಹುಡುಗರೆಲ್ಲ್ಯವ ನಿನ್ನವು ?

ಗೋಪಾಳ:– ಈಕೀ ತಂಗೀ ಕಡಿಗೆ ಹೋಗ್ಯಾವ– ನಾಲ್ಕು ದಿವಸ.

ಗಣೇಶ:– ಹಂಗಾರ ರಾಜ ರಾಣಿ ಇಬ್ಬರೆ ಅನ್ನು ಮನ್ಯಾಗೀಗ! ನಿನ್ನ ಕಚೇರಿ ಎಷ್ಟೊತ್ತಿಗೆ ?

ಗೋಪಾಳ:– ಇವತ್ತ ಕಚೇರಿಗೆ ರಜಾ.

ಗಣೇಶ:– ಭಲೊ ಆತು. (ಬಾಗಿಲ ಕಡೆಗೆ ಹೋಗಿ) ಅತ್ತಿಗಿ, ಅತ್ತಿಗಿ? ಎಲ್ಲಿ ಸುಳಿವs ಇಲ್ಲಲ್ಲೊ? (ಒಳಗೆ ಹೋಗಿ ನೋಡಿಬರುತ್ತಾನೆ) ಎಲ್ಲಿ? ಇಷ್ಟ ರಾಗs ಅದೃಶ್ಯಳಾಗ್ಯಾಳಲ್ಲ? ನಾ ಒಂದರ ಎಷ್ಟು ಪ್ರೀತಿಯಿಂದ ಮೊದಲು ಮಾತಾಡಿಸೋ ಆಕಿ! ಆಂ, ಏನದsಏನಿದು?

ಗೋಪಾಳ:– ಏನಿಲ್ಲೇಳೊ! ನೀ ಅರಿವಿ ಗಿರಿವಿ ತೆಗಿ, ಕೂಡಲ್ಲ.

ಗಣೇಶ: ನನಗೀಗ ಚಹಾ ಬೇಕಪಾ!

ಗೋಪಾಲ:– (ಅನುಮಾನಿಸಿ) ಚಹಾನs? ಮಾ....ಮಾಡಿಸೋಣಲ್ಲ! ಇಲ್ಲದಿದ್ದರ ಹೊರಗs ಹೋಗೋಣೇನು? ಸೂಟೆ ಅದs; ಅಡ್ಡಾಡಿ ಬಂಧಾಂಗಾತು!

ಗಣೇಶ:– ಮಹಾರಾಯಾ, ಇದs ಬಂದೀನ್ನಾ. ಚಹಾ ತಗೊಂಡs ಹೊರ ಬೀಳೋಣಂತೀನಿ!

ಗೋಪಾಳ:– ಹೀಂಗs? ಮುಂಜಾನೆ ಈಗ ಎರಡು ಸಾರೆ ಚಹಾ ಆತು. ಹಾಲು ಅದsನೊ ಇಲ್ಲೊ ಅನುಮಾನ!

ಗಣೇಶ:– ಅತ್ತಿಗೆಲ್ಲಾ ಮಾಡಿಕೊಡ್ತಾಳ! ನಾನs ಹೇಳಿ ಬರ್ತೀನಿ ನಿಂದ್ರು ಅತ್ತಿಗೀಗೆ— ಚಹಾ ಮಾಡು ಅಂತ! ಹಾಂಗs ಮಾತಾಡಿಸಿಧಾಂಗೂ ಆತು!

ಗೋಪಾಳ:– ನೀ ಕೂಡೊ, ನಾ ಎಲ್ಲಾ ಹೇಳ್ತೀನಿ. (ಒಳಗೆ ಹೋಗಿ ಬಂದು) ಏಏಏ ಹಾಲು ತೀರ್‍ಯಾ ವಂತಪಾ! ಏನು ಮಾಡೋಣು?

ಗಣೇಶ:– ಯಾರು ಅತ್ತಿಗೀನs ಹೇಳಿದ್ಲೇನು?

ಗೋಪಾಳ:– ಹುಂ, ಮತ್ಯಾರು ಹೇಳೋವ್ರು ?

ಸುಭದ್ರ:– (ಒಳಗಿನಿಂದಲೆ) ಸುಳ್ಳ್ಯಾಡಬ್ಯಾಡ್ರಿ! ನಾ ಎಲ್ಲಿ ಹಾಂಗ ಹೇಳೀನಿ!

ಗಣೇಶ:– (ಬಾಗಿಲಿನ ಬಳಿ ನಿಂತು) ಅತ್ತಿಗಿ, ಅತ್ತಿಗಿ, (ಉತ್ತರವಿಲ್ಲವಾಗಲು) ಇದೇನ್ನಡದದಪಾ? ನಮಗೂ ತುಸು ತಿಳೀಲೆಲ್ಲಾ! ಖರೇ ಹೇಳು, ಜಗಳಾಡೀರೇನು? ಹಾಂಗs ಕಾಣಿಸ್ತದ ಲಕ್ಷಣ! ಗೊತ್ತು ನನಗ, ಏನಾ ಅಂದಿದ್ದೀ! ಅಥವಾ ಸುಳ್ಳs ಏನಾದರೂ ಮಾಡ್ತೀನಿ ಅಂಜೋದು, ಅದನ್ನ ಮಾಡಲಿಕ್ಕಿಲ್ಲ! ಇದs ಆಕು ನಿನ್ನ ಬಾಳು! ಅಲ್ಲ, ಇಂದ ಯಾತಕ್ಕಾಗಿ ಬಂದದ ಜಗಳ?

ಗೋಪಾಳ:– ಜಗಳ್ಯಾತರದು! ಮುಂಜಾನೆ ಒಬ್ಬ ಮುತ್ತು ಮಾರಾಂs ಬೆಂಡ್ವಾಲೀ ತಂದಿದ್ದನs. ಹೋದವರ್ಷಾನs ಈಕಿ ಅಂವಗ ಆರ್ಡರ್ ಕೊಟ್ಟು ಇಟ್ಟಿದ್ಲಂತ. ಅವನ್ನ ನಾ ತಗೋಗೊಡಿಸಲಿಲ್ಲಾ ಅಂತ ಈಗ

ಸಿಟ್ಟು, ಬಂದsದ! ಏನು ಹೇಳಬೇಕು?

ಗಣೇಶ:– ನನಗ ಗೊತ್ತೋ ನಿನ್ನ ಹಣೇಬಾರ! ಕಿಮ್ಮತ್ತೆಷ್ಟು ಅದಕ್ಕs?

ಗೋಪಾಳ:– ಅರುವತ್ತು ರೂಪಾಯಿಗೆ ಕೊಡಲಿಕ್ಕೆ ತಯಾರಾಗಿದ್ದ. ವಿನಾ ಕಾರಣಪಾ! ಅದರಾಗ ಕಲ್ಚರ್ ಮುತ್ತಿನಾಗ ದುಡ್ಡು ಹಾಕೋದಂದ್ರ ಶಿಪ್ಪ್ಯಾಗ ಒಗದ್ಹಾಂಗs ನೋಡು! ತಗೊಂಡೋಣು ಅಂತ ಈಕಿ, ಬ್ಯಾಡಾ ಅಂತ ನಾನು. ಆ ಮುತ್ತಿನವನೆದುರಿಗೆ ತನ್ನ ಅಲ್ಲಗಳೆದು ಮಾತಾಡಿದೇ ಅಂತ, ಈಗ ಸಿಟ್ಟಾಗಿ ಕೂತಾಳ!

ಗಣೇಶ:– ಅಲ್ಲೊ, ಹೆಣ್ತೀ ಸಲುವಾಗಿ ಅರುವತ್ತು ರೂಪಾಯಿ ಸಹಿತ ಖರ್ಚು ಮಾಡಲಿಕ್ಕೆ ತಯಾರಿಲ್ಲಲ್ಲs ನೀನು? ಇಡೀ ಜನ್ಮಾ ನಿನಗಾಗಿ ಮೀಸಲಿಟ್ಟಾಳ! ಅದರಾಗ ನಿನ್ನ ಅದೃಷ್ಟ ಒಳ್ಳೇದಂತs ಅತ್ತಿಗಿ ಅಂಥಾಕಿ ನಿನಗ ಹೆಣ್ತಿ ಸಿಕ್ಕಾಳ. ಕಾಲ ಬದಲಾಗ್ಯದೀಗ! ಈಗಿನ ಹೆಂಗುಸರಲ್ಲಿ ಸ್ವಲ್ಪ ಸ್ವಾಭಿಮಾನ ಹೆಚ್ಚಿರ್ತsದ! ಮಂದಿ ಇದ್ದಾಗ ಅವರ್ನ ಕೆಣಕೋದು ತಪ್ಪಾಗ್ತsದ! ನೀನಿನ್ನೂ ಮಾಜೀಕಾಲದ ಗಂಡ ಮಾಡಿಧಾಂಗ ಮಾಡಿದರ ಹ್ಯಾಂಗ್ ನಡಿದೀತೂ? ಹೆಣ್ತಿನ್ನ ಆಳೋ ಕಲಾ ಸ್ವಲ್ಪ ಕಲೀಬೇಕು ನೀ! ಅವರು ಕೇಳೋದು ಬಹಳಿರೋದಿಲ್ಲೋ ಹಾಂಗs! ನಾವು ನಮಗಾಗಿ ಎಷ್ಟೆಷ್ಟು ಖರ್ಚು ಮಾಡ್ತೀವಿ?– ಒಂದು ಸಿಗರೇಟು, ಚಹಾ, ಸಿನೇಮಾದ ಲೆಕ್ಕಾ ಹಾಕಿದರsನs ವರ್ಷಕ್ಕ ಐನೂರು ರೂಪಾಯsರ ಆಗ್ತಿದ್ದೀತಪಾ! ಹೇಣ್ತಿಗಾಗಿ—ಅರುವತ್ತು ರೂಪಾಯಿಗೆ ಹಿಂದುಮುಂದು ನೋಡ್ತಿ! ಈಗ ಬೆಂಡ್ವಾಲಿ ತಗೊಂಡೀ ಅಂದರ, ಇನ್ನ ಆರೆಂಟು ವರ್ಷ ಏನೂ ಕೇಳೋದಿಲ್ಲ ಅತ್ತಿಗಿ! ಇಷ್ಟಾಗಿ ನಿನಗೇನು ಧಾಡಿ ಆಗೇದ? ಪಗಾರಲ್ಲದs ಮ್ಯಾಲ ಈ ಕಾಲದಾಗ 'ಗೋಪಾಳ' ಬೇಕಾದಷ್ಟು ಬರ್ತsದಪಾ!

ಗೋಪಾಳ:– ನೀನೂ ಆಕೀ ವಕೀಲಿ ತಗೊಂಡು ಮಾತಾಡಿದಿ ಅಂದ್ರ ಮುಗದsಹೋತಲ್ಲ! ನೀ ಏನs ಹೇಳು, ಆ ಕಲ್ಚರ್ ಮುತ್ತಿನಾಗ ದುಡ್ಡು ಹಾಕೋದು ನನಗೇನೂ ಮನಸಿಲ್ಲ ನೋಡಪಾ!

ಗಣೇಶ:– ಖರೇ ಮುತ್ತಿನಾಗsರ ನಿನಗ ಪ್ರೀತಿ ಅದ ಏನು?

ಗೋಪಾಳ:– ಅದು ಯಾರಿಗಿರಲಿಕ್ಕಿಲ್ಲ?

ಗಣೇಶ:– ಮುಗಸs! ಇರಲಿ, ಇನ್ನು ನಿಮ್ಮ ಜಗಳ ರಾಜೀಯಾಗೋ ಥ್ಯಾಂಗಲಾ!

ಗೋಪಾಳ:– ಆಗದಿದ್ದರ ಹೋಗಲಿ !

ಗಣೇಶ:– ನಿನ್ನಂಥಾ ಮನುಷ್ಯನ್ನs ನಾ ಎಲ್ಲ್ಯೂ ನೋಡಿಲ್ಲ ನೋಡು ! ನೀನೂ ಮಹಾ ಜಿಬಟಪಾ !

ಗೋಪಾಳ: ಹಾಂಗಂತs ಈಕೀ ಧಕ್ಕಡಿಗೆ ತಡಕೊಂಡೀನಿ ಮಾರಾಯಾ ! ಮತ್ತ್ಯಾನ ಗಂಡಾಗಿದ್ದರ ಕಪನೀನs ಹಾಕಿಸ್ತಿದ್ಲು !

ಗಣೇಶ:– ಅಂತೂ ನೀ ಯೇನೂ ಜಿಂಡ್ಪಾವಲಿ ಕೊಡಸೋಂವಲ್ಲನ್ನ ?

ಗೋಪಾಳ:– ಹೋಗಲಿ ಬಿಡೋ ! ಎಲ್ಲೀ ಜಿಂಡ್ಪಾವಲಿ ಹಚ್ಚೀ ! ನಾ ಕೊಡಿಸೋದಿಲ್ಲ ಮಾರಾಯಾ !

ಗಣೇಶ:– ಮುಂವ ? (ತುಸು ಯೋಚಿಸಿನೋಡಿ) ಇದು ನೋಡು .... ನಾ ಈಗೊಂದು ತಾರು ಮಾಡಿ ಬರಬೇಕಾಗೇದ. ಹತ್ತು ಮಿನಿಟನಾಗ ಬರ್ತೀನಿ; ಏನು ?

ಗೋಪಾಳ:– ಆ ಮ್ಯಾಲ ಹೋಗೋಣಲ್ಲಾ !

ಗಣೇಶ:– ಇಲ್ಲಿಲ್ಲ, ನಾ ಈಗ ಬರ್ತೀನಿ. (ಹೋಗುವನು.)

ಗೋಪಾಳ:– (ಸ್ವಗತ) ಗಣೇಶ ಒರೋದರಾಗs ಈಕೀ ಸಿಟ್ಟು ಇಳೀದಿದ್ದರ ನಮ್ಮ ಫಜೀತೀನs ಅದ! (ಎದ್ದು) ಈಕ್ಯಂತೂ ಒಳಗs ಕೂತುಬಿಟ್ಟಾಳ. ಕರ್ದು ಒಂದಿಷ್ಟು ತಿದ್ದ್ಯರ ತಿದ್ದೋಣು ! ಹಾದಿಗೆ ಬಂದಾಳಂಬೊ ಆಶಾ ಇಲ್ಲ ! ಪುರುಷ ಪ್ರಯತ್ನ ಮಾಡೋದೂ ಆತು ! (ಒಳಗೆ ಹೋಗುವನು. ಒಂದೆರಡು ನಿಮಿಷದ ತರುವಾಯ ಹೊರಗೆ ಬರುವನು.) ಹೊರಗ ಬಂದsರ ಬರಬಾರದs ? (ಸುಭದ್ರಾ ಹೊರಗೆ ಬರುವಳು.)

ಗೋಪಾಳ:– ಆ ಮುತ್ತಿನವನೆದುರಿಗೆ ನಮ್ಮ ಮಂಗಳಾರತಿ ಆತು. ಇನ್ನು ಗೆಳೆಯನೆದುರಿಗಿಷ್ಟು ನನ್ನ ಫಜೀತೀ ಮಾಡಿಬಿಡು ಅಂದ್ರ ಕೆಲಸಾನs ಬಗೀಹರೀತು ! ಗಣೇಶ ಬಂದಾನ ಗೊತ್ತದನೊ ಇಲ್ಲೊ ?

ಸುಭದ್ರಾ:– (ಗೋಡೆಗೆ ಆತುಕೊಂಡು ನಿಂತು) ಗೊತ್ತುಮಾಡಿಕೊಂಡು ನಾ ಏನ್ ಮಾಡೋದದs !

ಗೋಪಾಳ:– ಅಂದರ ?

ಸುಭದ್ರಾ:– (ವಕ್ಕನೆ) ಅಂದರ ? ನಾ ಏನ್ ಮಾಡಬೇಕು ?

ಗೋಪಾಳ:– (ದರ್ಪದ ಧ್ವನಿಯಿಂದ) ಈಗ ಅಂವಗ ಚಹಾ ಬೇಕು, ಆ ಮ್ಯಾಲ ಅಡಿಗಿ ಆಗಬೇಕು !

ಸುಭದ್ರಾ:– ಇದೇನು ಖಾನಾವಳಿ ಅಲ್ಲ, ಆರ್ಡರ್ ಕೊಡಲಿಕ್ಕೆ !

ಗೋಪಾಳ:– ನೀ ಹೀಂಗ ಅಡ್ಡಡ್ಡ ಮಾತಾಡಬ್ಯಾಡಾ— ತಲಿ ಕೆಟ್ಟಿತೂ ಅಂದರ ಮನಶಾ ಅಲ್ಲ ನಾ!

ಸುಭದ್ರಾ:– ಇನ್ನೂ ಸಂಶಯ ಅದs ಏನದರಾಗ?

ಗೋಪಾಳ:– ಅಲ್ಲ, ಇಷ್ಟು ಚಂಡಿತನ ಯಾಕ ಬಂತು ನಿನಗ ?

ಸುಭದ್ರಾ:– (ಅಣಕಿಸಿ) ಇಷ್ಟು ಮಂದ... ಯಾಕ ಬಂತು ನಿಮಗ ? 'ಜೀವಾ ಒತ್ತೀ ಇಟ್ಟಾದರೂ ತಂದುಕೊ... ರೂಪಾಯಿ' – ಎಲ್ಲಿ ಹೋದವು ಆ ಮಾತು ? ಇಂಥಾ ರಾಜ್ಯ-ಕೋಷ ಸಹಿತ ದಾನಾ ಮಾಡಿದ ಹರಿಶ್ಚಂದ್ರ– ಕೊಟ್ಟ ವಚನಾ ತಪ್ಪಬಾರದು ಅಂತ ! ನಿಮ್ಮ ಮಾರೀಗೊಂದು ಬೆಂಡ್ವಾಲಿ ಕೊಡಿಸೋದಾಗವೊಲ್ಲದು ! ಅದೂ ಮಾಡಿಕೊಂಡ ಹೇಣ್ತಿಗೆ ! ದೇಶಕ್ಕಾಗಿ ಪ್ರಾಣಾ ಕೊಡೋದು ಒಂದು, ಎಲ್ಲಿ ಹೋಗಿ ಮುಖಾ ಅಡಗಿಸ್ತೀರೋ ಏನೊ! ನಮ್ಮ ಹೆಂಗಸರಿಗೇ ಬುದ್ಧಿ ಕಡಿಮಿ ! ನಿಮ್ಮನ್ನ....

ಗೋಪಾಳ:– (ನಡುವೇ) ಇದು ನೋಡು, ಲೆಕ್ಚರ್ ಹೊಡೀಲಿಕ್ಕೆ ನನಗೂ ಬರ್ತsದ! ಈಗ ಇವೆಲ್ಲಾ ಮಾತಿ.ಲಿ. ಗಣೇಶ ಈಗ ಒರ್ತಾನ. ಅಂವ ಇರೋ ತನಕಾ ಆದರೂ ಈ ಸಿಟ್ಟು ಎಲ್ಲ್ಯಾರ ಬ್ಯಾರೇ ತೆಗದಿಡು ! ಇಲ್ದಿದ್ರ ನನ್ನ ಹತ್ತಿರ ಕೊಟ್ಟೆರು ! ಅಂವ ಟಾಂಗಾ ಹತ್ತಿದಾ ಅಂದ್ರ, ಮತ್ತ ನಿನ್ನ ಸ್ವಾಧೀನ ಮಾಡ್ತೀನದನ್ನ !

ಸುಭದ್ರಾ:– ಉಂ, ಅದಿನ್ನು ನನ್ನ ಬಿಟ್ಟು ಹೋಗೋ ಹಾಂಗs ಇಲ್ಲ. ಅಲ್ಲಾ, ನಿಮ್ಮದೇನು ಜುಲುಮೇನು ? ಇವತ್ತು ನನ್ನ ಕಡಿಂದs ಏನೂ ಮಾಡೋದಾಗೋದಿಲ್ಲ! ನೀವು ರಜಾ ಬರೆದು ಮನ್ಯಾಗ ಕೂಡ್ತೀರಲ್ಲ! ನಾವ್ಯಾಕ ಮಾಡಬಾರಧಾಂಗ ? ಇನ್ನೆಂಟು ದಿವಸ ನನ್ನ ಕಡಿಂದ ಯಾವ ಕೆಲಸಾನೂ ಆಗೋದಿಲ್ಲ !

ಗೋಪಾಳ:– ಈಗ ಬೆಂಡ್ವಾಲಿ ತಂದುಕೊಟ್ರ ?

ಗಣೇಶ:– (ಪ್ರವೇಶಿಸಿ) ಕೊಟ್ಟsಬಿಡೋ ಹೋಗಲಿ ! (ಸುಭದ್ರಾ ನಾಚಿಕೊಂಡು ಪುನಃ ಒಳಗೆ ಓಡಿಹೋಗುವಳು. ಗಣೇಶ ಒಳಗೆ ಹಣಿಕಿಕ್ಕಿ) ಇದು ನೋಡು ಗೋಪ್ಯಾ, ನಾ ಹೋದದ್ದು ತಾರು ಕೊಡಲಿಕ್ಕೆ ಅಲ್ಲ, ಈ 'ಬೆಂಡ್ವಾಲೀ ತರಲಿಕ್ಕೆ! ನಾ ನಾಲ್ಕು ಹೆಜ್ಜಿ ಹೋಗೋದರಾಗs ಆ ನಿನ್ನ ಮುತ್ತಿನವನs ಹತ್ತಿರದ ಮನೆಯಿಂದ ಹೊರಬಿದ್ದ. ಅನಾಯಾಸs ಕೆಲಸಾತು. ಅನು-

ವತ್ತು ರೂಪಾಯಿಗೇ ಬೆಂಡ್ವಾಲೀ ತಂದಬಿಟ್ಟೆ. ಈ ರೂಪಾಯಿ ನನಗ ನೀನು ಕೊಟ್ಟರ ಕೊಡು, ಬಿಟ್ಟರ ಬಿಡು! ಇವನ್ನ ನೀ ತಂದದ್ದುವಂತs ಹೇಳ್ತಿನ್ನು ಅತ್ತಿಗೀ ಮುಂದ; ತಿಳೀತಿಲ್ಲೊ! ನಾ ತಂದದ್ದುವಂದ್ರ ಅತ್ತಿಗಿ ಅವನ್ನ ಮುಟ್ಟಲಿಕ್ಕೀ ಇಲ್ಲ!

ಗೋಪಾಳ:– ಹೌದಪಾ! ನನ್ನ ಒಳ್ಳೇ ಪೇಚಿನಾಗs ಹಾಕಿದೆಲ್ಲಾ ಅಂತ! ನನ್ನ ಮಾತೇನು ನಡಧಾಂಗಾತು!

ಗಣೇಶ:– ನಿನ್ನ ಮಾತಿಗೆ ಬೆಂಕೀಹಚ್ಚಿತು! ಮಗನs, ಸಂಸಾರದಾಗ ಹೆಣ್ತಿ ಹತ್ತು ಸಾರೆ ಸೋತರ, ಗಂಡ ಒಮ್ಮೆಯಾದರೂ ಸೋಲಬೇಕಾಗ್ತದ! ನನಗ್ಗೊತ್ತು— ಅರುವತ್ತು ರೂಪಾಯಿ ಹೋಗ್ತಾವಲ್ಲಾ ಅಂತ ನಿನ್ನ ಮನಸಿಗೆ ಹತ್ಯದ! ನನಗ ನೀ ಕೊಡಬ್ಯಾಡ ಮಾರಾಯಾ! ಅತ್ತಿಗ್ಗಿ ಕೊಟ್ಟರ ನಾ ಏನೂ ಬಡವಾಗೋದಿಲ್ಲ. ಅದಕ್ಕ ಹೀಂಗ್ ಮಾಡೋಣು: ನಾ ನಿನಗ 'ಗೋಪಾಳಾ' ಅಂತ ಇವನ್ನ ಕೊಡ್ತೀನಿ; ನೀ ನಿನ್ನ ಹೆಣ್ತಿಗೆ ಕಾಣಿಕೀ ಅಂತ ಕೊಟ್ಟುಬಿಡು! ಆತ್ಯೋ! ಇನ್ನ ಇದರ ಬಗ್ಗೆ ವಿಚಾರ ಮಾಡೋದು ಬ್ಯಾಡಾ. ! ನಾ ಅತ್ತಿಗಿನ್ನ ಕರದು, ಏನು ಹೇಳಬೇಕೋ ಅದನ್ನ ಹೇಳಿ ಎಲ್ಲಾ ಸರಿಮಾಡ್ತೀನಿ ! ನೀ ಸುಮ್ಮನಿರು ! (ಬೆಂಡೋಲೆಯನ್ನು ಮೇಜಿನ ಖಾನೆಯಲ್ಲಿಟ್ಟು ಒಳಗೆ ಹೋಗಿ ಸುಭದ್ರೆಯನ್ನು ಕರೆತರುತ್ತಾನೆ.) ಅತ್ತಿಗಿ, ಇಂದು ಗೋಪ್ಯಾ ನಿನ್ನ ಸಿಟ್ಟಿಗೆಬ್ಬಿಸಬೇಕಂತs ಇದೆಲ್ಲಾ ನಾಟಕಾ ಮಾಡ್ಯಾನ ನೋಡು ! ನಿನಗ ತಿಳೀಧಾಂಗ ಹೋಗಿ, ಈಗ ಬೆಂಡ್ವಾಲಿ ತಗೊಂಡು ಬಂದಾನ ! ನಾ ಬರದಿದ್ದರ ನಿನ್ನ ಹೀಂಗs ಕಾಡ್ತಿದ್ದ ಲುಚ್ಚಾ ! ಇಗಾ (ಖಾನೆಯಿಂದ ಅವನ್ನು ತಂದು ಸುಭದ್ರೆಯ ಕೈಯಲ್ಲಿ ಕೊಡುವನು. ಅವಳು ಅದನ್ನು ತಕ್ಕೊಂಡು, ಹಸನ್ಮುಖಿಯಾಗಿ ಒಳಗೆ ಹೋಗಿಬಿಡುವಳು.)

ಗೋಪಾಳ:– ಇನ್ನು ಎಲ್ಲಾ ಸರಬರಾಯಿ ಆಗ್ತದ ನಡಿ ! (ಇಬ್ಬರೂ ನಗುತ್ತ ಒಳಗೆ ಹೋಗುವರು.)

ನೆರೆ–ಹೊರೆ

★

ಪಾತ್ರಗಳು:

ಶ್ಯಾಮಣ್ಣ:	ರಾಮಣ್ಣನ ಮನೆಯ ಬಾಡಿಗೆದಾರ
ಇಂದ್ರಾಬಾಯಿ:	ಶ್ಯಾಮಣ್ಣನ ಹೆಂಡತಿ
ರಾಮಣ್ಣ:	ಮನೆಯ ಒಡೆಯ
ಚಂದ್ರಾಬಾಯಿ:	ರಾಮಣ್ಣನ ಹೆಂಡತಿ
ವಿಠ್ಠಲ:	ಶ್ಯಾಮಣ್ಣನ ಮಗ
ಅಂಬು:	ರಾಮಣ್ಣನ ಮಗಳು
ಗೋಪಾಳರಾಯರು:–....	ಶ್ಯಾಮಣ್ಣ, ರಾಮಣ್ಣ, ಇಬ್ಬರಿಗೂ ಸ್ನೇಹಿತ

[ರಾಮಣ್ಣನ ಮನೆಯಲ್ಲಿ ಶ್ಯಾಮಣ್ಣ ಬಾಡಿಗೆಯಿರುತ್ತಾನೆ–ಇಬ್ಬರೂ ನೆರೆ ಹೊರೆಯವರು. ವಿಠ್ಠಲ ಮತ್ತು ಅಂಬು–ಇಬ್ಬರ ವಯಸ್ಸು ಸುಮಾರು ೭-೮ ವರ್ಷ. ಅವರು ಗಂಡ-ಹೆಂಡತಿ ಆಗಿ ಆಡುತ್ತಿರುತ್ತಾರೆ. ಅಂಬು ಜೋಳದ ಅರಳಿನ ಕರಿಗಡುಬು, ಬೆಲ್ಲದ ಚೂರಿನ ಶಾವಿಗೆ ಪಾಯಸ ಮಾಡಿ, ವಿಠ್ಠಲನಿಗೆ ಊಟಕ್ಕೆ ಬಡಿಸಿರುತ್ತಾಳೆ. ಅವನು ನೀರು ಕೇಳುತ್ತಾನೆ. ಅಂಬು ನೀರು ತರಲು ಬಾವಿಗೆ ಹೋಗುತ್ತಾಳೆ. ಆಗ ವಿಠ್ಠಲನು, ಅಂಬು ತನಗಾಗಿ ಇಟ್ಟುಕೊಂಡಿದ್ದನ್ನೆಲ್ಲ– ಆಕೆ ಬರುವುದರೊಳಗಾಗಿ–ತಿಂದು ಮುಗಿಸಿಬಿಡುತ್ತಾನೆ. ವಿಠ್ಠಲ ಮಾಡಿದ್ದನ್ನು ನೋಡಿ ಅಂಬುವಿಗೆ ತೀರ ಸಿಟ್ಟುಬಂದು, ಅವನನ್ನು ಪರಚುತ್ತಾಳೆ. ವಿಠ್ಠಲ ಅವಳ ಕೂದಲು ಹಿಡಿದು ಎಳೆಯುತ್ತಾನೆ. ಅಂಬು ವಿಠ್ಠಲನ ಕೈ ಕಚ್ಚುತ್ತಾಳೆ; 'ಇತ್ಯಾ' 'ಬೋಳ್ಯಾ' 'ಬಕ್ಯಾ' 'ರಂಡೆಗಂಡಾ' ಎಂದು ಬೈಯ್ಯುತ್ತಾಳೆ. ಇಬ್ಬರಿಗೂ ಬಡಿದಾಟ ಪ್ರಾರಂಭವಾಗುತ್ತದೆ. ಆಗ ವಿಠ್ಠಲನ ಮನೆಯಲ್ಲಿ ಅವನ ತಂದೆ ಶ್ಯಾಮಣ್ಣ ಪತ್ರ ಬರೆಯುತ್ತ ಕೂತಿರುತ್ತಾರೆ. ಅವರ ಹೆಂಡತಿ ಇಂದ್ರಾಬಾಯಿ, ಸ್ನಾನದ ಸಿದ್ಧತೆಯಲ್ಲಿರುತ್ತಾಳೆ. ವಿಠ್ಠಲನ ಅಳುವ ದನಿ ಕೇಳಬರುತ್ತದೆ.]

ಶ್ಯಾಮಣ್ಣ:– ವಿಠ್ಯಾನ ಅಳೋ ದನಿ ಕೇಳಿಸ್ತೇದ! ಏನಾತು ನೋಡು. ಕೇಳಿಸಿತೇನು? ಏನು? ಏನಾಗ್ತೀ ಒಳಗ? ನೋಡಬಾರದ ಸ್ವಪ್ನ!

ಇಂದ್ರಾಬಾಯಿ:– ನಾ ಈಗ ಹೊರಗ ಬರೋ ಹಾಂಗಿಲ್ಲ. ಅಡ್ಡ ಹಚಿಕೊಂಡೀನಿ! ನೀವs ಹೋಗಿ ನೋಡಿರಪ್ಪ.

ಶ್ಯಾಮಣ್ಣ:– ನೀ ಅಡ್ಡ ಹಚಿಕೊಂಡೀದಿ; ನಾ ಇಲ್ಲಿ ಒಂದು ಉದ್ದ ಪತ್ರಾ, ಬರೀಲಿಕ್ಕೆ ಕೂತೇನಿ! ಈಗ ಬಿಟ್ರ ಅಲ್ಲಿಗೇ ಉಳಿದುಬಿಡ್ತೇದ. ನೀನs ಬ್ಯಾರೇ ಹಚಿಕೊಂಡು ಹೋಗು.

ಇಂದ್ರಾ:– ನಾವು ಅಡ್ಡಾ ಉದ್ದಾ ಅಂತ ಕೂತ್ರ, ಅಲ್ಲಿ ಕೂಸಿನ ಪ್ರಾಣಾ ತಗೋತಾಳ ಆ ಸುಟ್ಟ ಹುಡಿಗಿ! ಹೋಗಬಾರದಿರ್ಯಾ? ನಿಮ್ಮ ಪತ್ರಕ್ಕ ಬೆಂಕೀಹಚ್ಚಿತು! ಅಲ್ಲಿ ಕೂಸಿನ ಪ್ರಾಣಹೋಗ್ತೇದ!

[ಅಷ್ಟರಲ್ಲಿ ವಿಟ್ಠಲ ಅಳುತ್ತ ಚೀರುತ್ತ ಬರುತ್ತಾನೆ. ಇಂದ್ರಾಬಾಯಿ ಅವನನ್ನು ಸಮಾಧಾನಮಾಡಿ, ಚೀರೆ ಉಟ್ಟುಕೊಂಡು, ನೆರೆಮನೆ ಚಂದ್ರಾಬಾಯಿಯ ಬಾಗಿಲ ಬಳಿ ನಿಂತು, ಅವಳನ್ನು ಸಮಾಧಾನ ಮಾಡುತ್ತಿರುತ್ತಾಳೆ. ಇಬ್ಬರದೂ ವಾಗ್ಯುದ್ಧ ಪ್ರಾರಂಭವಾಗುತ್ತದೆ.]

ಇಂದ್ರಾ:– ಏನ್ರೀ ನಿಮ್ಮ ಹುಡಿಗಿ! ಬ್ರಹ್ಮರಾಕ್ಷಸಿ! ಇದು ನೋಡ್ರಿ, ಹುಡುಗನ ಕೈ ರಾಮಾ-ರಕ್ತವಾಗೇದ!

ಚಂದ್ರಾಬಾಯಿ:– ಮತ್ತ ನಿಮ್ಮ ಹುಡುಗೇನು ಒಳ್ಳೆಯವನ್ರೀಪಾ? ಕೂದಲಾ ಹಿಡಿದು, ಮೊದಲ ನಿಮ್ಮ ಯಿಠ್ಯಾನs ಜಗ್ಗಿದನಂತ? ಒಮ್ಮೊಮ್ಮೆ ಆಕೀ ಪ್ರಾಣಾ ತಗೋತಾನ! ನಮ್ಮದು ಹೇಳಿ ಕೇಳಿ ಸಣ್ಣ ಹುಡಿಗಿ.... ಅದೇನು ಹೊಡದೀತು!

ಇಂದ್ರಾ:– ಸಾಕು, ಹೇಳಬ್ಯಾಡ ಬಿಡ್ರಿ! ಎಲ್ಲಾ ಸತ್ತು ದೇವರು ಅಂತ ಇದೊಂದು ಉಳದೇದ! ಅದು ಸಹ ನಿಮಗ ಸಹನ ಇಲ್ಲ. ನಮ್ಹಾಂಗs ನಿಮ್ಮವೂ ನಾಲ್ಕು ಹೋಗಿದ್ದರ........

ಚಂದ್ರಾ:– ನಿಮಗ ಹುಡುಗರು ದಕ್ಕದಿದ್ದರ ನಮ್ಮನ್ಯಾಕ ಶ್ರಾಪಸ್ತೀರಿ? ಮಂದೀ ಮಕ್ಕಳು ಸಾಯ್ಲೀ ಅಂದ್ರ, ನಿಮ್ಮ ಮಕ್ಕಳಿಗೆ ಆಯುಷ್ಯ ಬರ್ತೇದೇನು? ಇನ್ನ ಮ್ಯಾಲ, ನಮ್ಮ ಹುಡಿಗ್ಗೆ ಕೈ ಒಂದs ಹಚ್ಚಲಿ ಆ ರಂಡೇಗಂಡ; ಅವನ ಕೈ ಕಡದು ಬಂಬಿನಾಗಿಡ್ತೇನಿ!

ಇಂದ್ರಾ:– ಯಾರ ಕೈ ಕಡೀತೀರೇ? ನಿಮ್ಮ ಅಂಬೀ ಬಾಯೀನs ಸೇದಿ

ಹೋಗಲಿ! ಕೈ ಕಳಚಿಬೀಳಲಿ! ತಲಿ ಸಿಡಿದುಹೋಗಲಿ! ಮೈಯಾಗ ಸೆಟಿಬಳ್ಳನಿ ಹಾಯಲಿ!

[ಅಷ್ಟರಲ್ಲಿ ಚಂದ್ರಾಬಾಯಿಯ ಗಂಡ ರಾಮಣ್ಣ ಹೊರಗಿಂದ ಬರುತ್ತಾನೆ. ಅವನ ಕಿವಿಗೆ ಇಂದ್ರಾಬಾಯಿಯ ಮಾತು ಬೀಳುತ್ತವೆ.]

ರಾಮಣ್ಣ:- ಏನದು? ಏನು ಒದರ್ಯಾಟ?

ಚಂದ್ರಾ:--ಅಂಬು ವಿಶ್ಯಾ ಜಗಳಾಡಿಸುವಂತ. ಮಗನ ಬೆನ್ನು ಕಟ್ಟಿಕೊಂಡು ಬಡದಾಟಕ್ಕ ಬಂದಾರ. ಮತ್ತ ಮ್ಯಾಲ ನಮ್ಮ ಕೂಸಿನ್ನ ಸುಟ್ಟ ಸುಟ್ಟ ಶಾಪಿಸ್ತಾರ! ವಿಶ್ಯಾ ಕೂದಲಾ ಹರಕೊಂಡ್ರ ಕೂಸು ವಿಲಿವಿಲಿ ಒದ್ದಾಡ್ತು!

ಇಂದ್ರಾ:- ಒದ್ದಾಡಲಿಕ್ಕೆ ಅದಕ್ಕೇನು ಧಾಡಿ ಆಗೇದ! ಹುಡಿಗೇ ಅದು! ಮನಿ ಶಾರ್ನ ಹರಕೊಂಡು ತಿಂಬೋ ರಕ್ಕಸಿ! ಇನ್ನೊಮ್ಮೆ ನಮ್ಮನ್ಯಾಗ ಕಾಲೊಂದ್ರs ಇತಲಿ ಹುಚ್ಚುಮುಂಡೆ! ಎತ್ತಿ ಭಾವ್ಯಾಗ ಹಾಕ್ತೇನಿ!

ಚಂದ್ರಾ: ನಿಮ್ಮಗನ್ನs ಹಾಕ, ಒಯ್ದು! ಮುಂಚೇವು ನಾಕು ಹೋದ್ಹಾಂಗ ಇದೂ ಹೋಗಲಿ! ಹಿಂದಿನ ಜನ್ಮದಾಗ ಮಾಡಿದ್ದರ ಫಲಭೋಗ ಈಗ ನಿಷ್ಪಂತಾನ ಆಗಿ ಉಣ್ತೇರಲ್ಲ! ಸಾಕ ಗಲಿಬ್ಲೇನೋ!

ಇಂದ್ರಾ:- ನಮಗೇನು ಕಡಿಮ್ಯಾಗೇದ ಪಾಪ ಮಾಡಿ ಹುಟ್ಟಲಿಕ್ಕೆ? ನೀವs ಅಂಥಾ ಪಾಪಾ ಮಾಡಿದ್ದೀರಿ! ಅಂತs ಕೂತೀರಿ ಕಟಮೋ ಅಂತ! ನೆತ್ತಿಗಿದ್ದರ ಹೊಟ್ಟೆಗಿಲ್ಲ, ಹೊಟ್ಟೆಗಿದ್ದರ ನೆತ್ತಿಗಿಲ್ಲ!

ರಾಮಣ್ಣ:- ಯಾಕ, ನಿಮ್ಮ ಗಂಡ ಕಚೇರ್ಯಾಗ ದೊಡ್ಡ ನೌಕರೀ ಮಾಡ್ತಾನs ಅಂತ ನಮ್ಮುರಿಗೆ ದಿಮಾಕ್ ತೋರಿಸ್ತೀರೇನು? ಅಧಿಕಾರ ಇದ್ದರ ಕೈಕೆಳಗಿನ ಗುಮಾಸ್ತರ ಮ್ಯಾಲ ಜಬ್ಬು ತೋರಿಸ್ರಿ! ನಮಗೇನು ಮಾಡ್ತೀರಿ! ನಾಲ್ಗೀ ಬಿಗಿಹಿಡಿದು ಮಾತಾಡ್ರಿ. ಮನೀ ಬಾಡಿಗಿ ಕೊಡಲಿಕ್ಕೆ ಅಳ್ತೀರಿ. ಮೂರು ತಿಂಗಳ ಬಾಡಿಗಿ ನಿಂತsದ. ನಾಚಿಗಿ ಬರೂದಿಲ್ಲ? ನಾಳೆ ಹೊರಗ ಹಾಕೇನು! ನಿಮ್ಮ ಜಬ್ಬು ನಮ್ಮುಂದ ತೋರಿಸಬ್ಯಾಡ್ರಿ!

[ಈ ಮಾತು ಕೇಳಿ ಶ್ಯಾಮಣ್ಣ ರೇಗಿಕೊಂಡೇ ಹೊರಗೆ ಬರುತ್ತಾನೆ]

ಶ್ಯಾಮಣ್ಣ:- ಯಾಕ್ರೀ? ಯಾರ ನಾಚಿಗೀ ತೆಗೀತೀರಿ? ಮನೀ ಮಾಲಕರು ಅಂತ ಮಾತಾಡ್ತೀರೇನ? ಐದು ರೂಪಾಯಿ ಬಾಡಿಗೀ ಮನೀಗೆ ಇಷ್ಟ

ತ್ತೈದು ರೂಪಾಯಿ ಬಾಡಿಗಿ ತಗೋತೀರಿ! ಸುಣ್ಣಾ ಹಚ್ಚಿಕೊಟ್ಟಿಲ್ಲಾ ಅಂತ ಬಾಡಿಗಿ ಹಿಡಿದಿಟ್ಟೇಸಿ! ಹಣೆಗೆ ತೂತು ಬೀಳೋ ಹಾಂಗ ಒಗದೇನು! ಬಾಯಿ ಬಿಗಿಹಿಡಿದು ಮಾತಾಡ್ರಿ!

ರಾಮಣ್ಣ:– ತೂತು ಬಿದ್ರೂ ಅಡ್ಡಿಯಿಲ್ಲ. ಒಗದರs ಒಗೀರಿ ನೋಡೋಣು! ನಿಮ್ಮ ಕೈಯಾಗೇನದ! ಹೆಣ್ತೀ ಕೈಯಾಗಿನ ಗುಲಾಮ!

ಶ್ಯಾಮಣ್ಣ:– ಏ, ಬಾಯಿ ಬಿಗಿಹಿಡಿದು ಮಾತಾಡ್ರೀ ಅಂದೆ! ಮಗ್ಗಲಾನs ಮನಿ ಕರದೇನು, ಹೆಚ್ಚು ಮಾತಾಡಿದಿರಿ ಅಂದರ!

ರಾಮಣ್ಣ:– ಬಡಕ್ಕ ಪರವಾಸಿಗೀ ತಗೊಂಡೀರೇನು ಮನಿಯುವರದು? :

ಇಂದ್ರಾ:– ಸವಾಗ್ಯಾಕಂತೀರಿ? ನಿಮ್ಮ ಹೆಣ್ತೀನ್ನ ಕೈಯಾಗಿಟ್ಟುಕೊಳ್ರಿ, ಸಾಕು! ಊರ ಕಳ್ಳಿ! ಒಣಹಾಕಿದ ಕೂಸಿನ ಅಂಗೀ ಸಹ ಬಿಡೂದಿಲ್ಲ! ಬಟ್ಲಾ, ಚಮಚೆ ಅಂತೂ ಎಷ್ಟು ನಿಮ್ಮ ಮನೀ ಸೇರ್ಯಾವೋ ಯಾರು ಬಲ್ಲರು!

ಚಂದ್ರಾ:- ನಾ ಕಳ್ಳಿ? ಕಡಾ ಅಂತ ಉಳ್ಳಾಗಡ್ಡೀ ಇಸುಕೊಂಡುಹೋದದ್ದು ಇನ್ನೂ ಆದರೂ ತಂದುಕೊಟ್ಟೀರೇನು? ಗಂಡಗ ತಿಳೀಧಾಂಗ ಅಕ್ಕೀ–ಬಾಳೀ ಮಾರಿಕೋತೀರಲ್ಲ! ಭಂಗಾರದ ಕಲಾಯಿ ಮಾಡಿಸಿದ ಬಿಲ್ವಾರ ಹಾಕ್ಕೊಂಡು ಶ್ರೀಮಂತಿಕೀ ಜಂಭಾ ತೋರಿಸಬ್ಯಾಡ್ರಿ! ನಿಮ್ಹಾಂಗ ನಾನು ಗಂಡನ ಕಣ್ಣುತಪ್ಪಿಸಿ ತವರು ಮನೀ ತುಂಬೂದಿಲ್ಲ! ಇಷ್ಟೀ ಗಂಡನ ಹೆಣ್ತಿ ಆಗಿ ಬಿಟ್ ನೋಡ್ರಿ! ಹಾಂಗ ಹರೇದ ಗಂಡ ಸಿಕ್ಕಿದ್ದರ ಎಷ್ಟು ಉರೀತಿದ್ರ್ಯೋ ಏನೊ!

ಶ್ಯಾಮಣ್ಣ:– ನನ್ನ ಮುಪ್ಪು–ಹರೆ ತಗೊಂಡು ನಿಮಗೇನು ಮಾಡೋದದ! ನಿಮ್ಮ ಗಂಡ ಎಷ್ಟು ಹರೇದವ ಇದ್ದಾನ? ತಲೀ ಅಂಬೋದು ಜುಬ್ರ ತೆಗದ ತೆಂಗಿನ ಚಿಪ್ಪಾಗೇದ! ಉರ್ಲುಹಾಕ್ಕೋಬೇಕಂದ್ರೂ ಒಂದು ಕೂದಲೆಳಿ ಇಲ್ಲ ತಲೀಮ್ಯಾಲ!

ರಾಮಣ್ಣ:– ನನ್ನ ಮ್ಯಾಲ - ಹಲ್ಲುಕಡಿಯೋ ಗಂಡುಸು, ನಿಮ್ಮ ಬಾಯಾಗs ಖರೇ ಹಲ್ಲವಯೇನು? ಹಾಕಿಸಿದ ಹಲ್ಲು ಸಹಿತ ಬೀಳೋ ದಿವಸಾ ಗ್ಯಾವ! ಇನ್ನೊಂದು ನಾಕು ದಿವಸ ಇರಲಿ ಬಾಯಾಗ! ನನ್ನ ತಡವಿ ಈಗs ಉದುರಿಸಿಕೋಬ್ಯಾಡ್ರಿ! ಮನಿ ಕೊಟ್ಟದ್ದಕ್ಕ ಉಪಕಾರ ತೀರಿಸ್ತೀರೇನು?

ಶ್ಯಾಮಣ್ಣ:– ನೀವೇನು ಧರ್ಮಕ್ಕ ಕೊಟ್ಟಿಲ್ಲ. ಮನೀನs ಇದು! ಬಾವಾಜಿಗಳ ಧೂಮುಸಾಲಿ ಸಹಿತ ಇದಕ್ಕೂ ಚಲೊ ಇರ್ತದ!

ರಾಮಣ್ಣ :– ಅಂಥಾದರಾಗ ಬಂದು ಇರsವ್ರು ನೀವೆಂಥಾ ಬಾವಾಗಳು! ನಮ್ಮ ಧರ್ಮಸಾಲ್ಯಾಗ ಇರೋ ಕಾರಣಿಲ್ಲ. ನಾಳೇ ಮನೀ ಬಿಟ್ಟು ಎರಡನೇ ಕೆಲಸಾ ಮಾಡ್ರಿ. ಹುಡುಗಾಟಿಕಿ ಅಲ್ಲ.

ಶ್ಯಾಮಣ್ಣ :– ಬಿಡದಿದ್ದರ ಏನು ಮಾಡವ್ರು ನೀವು?

ರಾಮಣ್ಣ :– ಫಿರ್ಯಾದೀ ಮಾಡಿ ಕೋರ್ಟಿಗೆಳದೇನು!

ಶ್ಯಾಮಣ್ಣ :– ಅಲsಲಲಲಲ! ಕೋರ್ಟಿಗೆಳೆಯೋsವ್ರ ಮಾರೀ ನೋಡ್ರಿ! ಕಾಯಿದೆ ನಿಮಗs ಗೊತ್ತದಯೇನು? ಇತ್ಲಾಗಿನವರೇನು ಹಮಾಲೀ ಮಾಡsವ್ರೂ ಅಂತ ತಿಳಿದೀರೇನು?

ರಾಮಣ್ಣ :– ಮತ್ತ ಮಾಡ್ತೀರಲ್ಲ ಹೇಣ್ತೀ ಹಮಾಲೀನ!

ಶ್ಯಾಮಣ್ಣ :– ನಾ ಹೇಣ್ತೀದಾದರೂ ಮಾಡ್ತೀನಿ ! ನೀವು ? ಚಪ್ಪಲೀ ಮಾರೋವ್ನ ಬೂಟು ಒರಿಸ್ತೀರಲ್ಲ !

[ಅಷ್ಟರಲ್ಲಿ ಇಬ್ಬರಿಗೂ ಸ್ನೇಹಿತರಾದ ಗೋಪಾಳರಾಯರು ಬರುತ್ತಾರೆ.]

ಗೋಪಾಳರಾಯ:– ಇದೇನ್ರಪಾ ಇದು ? ಚಪ್ಪಲೀ ಬೂಟಿನ ತನಕಾ ಯಾಕ ಬಂದsದ ಪ್ರಸಂಗ ? ಅಂ, ಏನ್ನಡದsದ, ಏನು ?

ಶ್ಯಾಮಣ್ಣ :– ಇಲ್ರಿ, ಇತ್ತೀಚೆಗೆ ಮನೀ ಮಾಲಕರಿಗೆ ಸೊಕ್ಕು ಬಹಳ ಬಂದsದ.

ರಾಮಣ್ಣ :– ಸರಕಾರದವರ ಪುಸಲಕ್ತಿನಿಂದ ಬಾಡಿಗೆಯವರೂ ಬಹಾಳ ತಲೀ-ಗೇರ್ಯಾರ !

ಗೋಪಾಳ:– ಏನಾಗೇದೇನೀಗ ? ಬರೇ ಬಾಡಿಗೀ ಬಡೆದಾಟ ಹೌದಲ್ಲೊ ?

ಶ್ಯಾಮಣ್ಣ :– ಬಾಡಿಗೀ ಬಡೆದಾಟ ಯಾಕಾದೀತು ? ಖರೇ ಬಡೆದಾಟsನs!

ಗೋಪಾಳ:– ಆದದ್ದೇನು ಹೇಳ್ರಿಲಾ !

ರಾಮಣ್ಣ :– ನಮ್ಮ ಅಂಬು, ಅವರ ವಿಟ್ಠಲ, ಆಟದಾಗ ಬಡೆದಾಡಿದರು.

ಚಂದ್ರಾ:– ಹುಡುಗರು ಬಡೆದಾಡಿದರ ಇಂದ್ರಾಬಾಯೇರು ಮಗನ ಬೆನ್ನು ಕಟ್ಟಿಕೊಂಡು ಬಡೆದಾಟಕ್ಕ ಯಾಕ ಬರಬೇಕು ?

ಗೋಪಾಳ:– ತಿಳಿಧಾಂಗಾತು ! ಮಕ್ಕಳ ಜಗಳಾ ನೀವು ಮೈಮ್ಯಾಲ ಹಾಕ್ಕೊಂಡ್ರಿ ; ನಿಮ್ಮದನ್ನs ನಿಮ್ಮ ಗಂಡಂದ್ರು ಎತ್ತಿದರು. ಇದು ಬಾಡಿಗೀ ಬಡೆದಾಟsನs ಖರೆ ! ನಾವೂ ಬೀಗಬೀಗರೂ ಈಗ ಲಗ್ಗಿ ಲಗ್ಗಿ ಜಗಳಾಡಿ ಬಂದಿವಿ. ಮದಿವಿಯೊಳಗಿನ ಬಡೆದಾಟ ಅಷ್ಟs ಅದು !

ಈಗ ಎಲ್ಲಾರಿಗೂ ಊಟಕ್ಕೆರಿದೀನಿ. ಹಾಂಗs ನಿಮಗೂ ಕರೀಲಿಕ್ಕೆ ಬಂದೀನಿ! ಹುಡುಗರೆಲ್ಲ್ಯವ? ಅಲ್ಲಾ, ಅದು ನೋಡ್ರಿ— ನೀವು ಇಲ್ಲಿ ಬಡೆದಾಡ್ತೀರಿ, ನಿಮ್ಮ ವಿಠ್ಠಲ ಅಲ್ಲಿ ಭಗರೀ ಆಡಿಸ್ತಾನ, ಅಂಬು ಅದನ್ನೆತ್ತಿ ಕೊಡ್ತಾಳ !

[ಯಾರಿಗೂ ಮುಂದೆ ಮಾತಾಡಲು ನಾಚಿಕೆಯೆನಿಸಿ, ಗೋಪಾಳರಾಯರನ್ನು ಬರಮಾಡಿಕೊಂಡು, ತಮ್ಮ ತಮ್ಮ ಮನೆಯೊಳಗೆ ಹೋಗುವರು.]

ಅಷ್ಟ ವರ್ಷಾ ಭವೇತ್ ಕನ್ಯಾ !

★

ಪಾತ್ರಗಳು :

ನರಸಿಂಗರಾಯ	....	....	ಗಂಡ	ವಯಸ್ಸು ೪೫
ಉಮಾಬಾಯಿ	....	....	ಹೆಂಡತಿ	,, ೩೮
ವಿಮಲಾ	....	....	೧ನೆಯ ಮಗಳು	,, ೨೨
ಅಮಲಾ	....	....	೨ ,, ,,	,, ೨೦
ಕಮಲಾ	....	....	೩ ,, ,,	,, ೧೮
ನಿರ್ಮಲಾ	....	....	೪ ,, ,,	,, ೧೬
ಕ್ಷಮಾಬಾಯಿ	....	....	ಉಮಾಬಾಯಿಯ ಗೆಳತಿ	

ಡಾಕ್ಟರು, ಡಾಕ್ಟರ ಹೆಂಡತಿ — ಲೇಡಿ ಡಾಕ್ಟರು, ಆಳು.

ಕಾಲ—ಇಂದಿನದು

[ನರಸಿಂಗರಾಯನ ಮನೆಯ ಪಡಸಾಲೆ. ಸಾಮಾನ್ಯ ಮಧ್ಯಮ ತರಗತಿಯ ಕುಟುಂಬದ ಮನೆಯಲ್ಲಿ ಕಾಣಬರುವ ಕೂಡುವ ವ್ಯವಸ್ಥೆ. ಒಂದು ಜಮಖಾನೆಯ ಮೇಲೆ ಉಮಾಬಾಯಿ ಕುಳಿತು ತನ್ನ ಗೆಳತಿಯಾದ ಕ್ಷಮಾಬಾಯಿಯೊಡನೆ ಮಾತನಾಡುತ್ತಿದ್ದಾಳೆ. ಹೊತ್ತು ಸುಮಾರು ರಾತ್ರಿ ೮ ಗಂಟೆ. ಮನೆಯಲ್ಲಿ ಉಳಿದವರಾರೂ ಇಲ್ಲ. ಎಲ್ಲರೂ ಹೊರಗೆ ಹೋಗಿದ್ದಾರೆ.]

ಕ್ಷಮಾಬಾಯಿ:— ಆ ನರಹರ್‍ರಾಯರ ಮಗಳು ಪದ್ಮಾ....

ಉಮಾಬಾಯಿ:— ಹುಂ, ಹೌದು !

ಕ್ಷಮಾ:— ಲಗ್ನಾಯ್ತಂತ ನೋಡ್ರೆವಾ.

ಉಮಾ:— ಅಯ್ ಸುಡ್ಲಿ ! ಅದನ್ಯಾರು ಮಾಡಿಕೊಂಡಿದ್ದಾರ್ರೆವಾ ? ಎಲ್ಲಿ, ತಂತ ಲಗ್ನ?

ಕ್ಷಮಾ:– ಮೊದಲಗಟ್ಟೆಯೊಳಗ ಮುಗಿಸಿದರಂತ! ಯಾವುದೋ ಒಂದು ಗಂಡು ಹಿಡಿದು ತಂದ್ರು, ಕೊರಳಿಗೆ ಕಟ್ಟಿದರು. ಈ ಲಷ್ಕರ್ ಖಾತೆ, ಈ ವಿಮಾನ ಖಾತೇದ ಹುಡುಗರಿಗೆ, ಎಂಥಾ ಕನ್ಯಾ ಇದ್ದರೂ ನಡೀತದ– ಹುಡುಗ ಯಾತರದು? ಮೊದಲನೆ ಮದಿವೀ ಅಂತ ಹುಡುಗಾ ಅಂಬೋದು!

ಉಮಾ:– ಹುಡಿಗ್ಗೆರ ಏನು? ಮೂವತ್ತು ವರ್ಷಕ್ಕ ಮುಟ್ಟಿತ್ರೆವಾ ವಯಸ್ಸು! (ದನಿ ತಗ್ಗಿಸಿ) ನಮ್ಮವರು .... ಆಡಿಕೋಬಾರದು; ಎಷ್ಟು ಸಾರೆ ಕೆಡಿಸಿಕೊಂಬೋದು? ನಮಗ ತಿಳಿಧಾಂಗs .... ನಾಕು ಸಾರೇನ್ರೆವಾ! ಊರೆಲ್ಲಾ ಬೊಬ್ಬಿಡಿಸಿಹೋತು. ನಮಗ ಅಪ್ತರೂ ಅಂತ ಹೇಳಿಕೊಳ್ಳಿಕ್ಕೆ ಸಹಿತ ನಾಚಿಕೆ ಬರ್ತದ. ಅಲ್ಲಾ, ಗಂಡುಸರು– ಹೊರಗ ಹೊರಗಿರ್ತಾರ. ಮನ್ಯಾಗ ಆ ತಾಯಿಯಂಬೊ ಆಕಿ– ಹುಡುಗರ ಮ್ಯಾಲೆ ಲಕ್ಷ್ಯ ಇಡದಿದ್ದರ– ಏನು ಸುಡಬೇಕು?

ಕ್ಷಮಾ:– ಆಕ್ಯಾದ್ರೂ ಎಷ್ಟಂತ ನೋಡ್ತಿರ್ತಾಳ? ಹೆಣ್ಣು ಹುಡುಗರs ಮೊದಲು ತಾಳಬಿಟ್ಟಾವ! ನಮ್ಮ ಸೋದರಮಾವನ ಮಗಳು, ತಾಯಿ ತಂದೆಗೆ ಪತ್ತೇ ಹತ್ತದ್ಹಾಂಗ–ಯಾವಂದೋ ಕೈಹಿಡಕೊಂಡು ಹೋತು! ಅವರ ಮನ್ಯಾಗ ಶಿಸ್ತಿಗೇನು ಕಡಿಮ್ಯದ? ಊರಿಗೆಲ್ಲಾ ಉಪದೇಶ ಹೇಳ್ತಾರ ನಮ್ಮ ಮಾವ; ತಮ್ಮನ್ಯಾಗ ನಡದದ್ದs ತಮಗ ಗೊತ್ತಿದ್ದಿಲ್ಲ.

ಉಮಾ:– ಎಲ್ಲಾ ಹುಡುಗರೂ ಹಾಂಗೆಲ್ಲಿರ್ತಾವ ಬಿಡ್ರಿ! ಆದ್ರೂ ವಯಸ್ಸಿಗೆ ಬಂದ ಮ್ಯಾಲ ಅವರ್ನ ಕಣ್ಣಾಗ ಎಣ್ಣೀ ಹಾಕ್ಕೊಂಡು ಜಪ್ಪಿಸಬೇಕಾಗ್ತದ. ಅಂತsನ್ರೆವಾ ಈಗ ನಾಕು ವರ್ಷಾತು....ಹುಡುಗರ್ನ ಬಿಟ್ಟು ನಾ ಅತ್ತಿತ್ತ ಕದಲ್ಲಿಲ್ಲ ನೋಡ್ರಿ!

ಕ್ಷಮಾ:– ನಿಮ್ಮ ಶಿಸ್ತು ಯಾರಿಗೂ ಬರೋದಿಲ್ಲ. ಅಂತs ಹುಡುಗರು ಭಂಗಾರದ್ಹಾಂಗವ! ಅದರಾಗ ನಿಮ್ಮ ಹಿರೇ ಹುಡಿಗಿ, ಈ ಕಾಲದಾಗ ತಪ್ಪಿ ಹುಟ್ಟೇದ. ಅಲ್ಲಾ, ಇಷ್ಟು ವಿದ್ಯಾ ಕಲ್ತsದ; ಬಿ. ಎ. ಅಂದ್ರ ಸಾಮಾನ್ಯ ಓದs? ಆದರ ಎಷ್ಟು ಸಾದಾ ಭೋಳ್ಯಾ ಹುಡಿಗಿ! ಗಂಡೊಂದು ಚಲೋ ಸಿಗಬೇಕ್ರೆವಾ ಆಕಿ ಪುಣ್ಯಾದಿಂದ! ಪಾಪ! ಎಷ್ಟು ಹುಡುಕ್ತೀರಿ! ಎಲ್ಲಿ ಕೂತಾನೋ ಆ ಗಂಡ ಅಂಬಾಂವಾ?

ಉಮಾ:– ಈಗ ಎರಡು ಮೂರು ತಿಂಗಳಾತು; ವಿಮಲಾ ಅತೀ ಮನಸಿಗೆ

ಹೆಚ್ಚಿಕೊಂಡು ಬಿಟ್ಟಾಳ. ಈಗ ಬರೋ ತುಳಸೀ ಲಗ್ನಕ್ಕ ಇಪ್ಪತ್ತೆರಡು ವರ್ಷ ತುಂಬ್ತಾವರೆವ್ವಾ! ಎಷ್ಟು ದಿವಸ ಜಪ್ಪೋ ಅಂತ ಕೂಡಬೇಕು ? ಹರೇದ ಹುಡಿಗಿ; ಕಲಿಯೊ ಉಬ್ಬು ಇರೋ ತನಕಾ ಕಲತ್ಲು. ಕಲಿಯೋದು ಮುಗೀತು. ಈಗ ವರ್ಷಾತು ಮದಿವೀ ಮಾಡಬೇಕೂ ಅಂತೀವಿ. ತಕ್ಕ ವರಾನs ಸಿಗವೊಲ್ಲವು. ಕಲ್ತ ಕನ್ಯಾ ಬೇಕು ಅಂತಾರ ಅಂತ ಕಲಿಸಿದ್ರ ಈಗ 'ಕಲ್ತ ಕನ್ಯಾ ಬ್ಯಾಡಾ' ಅಂತ ಕೂತಾರ್ರೆವಾ ಯಾರ್ನ ಕೇಳಿದರೂ! ಇವರು ಕೇಳಿದ ನಮೂನೀ ಹೆಣ್ಣು ಒದಗಿಸಲಿಕ್ಕೆ ಹೆಣ್ಣೇನು ವರ್ಕ್‌ಶಾಪಿನೊಳಗ ತಯಾರಾಗ್ತಾವs? ಅದರಾಗ ಛಂದನ್ನ ಹೆಣ್ಣೂs ಬೇಕು, ಕೆಂಪು ಬಣ್ಣs ಬೇಕು, ಕಮಳದ್ಹಾಂಗ ಕಣ್ಣs ಬೇಕು, ನಡಾ ಸಣ್ಣs ಬೇಕು! ಮೊನ್ನೆ ನಮ್ಮ ಆಪ್ತರ ಪೈಕೀನs ವರಾ ಇತ್ತು ಅಂತ ಕೇಳಿದ್ರ—ಆ ಹುಡುಗ ಈ ಯಾದೀ ಕಳಿಸಿಕೊಟ್ಟಾನ್ರೆವಾ! ಏನ್ ಸಾಯಬೇಕು, ಹೇಳ್ರಿ!

ಕ್ಷಮಾ:– ರೂಪೇನು ಕಡಿಪೂರ್ಯೆಸೋ ಮಾತ? ಹಾಂಗ ನಿಮ್ಮ ವಿಮಲಾನಕಿಂತ ಅಮಲಾ, ಕಮಲಾ ಚಲೋ ಇದ್ದಾರ– ಕಣ್ಣು ಮೂಗಿಲೆ. ನಿಮ್ಮ ಕಡೀ ಹುಡಿಗಿ .... ಏನಾಕೀ ಹೆಸರು ?

ಉಮಾ:– ನಿರ್ಮಲಾ.

ಕ್ಷಮಾ:– ಹುಂ, ಆಕೀನೂ ಸಾಧಾರಣಿದ್ದಾಳ. ಆದರ ಕುರೂಪೀ ಅಂತ ಯಾರಿಗೂ ಹೆಸರಿಡೋ ಹಾಂಗಿಲ್ಲ ಬಿಡ್ರಿ! ಗುಣಾ ಅಂತೂ ನಿಮ್ಮ ಗುಣಾನs ಎತ್ತ್ಯಾವ .... ಎಲ್ಲಾ ಹುಡುಗರು !

ಉಮಾ:– ಎಲ್ಲಾ ಚಲೋ ಅದರೆವಾ. ಎಲ್ಲಾರ ಲಗ್ನೊಂದಾಗಿ ತಮ್ಮ ತಮ್ಮ ಗಂಡಂದಿರ ಜೋಡಿ ಸುಸೂತ್ರ ಸಂಸಾರಕ್ಕ ಹತ್ತಿದರೂ ಅಂದ್ರ ನಾವು <u>ಪುರಂಜಳ</u> ಆದಿವಿ !

ಕ್ಷಮಾ:– ಎಲ್ಲಾರೂ ಮದಿವಿಗಾಗ್ಯಾರ ....

ಉಮಾ:– ಆಗದs ಏನು ? ಕಡೀ ಹುಡಿಗ್ಗೇ ಈಗ ೧೬ ವರ್ಷ ! ಎರಡೆರಡು ವರ್ಷದ ಅಂತರ.

ಕ್ಷಮಾ:– ನಾಲ್ಕೂ ಲಗ್ನಾ ಒಮ್ಮೆಲೆ ಒಂದs ಹಂದರದಾಗ ಮಾಡಿಬಿಡ್ರಿ !

ಉಮಾ:– ಏನ್ ಮಾಡ್ತೀವ್ರೆವಾ? ಒಂದಕ್ಕs ವರಾ ಸಿಗವೊಲ್ಲದು. ಹಿರೇ ಮಗಳದಾಗದ ಹೊರ್ತು ಉಳಿದವರದ್ಹ್ಯಾಂಗ ಮಾಡ್ತೀರಿ? ಹಾಂಗ ನೋಡಿದ್ರ ಕಡೀ ಹುಡಿಗಿ 'ಕಲಿಯೋದು ಒಲ್ಲೆ, ಲಗ್ನಾ ಮಾಡ್ರಿ' ಅಂತ

ಕೊತsದ! ಆದರ ವ್ಯಾಲಿನ ಹುಡಿಗಿ ಸಿನೆಮಾದಾಗ ಹೋಗ್ತಿನೀ ಅಂತsದ!

ಕ್ಷವಮಾ:– ಯಾರು ಕಮಲಾನs ?

ಉವಮಾ:– ಹುಂ.

ಕ್ಷವಮಾ:– ಮತ್ತ ಅಮಲಾ ?

ಉವಮಾ:– ಆಕಿ ಮದೀವಿನs ಒಲ್ಲೆ ಅಂತಾಳ! ಹುಡುಗರು ಏನಾರೆ ಅಂತಾವ ಅಂತ ನಾವೆಲ್ಲಿ ಬಿಟ್ಟುಕೊಡ್ಲಿಕ್ಕೆ ಆಗ್ತsದ? ಮದಿವ್ಯಾಗೋ ತನಕಾ ಹೀಂಗs ಬಡಬಡಿಸ್ತಿರ್ತಾವ! ಅಂತೂ ಒಂದು ದೊಡ್ಡ ಗುಡ್ಡಾನs ಹೊತ್ತು ನಿಂತ್ಹಾಂಗ ಆಗೇದ! ಎಂದು ಭಾರಾ ಇಳಿಸ್ತಾನೋ ದೇವರು?

ಕ್ಷವಮಾ:– ಬಿಡ್ರಿ, ಇಷ್ಟ್ಯಾಕ ಚಿಂತೀ ಹಚ್ಚಿಕೊಂಡೀರಿ?

ಉವಮಾ:– ಎಲ್ಲಾ ನಾನs ಮಾಡಬೇಕಾಗೇದರೆವ್ವಾ !

ಕ್ಷವಮಾ:– ಯಾಕ? ಅವರಿಗೆ ಹಚ್ರೀಲಾ! ವರಾ ಹುಡುಕಿ ತರೋ ಕೆಲಸ ನಿಮ್ಮಿಂದ ಹ್ಯಾಂಗಾದೀತು?

ಉವಮಾ:– ಈಗ ಎರಡು ವರ್ಷಾತು ಅವರ ಜಿನ್ನತ್ತಿ—ಯಾವ್ರುದೂ ತಲ್ಯಾಗ ಹಾಕ್ಕೊಂಬೊ ಹಾಂಗs ಇಲ್ಲ. ಮುಂಜಾನೆ ಸಂಜಿ ಆ ಕ್ಲಬ್ಬೊಂದು! ಹಗಲೆಲ್ಲಾ ಅಲ್ಲೀ ಸಾಯ್‌ತಿರ್ತಾರ! ಮಕ್ಕಳೂ ಮನೀ ಅಂತ ನಾವು ಸಾಯೋದು; ಕಚೇರಿ, ಕ್ಲಬ್ಬು ಅಂತ ಅವರು ಸಾಯೋದು! ನಮಗಿದು ಬಿಡೋ ಹಾಂಗಿಲ್ಲ, ಅವರಿಗದು ಬಿಡೋ ಹಾಂಗಿಲ್ಲ!

ಕ್ಷವಮಾ:– ನಿಮ್ಮ ಹೆಣ್ಣ ಹುಡುಗರಿಗೇ ಹಚ್ಚಿಬಿಡ್ರಿ—ಗಂಡಂದಿರ್ನ ಹುಡಿಕ್ಕೊಂಡು ಬರ್ರೀ ಅಂತ! ಈ ಕಾಲದಾಗ ಇದs ಭಾಳ ನಡದsದ!

ಉವಮಾ:– ಅಯ್ಯಯ್ಯ! ನಮ್ಮ ಹುಡುಗರದು ಬರೇ ಬಾಯಿಷ್ಟs ಜೋರು! ಅದೂ ಗಂಡುಸರಿಲ್ಲದಾಗ! ಯಾರಾರೆ ಅರಿಯದ ಗಂಡುಸರು ಬಂದರೂ ಅಂದ್ರ, ನಾಚಿ ನೀರಾಗ್ತಾವ! ಉಳಿದವರದು ಹ್ಯಾಂಗೂ ಆದೀತು, ವರ್ಷಾರು ತಿಂಗಳು ಮುಂದೂಡಲಿಕ್ಕೂ ಬಂದೀತು. ಆದರ ವಿಮಲಾಂದs ಹ್ಯಾಂಗೊಮ್ಮೆ ಆದೀತೋ ಅಂತ ಹತ್ತೇದ. ಹುಡಿಗೀನೂ ಬಹಾಳ ಅಂದ್ರ ಭಾಳ ಮನಸಿಗೆ ಹಚ್ಚಿಕೊಂಡsದ. ಒಂದಿವಸ ನೆಟ್ಟಗಿದ್ರ, ಇನ್ನೊಂದಿವಸ ನೆಟ್ಟಗಿರೋದಿಲ್ಲ. ಯಾವಾಗಲೂ ಮೋಲೀಹಿಡಿದು ಕೂತುಬಿಡ್ತsದ. ಇವತ್ತs ಹ್ಯಾಗೊ ಹೊರಗ ಹೋಗ್ಯಾಳ– ಅದೂ ಅಮಲಾ ಜುಲುಮಿಲೇ ಸಿನೇಮಾಕ್ಕ ಎಳಕೊಂಡು ಹೋಗ್ಯಾಳs ಅಂತ ಹೋಗೇದ ಹುಡುಗಿ!

ಕ್ಷಮಾ:— ಮತ್ತ ಕಮಲಾ–ನಿರ್ಮಲಾ ಎಲ್ಲಿ ಹೋಗ್ಯಾರ ಕಾಣೂದಿಲ್ಲ?

ಉಮಾ:— ಯಾವುದೋ ಸಾಲೀ-ಫಂಡಿಗೆ ನಾಟಕಾ ಮಾಡ್ತಾರಂತ್ರೆಮಾ! ಇವ ರಿಗೆ ಪಾರ್ಟ್ ಕೊಟ್ಟಾರ! ಗಂಡುಹುಡುಗರೊಳಗ ಬ್ಯಾಡಾ ಅಂದ್ರ ಕೇಳ ಲಿಲ್ಲ. ಮಾಸ್ತರ ಜುಲುಮಿಗೆ ಹುಂ ಕೊಡಬೇಕಾತು. ದಿನಾ ತಾಲೀಮಿಗೆ ಹೋಗ್ತಾರ....ಯಾರಾರೇ ಅವರ್‍ನ ಕಳಿಸಲಿಕ್ಕೆ ಬರ್‍ತಾರ ಅನ್ರಿ!

ಕ್ಷಮಾ:- ನಡೀಲಿ, ನಡೀಲಿ. (ನೆನಸಿಕೊಂಡು)ಎಂಟು ಹೊಡದು ಹೋಗಿದ್ದೀತು. ಹೋಗೋಣ್ರೆಮಾ ಮನೀಗೆ. ದೂರದ ದಾರಿ. ಅವರೂ ಬರೋ ಹೊತ್ತಾತು.

ಉಮಾ:— ಹೋಗ್ತೀರ್‍ಯಾ? ದೂರಾದರೇನಾತು? ಯಾವಾಗಾರೆ ಬರ್‍ರಿ ಕ್ಷಮಾ ಬಾಯಿ! ಭಾಳ ದಿವಸಾಗಿತ್ತು ಭೆಟ್ಟಿಯಾಗದ. ಬಂದ್ರಿ, ಸಂತೋಷಾತು.

ಕ್ಷಮಾ:— ಅದರಾಗೇನು! ನಾ ಬರ್‍ತೀನಿ ಹಾಂಗಾರ!

ಉಮಾ:— ನಿಂದ್ರಿ, ಕುಂಕುಮಾ ಹಚ್ತೇನಿ!

[ಕ್ಷಮಾಬಾಯಿ ಹೊರಡಲು ಏಳುವಳು. ಉಮಾಬಾಯಿ ಕುಂಕುಮದ ಭರಣಿ ತಂದು ಕ್ಷಮಾಬಾಯಿಗೆ ಕುಂಕುಮ ಹಚ್ಚುವಳು, ತಾನೂ ಹಚ್ಚಿ ಕೊಳ್ಳುವಳು. ಕ್ಷಮಾಬಾಯಿ ಹೊರಬೀಳುವಳು. ಉಮಾಬಾಯಿ ಒಳಗೆ ಹೋಗುವಳು. ಕಮಲಾ ನಿರ್ಮಲಾ—ಇಬ್ಬರೂ — ಕೈಯಲ್ಲಿ ಒಂದೊಂದು ಸೈಕಲ್ ಹಿಡಿದುಕೊಂಡು ಒಳಗೆ ಬರುವರು. ಹೊರಗೆ ಸೈಕಲ್ ಗಂಟೆಯ ಸಪ್ಪಳವಾಗುವುದು. ಕಮಲಾ ಸನ್ನೆಯಿಂದ ಹೊರಗೆ ನಿಂತವರಿಗೆ ಹೋಗಲು ಸೂಚಿಸುವಳು. ಅವರು ಹೋಗುವುದಿಲ್ಲ. ಸಿಳ್ಳುಹಾಕುವ ದನಿ ಕೇಳಬರುತ್ತದೆ. ಕಮಲಾ ಸಿಟ್ಟಿನ ಆವಿರ್ಭಾವ ತಂದು, ಹೋಗಲು ಪುನಃ ಕೈಯಿಂದ ಸೂಚಿಸುವಳು. ಆದರೂ ಅವರು ಹೋಗುವುದಿಲ್ಲ. ಕೊನೆಗೆ ಬಾಗಿಲು ಇಕ್ಕಬೇಕೆನ್ನುವ ಹವಣಿಕೆಯಲ್ಲಿರುವಾಗ ಉಮಾಬಾಯಿ ಹಿಂದೆ ಬಂದು ನಿಲ್ಲುವಳು.]

ಉಮಾ:— ಬಾಗಲಾ ಯಾಕ ಮುಂದಕ್ಕ ಮಾಡ್ತಿಯೆ? ಏನೋ ಕೈಸನ್ನಿ–ಕಣ್ ಸನ್ನಿ ನಡದsದಲ್ಲ? ಯಾರವರು ಹೊರಗ?(ಹತ್ತಿರ ಬರುವಳು.)

ಕಮಲಾ:— (ಮಸಕ್ಕನೆ ಅವಳ ಮೈಮೇಲೆ ಹೋಗಿ) ಯಾರಿದ್ದಾರ ? ಯಾಕ ಒದರಿ ಕೋತೀದಿ ಸುಮ್ಮನs ?

[ಉಮಾಬಾಯಿ ಕತ್ತಲಲ್ಲಿ ಕಣ್ಣಿಕ್ಕಿ ದೂರದ ವರೆಗೆ ನೋಡುತ್ತಾಳೆ; ಗುರುತು ಸಿಕ್ಕದೆ ಹಿಂದಿರುಗುತ್ತಾಳೆ. ಕಮಲಾ-ನಿರ್ಮಲಾ ಒಳಗೆ ಬಂದು ತಮ್ಮ ತಮ್ಮ ಸೈಕಲ್‌ಗಳನ್ನು ಗೋಡೆಗೆ ಆನಿಸಿ ಇಡುತ್ತಾರೆ. ನಿರ್ಮಲಾ ಆರಾಮ್‌ಕುರ್ಚಿಯ ಮೇಲೆ ಮೈಚೆಲ್ಲಿ ಒರಗುತ್ತಾಳೆ. ಕಮಲಾ ಕನ್ನಡಿಯ

ಎದುರಿಗೆ ನಿಂತು ಮುಂಗುರುಳು ತೀಡಿಕೊಳ್ಳುತ್ತಾಳೆ; ಬುಚಡದೊಳಗಿನ ಹೂವನ್ನು ತೆಗೆದು ಮೂಸಿನೋಡುತ್ತಾಳೆ. ಕೈಚೀಲದೊಳಗಿನ ಪ್ರಸಾಧನ ಸಾಹಿತ್ಯ ಒಂದೊಂದನ್ನಾಗಿ ತೆಗೆದಿಡುತ್ತಾಳೆ.]

ಉಮಾ:– ಯಾರಽ ಅವರು ಬಂದವರು, ನೇಮಾ?

ನಿರ್ಮಲಾ:– ನನಗ್ಗೊತ್ತಿಲ್ಲವಾ, ಆಕೀನ್ನಽ ಕೇಳು.

ಉಮಾ:–ಅಂ, ಇಬ್ಬರೂ ಕೂಡೇ ಬಂದ್ರೆಲ್ಲ ಮತ್ತ?

ನಿರ್ಮಲಾ:– ಕೂಡಿ ಬಂದರೇನಾತು? ಆಕೀದು ಆಕೀಗೇ ಗೊತ್ತು!

ಉಮಾ:– ನಿಮ್ಮನ್ನ ದಿನಾ ಕಳಿಸಲಿಕ್ಕೆ ಬರೋವ್ರಂತೂ ಕಾಣೂದಿಲ್ಲ. ಅವರಾಗಿದ್ರ ಒಳಗ ಬಂದು ಹೇಳಿ ಹೋಗ್ತಿದ್ದರು.

ಕಮಲಾ:– ದಿನಾ ಅವರಽ ಬರಬೇಕೇನು? ಅಲ್ಲಿದ್ದ ಮಂದೀ ಪೈಕೀ ಯಾರಾರೇ ಬರ್ತಾರ. ಬಂದವರೆಲ್ಲಾ ನಿನಗ ಹೇಳಿ ಹೋಗಬೇಕೇನೊ! ಮನೀಗೆ ಮುಟ್ಟಿಸಿ ಹೋದ್ರ ಸಾಕಾಗಲಿಲ್ಲೇನು?

ಉಮಾ:– ನನಗ್ಯಾಕೋ ನಿಮ್ಮಿಬ್ಬರ ನಡಾವಳೀನಽ ಸರಿ ಅನಿಸವೊಲ್ಲದು. ನಿನ್ನ ಈ ಸಿನೆಮಾದ ಹುಚ್ಚು! ನಾಟಕದ ಹುಚ್ಚು! ಏನೇನು ಅಪ ಕೀರ್ತಿ ತರ್ತೀದ್ಯೊ ಅಂತೀನಿ. ನೀ ಹೋಗೋದಲ್ಲದ ನೇಮಾನ್ನೊಂದು ಕಟಕೊಂಡು ಹೋಗ್ತೀದಿ! ನೀ ನೆವಕ್ಕರಽ ಸಾಲೆಗ್ಹೋಗ್ತಿ. ಆಕಿ ಅದನ್ನೂ ಮಾಡೂದಿಲ್ಲ. ನೀವು ನಾಲ್ಕೂ ಮಂದಿ, ನನ್ನ ಜೀವಕ್ಕೊಂದು ಉರ್ಲಾಗಿ ಕೂತೀರಿ, ನಂತಾಯಿ!

ನಿರ್ಮಲಾ:– ಅವ್ವಾ, ನೀ ದಿನಾ ಇವಽ ಮಾತಽ ನಮ್ಮ ತಲೀಮ್ಯಾಲ ಕಟೇ ಬ್ಯಾಡ, ನೋಡು! ಒಮ್ಮೆ ನಾ ನಿನಗ ಹೇಳಿಬಿಟ್ಟೇನಿ — 'ನನಗ ಸಾಲಿ ಬ್ಯಾಡ; ನನ್ನ ಮದಿವೀ ಮಾಡಿಕೊಟ್ಟುಬಿಡ್ರೀ' ಅಂತ. ಅದೂ ನಿಮ್ಮ ಕಡಿಂದ ಆಗೋ ಹಾಂಗಿಲ್ಲಾ ಅಂದ್ರ ನಾಯೇನು ಮಾಡಬೇಕು ಹಂಗಾರ?

ಉಮಾ:– ಏನೂ ಮಾಡಬ್ಯಾಡ! ಉಡಾಳ ಹುಡುಗರ್ನ ಬೆನ್ನು ಹಚ್ಚಿಸಿ ಕೊಂಡು ತಿರಿಗ್ಯಾಡು! ಅಂದ್ರ ಮರ್ಯಾದಿ ಬರ್ತಽದ!

ನಿರ್ಮಲಾ:– ಮದಿವೀ ಗಂಡನ ಬೆನ್ನಬಲ ಇದ್ದರ ಯಾರ್‍ಯಾಕ ಬೆನ್ನ ಹತ್ತತಾರ?

(ಕಮಲಾ ಖೊಕ್ಕನೆ ನಗುವಳು.)

ಉಮಾ:– (ಬಾಯಿಯ ಮೇಲೆ ಕೈಯಿಟ್ಟು, ಆಶ್ಚರ್ಯದಿಂದ) ಅಪ್ಪಯ್ಯಾ!

ಸೇವಾ, ಏನ್ ನಾಚಿಗೀ ತೊರ್‍ಸ್ದು ನಿಂತೆವ್ವಾ ನೀನು? ಛೆ, ಹಿರೇರಂಬೋದಿಲ್ಲ, ಕಿರೇರಂಬೋದಿಲ್ಲ! ಹೀಂಗಾದರೇನು ಗತೀ ಅಂತೀನಿ? 'ಮದಿವೀ ಮದಿವೀ' ಅಂತ ಕನಕರಸ್ತೀದಿ. ನಿನ್ನ ಮ್ಯಾಲಿನವರು ಇನ್ನೂ ಮೂರು ಮಂದಿದ್ದಾರ. ಪಾಪ! ೨೨ ವರ್ಷದ ಮಗಳಾತು- ನಿಮ್ಮ ಅಕ್ಕ- ಮದಿವಿಲ್ಲದs ಕೂತsದ. ನಿನಗ ೧೬ ವರ್ಷ ದಣೀ ಆಗ್ಯಾವೋ ಇಲ್ಲೋ, ಹುಚ್ಚೈದ್ದು ಹರೀತಿದಿ! ಉಳಿದವರೆಲ್ಲ ನಿನಗಿಂತ ನಾಲ್ಕು ಆರು ವರ್ಷಕ್ಕ ದೊಡ್ಡವರಿದ್ದರೂ, ಒಂದು ದಿನಾ ಏನು ಅವರ ಬಾಯಿಂದ ಇಂಥಾ ಮಾತು ಬರಲಿಲ್ಲವಾ!

ನಿರ್ಮಲಾ:— ನಾ ನಾಚಿಗೀಬಿಟ್ಟು ಆಡ್ತೀನಿ, ಅವರು ಆಡೋದಿಲ್ಲಷ್ಟs! ಎಲ್ಲಾರ್‍ದ್ದೂ ಗೊತ್ತದಯೇಳು! ನನ್ನ ಮುಂದ ಹೇಳಬ್ಯಾಡ!

ಉಮಾ:— ಅದೇನs ಇರಲಿ, ನಾಳೆ ನಾಟಕದ ತಾಲೀಮಿಗೆ ಅಂತ ಒಂದs ಹೋಗ್ರಿ, ತೋರಿಸ್ತೀನಿ ನಿಮ್ಮ ಆಟಾ!

ಕಮಲಾ:— (ನಗುತ್ತ) ನಮ್ಮಾಟಾ ನೀಯೇನ್ ತೋರಿಸ್ತೀ? ನಾವs ತೋರಿಸ್ತೀವಿ, ಕೂತು ನೋಡು!

ಉಮಾ:— (ಸಿಟ್ಟಿನ ದನಿಯಲ್ಲಿ) ಕಮಲೀ, ನನಗ ನೀನು ಸಿಟ್ಟು ತರಿಸಬ್ಯಾಡಾ! ನಾಳಿನಿಂದ ನೀವು ತಾಲೀಮಿಗೆ ಹೋಗೋ ಹಾಂಗಿಲ್ಲ. ಯಾರಾರೇ ಕರೀಲಿಕ್ಕೆ ಬಂದ್ರ, ನಾಯೇನೂ ಕಳಿಸೂದಿಲ್ಲ ನೋಡು!

ಕಮಲಾ:— ಅಲ್ಲs, ಇವತ್ತಿನಿಂದ ಮೂರನೇ ದಿವಸ ನಾಟಕಾಗೋದು. ಈಗ ಬಿಡ್ತೀನಿ ಅಂದ್ರ ನಡೀತದೇನು? ನಾ ಹೋಗೋ ಆಕೀ! ನಾ ಯಾರ ಮಾತೂ ಕೇಳೋದಿಲ್ಲ ನೋಡು!

ಉಮಾ:— (ತಾರಸ್ವರದಲ್ಲಿ) ಹೋಗೋ ಹಾಂಗಿಲ್ಲಾ ಅಂದ್ರ ಹೋಗೊ ಹಾಂಗಿಲ್ಲ.

ಕಮಲಾ:— [ಅಷ್ಟೇ ಎತ್ತರದ ದನಿಯಲ್ಲಿ, ವ್ಯಂಗ್ಯವಾಗಿ] ಹೋಗೋದು ಬಿಡೋ ಹಾಂಗಿಲ್ಲಾ — ಅಂದ್ರ ಬಿಡೋ ಹಾಂಗಿಲ್ಲ!

ಉಮಾ:— ಇಷ್ಟು ದಿನ ಸಿನೆಮಾದಾಗ ಹೋಗ್ತೀನೀ ಅಂತ ಕುಣಿದಿ. ಈಗ ನಾಟಕದ್ದು ಬಡಕೊಂಡದ ಭೂತ! ಯಾರ ಮಾರಿಗೆ ಮಸಿ ಹಚ್ಚಬೇಕೂ ಅಂತ ಮಾಡೀದೀ?

ಕಮಲಾ:— ನಮ್ಮ ಮಾರಿಗೆ ಬಣ್ಣ ಹತ್ತಿದ್ರ, ನಿಮ್ಮ ಮಾರೀಗೆ ಮಸೀ ಹತ್ತ ತದ ಅಂತ ಯಾರು ಹೇಳ್ಯಾರ? [ಕಮಲಾ-ನಿರ್ಮಲಾ ಗಹಗಹಿಸಿ ನಗು

ವರು. ಕಮಲಾ ಒಳಗೆ ಹೋಗುವಳು. ನಿರ್ಮಲಾ ಕನ್ನಡಿಯಲ್ಲಿ ಮುಖ ನೋಡಿಕೊಳ್ಳುತ್ತ ನಿಲ್ಲುವಳು.]

ಆಳು:– [ಪ್ರವೇಶಿಸಿ] ಕಮಲಾಬಾಯೇರು ಆದಾರೇನ್ರಿ ?

ಉಮಾ:– (ಮುಂದಾಗಿ) ಯಾರು ನೀನು ? ಏನ್ ಕೆಲಸ ?

ಆಳು:– ಚಿಟಣೀಸ್‌ರಾಯರು ಪತ್ರಾ ಕೊಟ್ಟಾರ್ರಿ.

(ಉಮಾಬಾಯಿಯು ಕೈಯಲ್ಲಿ ಕೊಡುವನು.)

ಉಮಾ:– (ಅದನ್ನು ಒಡೆದು ಓದುವಳು.) "ಇಂದು ನೀವು ತಾಲೀಮಿಗೆ ಬರಲಿಲ್ಲಾ,— ಅಂತ ತಾಲೀಮು ನಡೆಯಲಿಲ್ಲ. ಇನ್ನು ಮೂರು ದಿನಗಳಲ್ಲಿ ನಾಟಕ ಅದ ಅಂಬೋದನ್ನ ಲಕ್ಷ್ಯದಲ್ಲಿಟ್ಟು, ನಾಳಿಂದ ದಿನಾಲು ತಪ್ಪದೆ ಬರಬೇಕು." (ಆಶ್ಚರ್ಯಗೊಂಡು) ನೇಮಾ, ಏ ಕಮ್ಮಾ, ಅಲ್ಲಿ ಹೋಗೋದು ತಪ್ಪಿಸಿ ಎಲ್ಲಿ ಹೋಗಿದ್ರೀ? (ಕಮಲಾ ನಾಟಕದ ಒಂದು ಹಾಡನ್ನು ಗುಣುಗುಟ್ಟುತ್ತ ಬರುವಳು.) ಯಾಕೆ ಮಾತಾಡೋದಿಲ್ಲ? ಕಮ್ಮಾ, ತಾಲೀಮಿಗೆ ಹೋಗಿದ್ವೀ ಅಂತ ಸುಳ್ಳೆ ಹೇಳಿದೆಲ್ಲೆ— ಎಲ್ಲಿಗೆ ಹೋಗಿದ್ದಿರಿ? ಯಾರ ಸಂಗ್ತಿ ಮೆರೆದು ಬಂದ್ರಿ ? ಏನೆ! ಕೇಳ್ತಿರೊ ಇಲ್ಲೊ? (ಕಮಲಾ ನಿರ್ಮಲಾ ಮೋರೆ ತಿರುವಿಕೊಂಡು ಒಳಗೆ ಹೋಗಿಬಿಡುವರು.) ಇವರು ಮನೀಗೆ ಬಂದಮ್ಯಾಲ ಮಾರಿಗೆ ಹಿಡೀತೀನಿ ಈ ಪತ್ರಾ— ನೋಡ್ರಿ ನಿಮ್ಮ ಮಕ್ಕಳ ಲೀಲಾ ಅಂತ! ರಾಮಾ, ರಾಮಾ, ರಾಮಾ! ದೇವರು ಹೆಣ್ಣು ಕೊಡೋದೆ ನಾಲ್ಕು ಗಂಡು ಹುಡುಗರ್ನ ಕೊಟ್ಟಿದ್ರ, ಘಳಿಸಿ ತಂದು ಹಾಕ್ತಿದ್ರು. ಇಂಥಾ ಅಪಕೀರ್ತಿ ಅಂಜಿಕ್ಯಾದರೂ ಇರ್ತಿದ್ದಿಲ್ಲ! ಮಾರಿ-ಮ್ಮನ್ನ ದಾಟಿಹಾಕಿದ್ಹಾಂಗ ನಿಮ್ಮೊಬ್ಬೊಬ್ಬರ್ನೆ ಎಂಬೊಮ್ಮೆ ದಾಟಿ ಹಾಕೇನೋ ಅಂತ ಅನಿಸೇದ! ಎಲ್ಲಾದಕ್ಕೂ ನಾನೆ ಸಾಯಬೇಕು, ನಾನೆ ಸಾಯಬೇಕು, ನಾನೆ ಸಾಯಬೇಕು! ಇವರ ಕ್ಲಬ್ಬು ಎಂದೊಮ್ಮೆ ಸುಟ್ಟು ಸುಡುಗಾಡಾದೀತೊ ಅಂತೀನಿ. ಅಲ್ಲಿ ಅವರ ಸಮಾಧಿ, ಇಲ್ಲಿ ನನ್ನ ಸಮಾಧಿ, ಒಂದೆ ಕಾಲಕ್ಕೆ ಆದ್ರ ಚಲೋ ಆದೀತು! ಇಂಥಾ ಮಕ್ಕಳ್ನ ಹಡೆಯೋದಕ್ಕಿಂತ ನಾಯಿಮರಿ ಹಡೆದಿದ್ದರ ಮನ್ಯಾಗ ಉಪಯೋಗಕ್ಕರೆ ಬೀಳ್ತಿದ್ದುವು! [ಟಾಂಗಾ ಬಂದು ನಿಂತ ಸಪ್ಪಳವಾಗುತ್ತದೆ.] ಟಾಂಗಾ ಯಾರದು ಬಂತೀಗ? ['ಅಪ್ಪಾ, ಲಗು ಬಾ' ಎಂದು ಕೂಗಿದ ದನಿ ಕೇಳಬರುವುದು. ಉಮಾಬಾಯಿ ಧಾವಿಸಿ ಹೊರಗೆ ಹೋಗುತ್ತಾಳೆ.

ಕಮಲಾ–ನಿರ್ಮಲಾ, ಹಿಂದಿನಿಂದ ಹೋಗುತ್ತಾರೆ. ಒಂದೆರಡು ನಿಮಿಷದಲ್ಲಿ, ವಿಮಲಾನ್ನ ಉಮಾಬಾಯಿ ಎತ್ತಿಕೊಂಡೇ ಬರುವಂತೆ ಬರುತ್ತಾಳೆ. ಅಮಲಾ, ಕಮಲಾ, ನಿರ್ಮಲಾ, ತಾಯಿಗೆ ಆಧಾರವಾಗಿ ಹಿಂಬಾಲಿಸುತ್ತಾರೆ. ಅಮಲಾ ಹಾಸಿಗೆ ತಂದು ಹಾಸುತ್ತಾಳೆ. ಉಮಾಬಾಯಿ ವಿಮಲಾನ್ನ ಮಲಗಿಸುತ್ತಾಳೆ. ಎಲ್ಲರೂ ಸುತ್ತು ಕುಳಿತು ಗಾಳಿಹಾಕಿ ವಿಮಲಾನ್ನ ಉಪಚರಿಸುತ್ತಿರುವಾಗ] ಹೀಂಗ್ಯಾಂಗಾತೇ ಅಮಲಾ? ಏನಾತೇನು?

ಅಮಲಾ:– ಸಿನೆಮಾ ನೋಡ್‌ನೋತ್ತನs ಒಮ್ಮೆಲೆ ಎಚ್ಚರದಪ್ಪಿ ಕುರ್ಚೀ ಮ್ಯಾಲಿಂದ ಬಿದ್ದುಬಿಟ್ಳವಾ! ಸಿನೆಮಾ ನಿಲ್ಲಿಸಿ .... ಮ್ಯಾನೇಜರ್ ಬಂದು .... ಟಾಂಗಾಮಾಡಿ.... ಅಂತೂ ಕರಕೊಂಡು ಬಂದೆ, ನಂತಾಯಿ. ಬರ್ತಾ ಕ್ಲಬ್ಬಿನಾಗ ಅಪ್ಪಗೂ ಹೇಳಿ ಬಂದೆ ಡಾಕ್ಟರ್‌ನ ಕರಕೊಂಡು ಬರ್ಲಿಕ್ಕೆ!

ಉಮಾ:– ಹೋಗ್ಯಾರೋ, ಅಲ್ಲೇ ಕೂತಾರೋ ಅಂತೀನಿ?

ಅಮಲಾ:– ಇಲ್ಲ, ಕಳಿಸೇ ಬಂದೆ.

ಉಮಾ:– ಹಿಂಗ್ಯಾಕಾಗಿದ್ದೀತವ್ವಾ ಹುಡಿಗ್ಗೆ? ಹೆದರಿಕೆ ಬರೋ ಹಾಂಗೇನಾರೆ ಕಥಿ-ಗಿಥಿ ಇತ್ತೇನು?

ಅಮಲಾ:– ಎಲ್ಲೀದs? 'ದಾನತ್' ಅಂತ ಬಂದಾದಲ್ಲ, ಮೂರು ವಾರಾತು ನಡದು!

ಉಮಾ:– ಏನೋ ನಮ್ಮವ್ವಾ, ಯಾರಿಗ್ಗೊತ್ತು ನಿಮ್ಮ ದಾನತ್ತೋ, ಆನಾಮತ್ತೋ!

ಅಮಲಾ:– ಸಾದಾ ಕಥಿಯವ್ವಾ! ಅದsಯೇನದರಾಗ! ಒಬ್ಬ ಹುಡುಗ ಒಬ್ಬ ಹುಡಿಗೀ ಮ್ಯಾಲ ಪ್ರೀತಿ ಮಾಡ್ತಿರ್ತಾನ. ಮದಿವ್ಯಾಗ್ತೀನೀ ಅಂತ ವಚನಾ ಕೊಡ್ತಾನ. ಆ ಮ್ಯಾಲ ಆಕೀಗೊಂದು ಕೂಸು ಹುಟ್ಟsದ ಅಂತ ತಿಳಿದಮ್ಯಾಲ, ಆಕಿನ್ನ ಮದಿವೀ ಮಾಡಿಕೊಳ್ಳದ, ಮಾರೀತಪ್ಪಿಸಿ, ಓಡಿಹೋಗ್ತಾನ! ಆಕಿ ಜೀವಾಕೊಡೋ ನಿಶ್ಚಯಮಾಡಿ, ಒಂದು ಪತ್ರಾ ಬರ್ದಿಟ್ಟು ವಿಷ ತಗೊಳ್ಳಿಕ್ಕೆ ಅಂತ ಬಾಟ್ಲೀ ಹೀಂಗ ಬಾಯಿಗೆ ಹಿಡದ್ಲೋ, ಇಲ್ಲೋ, ಒಮ್ಮೆಲೆ ವಿಮಲಾ ಭೋಳಿ ಬಂದs ಬಿದ್ದುಬಿಟ್ಲು!

ಉಮಾ:– ಏನ್ ಮಣ್ಣೋ ಸುಡುಗಾಡೊ ಹೋಗವಾ! ವಿಮಲಾ, ವಿಮಲಾ, ಬಾಳಾ!

[ಮೈ ಮೇಲೆ ಕೈಯಾಡಿಸುವಳು. ವಿಮಲಾ ಒಂದು ಸಲ ನರಳುವಳು.

ಕೈಯನ್ನು ತಾಯಿಯ ಕೈ ಮೇಲೆ ಚಲ್ಲುವಳು. ಒಮ್ಮೆ ಕಣ್ಣನ್ನು ಅರೆ ತೆರೆದು ಮತ್ತೆ ಮುಚ್ಚುವಳು. ಕಾರು ಬಂದು ನಿಂತ ಸಪ್ಪಳ ಕೇಳಬರುವುದು. ಕಮಲಾ ನಿರ್ಮಲಾ ಎದ್ದು ಹೋಗಿ ನೋಡುವರು. ನರಸಿಂಗರಾಯರು, ಡಾಕ್ಟರ್ ಮತ್ತು ಅವರ ಹೆಂಡತಿ ಲೇಡೀ ಡಾಕ್ಟರ್‌ರೊಡನೆ ಒಳಗೆ ಬರುವರು. ಉಮಾಬಾಯಿ, ಅಮಲಾ ತುಸು ಸರಿದು ಓರಣವಾಗಿ ಕೂಡುವರು. ಡಾಕ್ಟರ್‌ದ್ವಯರು ರೋಗಿಯ ಹತ್ತಿರ ಬಂದು ನಾಡಿ, ಮೈ ಪರೀಕ್ಷಿಸತೊಡಗುವರು. ವಿಮಲಾಗೆ ಮೈಮೇಲೆ ಎಚ್ಚರಬರುವುದು. ಅವಳು ಸುತ್ತಲೂ ಕಣ್ಣು ಹೊರಳಿಸಿ ನೋಡುವಳು. ನಾಚಿಕೆಯಿಂದ ಮೈ ಮುದುಡಿಕೊಳ್ಳುವಳು. ಡಾಕ್ಟರರು ಲೇಡೀ ಡಾಕ್ಟರರನ್ನು ಬೇರೆ ಕರೆದು, ಇಂಗ್ಲಿಷಿನಲ್ಲಿ ಏನೋ ಹೇಳುವರು. ಲೇಡೀ ಡಾಕ್ಟರರು ವಿಮಲಾನ ಹತ್ತಿರ ಹೋಗುವರು.]

ಡಾಕ್ಟರ್:— ನರಸಿಂಗರಾಯರೆ, ಪೇಶಂಟನ್ನ ತುಸು Closely examine ಮಾಡಬೇಕಾಗ್ತsದ ! ಆದ್ದರಿಂದ ನಿಮ್ಮ ಹುಡುಗೇರ್ನ ತುಸು ಹೊತ್ತು ಹೊರಗ ಕಳಿಸ್ರಿ. ಇಲ್ಲಿ ಸುತ್ತುಮುತ್ತು ಯಾರೂ ಇರಕೂಡದು. (ಲೇಡೀ ಡಾಕ್ಟರಳಿಗೆ) ಆಕಿನ್ನ ಒಳಗs ಕರಕೊಂಡು ಹೋಗಿ examine ಮಾಡ್ರಿ.

ಲೇಡಿ ಡಾಕ್ಟರ್:— Alright. (ಉಮಾಬಾಯಿಗೆ) ಬಾಯಿ, ನನಗ ತುಸು ಸಹಾಯಮಾಡ್ರಿ. ಒಳಗ ಹಾಸಿಗಿ ಅದsಲ್ಲ ? ಪೇಶಂಟನ್ನ ಒಳಗs ಕರ ಕೊಂಡು ಹೋಗೋಣ !

[ಉಮಾಬಾಯಿ ವಿಮಲಾನ್ನ ಎಬ್ಬಿಸಿ, ಆಧಾರಕೊಟ್ಟು ಕರೆದುಕೊಂಡು ಹೋಗುತ್ತಾಳೆ. ವಿಮಲಾ ತಾಯಿಯ ಮೈಮೇಲೆ ತನ್ನ ಮೈ ಭಾರಹಾಕಿ, ಒಂದೊಂದೇ ಹೆಜ್ಜೆ ಇಕ್ಕುತ್ತ ಹೋಗುವಳು. ಲೇಡೀ ಡಾಕ್ಟರು ತನ್ನ ಬ್ಯಾಗು, ಸ್ಟೆಥಾಸ್ಕೋಪು ತಕ್ಕೊಂಡು ಹಿಂದಿಂದೆ ಹೋಗುವಳು.]

ನರಸಿಂಗ:— (ತನ್ನ ಮೂರೂ ಮಕ್ಕಳಿಗೆ) ನೀವು ಒಳಗ ಹೋಗಬ್ಯಾಡ್ರಿ. ತುಸು ಹೊತ್ತು ಹೊರಗಿನ ಅಂಗಳದಾಗs ಇರ್ರಿ. ಆ ಮ್ಯಾಲ ಬಂದೀರಂತೆ. [ಅಮಲಾ, ಕಮಲಾ, ನಿರ್ಮಲಾ ಹೊರಗೆ ಹೋಗುವರು.] ಏನ್ ಡಾಕ್ಟರ್, ಹಿಂಗ್ಯಾಕಾಗಿರಬೇಕು ಅಂತೀರಿ ?

ಡಾಕ್ಟರ್:— ನಿಮ್ಮ ಈ ಹುಡಿಗೀ ಹೆಸರೇನೋ ಹೇಳಿದ್ರೆಲ್ಲಾ ?

ನರಸಿಂಗ:— ವಿಮಲಾ.

ಡಾಕ್ಟರ್:— ಎಷ್ಟು ಈಗ ವಯಸ್ಸು ?

ನರಸಿಂಗ:– ೨೨ನೆ ವರ್ಷ ನಡೀತದ ಕಾಣಿಸ್ತsದ !

ಡಾಕ್ಟರ್:– ಉಂ, ಮದಿವಿ ಇನ್ನೂ ಆಧಾಂಗಿಲ್ಲ !

ನರಸಿಂಗ:– ಛೆ, ಇಲ್ಲ. ಅದs ಪ್ರಯತ್ನದಾಗಿದ್ದೀವಿ! ಎಲ್ಲೂ ವರಾನs ಗೊತ್ತಾಗ ಲೊಲ್ಲದು

ಡಾಕ್ಟರ್:– (ಗದ್ದದ ಮೇಲೆ ಕೈಯಾಡಿಸುತ್ತ) ಹುಡಿಗೀ ಕೈಯಿಂದ ಏನೋ ತುಸು ತಪ್ಪಾದ್ದಾಂಗ....ಸಂಶಯಂತೂ ಬರ್ತsದ! ಅಂದ್ರ ಹೀಂಗ್ ನೋಡ್ರಿ.... ನಿಮಗ ಸ್ಪಷ್ಟ ಕೇಳೋದಂದ್ರ....ಹಿಂದಿನದೇನಾದರೂ history ಅದೇ ಯೇನು ? ಯಾಕಂದ್ರ ಬೆಳೆದ ಹುಡುಗರೇನ್ರೆಪಾ ! ಈಗಿನ ಕಾಲೇಜು ಗೀಲೇಜು ಅಂದ್ರ....ಒಟ್ಟs atmosphere ಕೆಟ್ಟು ಹೋಗೇದ ! ಅಂತs ಕೇಳ್ತೀನಿ.

ನರಸಿಂಗ:– ನನಗೇನೂ ಗೊತ್ತಿಲ್ಲ ನೋಡ್ರಿ, ಡಾಕ್ಟರ್ ! ಯಾವ ಹುಡಿಗಿ ಯಾವ ಕ್ಲಾಸಿನೊಳಗ ಕಲೀತsದ ಅಂತ ಕೇಳಿದ್ರ, ಥಟಕ್ಕನs ನನಗ ಹೇಳ್ಳಿಕ್ಕೆ ಸಾಧ್ಯಿಲ್ಲ ! ಯಾಕಂದ್ರ ನಮ್ಮ ಹೊರಗಿನ ಕೆಲಸದಾಗ ನನಗ ಈ ಕಡೆಗೆ ಲಕ್ಷ್ಯಕೊಡಲಿಕ್ಕೇ ಆಗೋದಿಲ್ಲ. ಇದನ್ನ ಆಕಿನ್ನs ಕೇಳಬೇಕು!

ಡಾಕ್ಟರ್:– ಯಾರ್ನ? ಹುಡಿಗಿನ್ನs ?

ನರಸಿಂಗ:– ಅಂ ಹಂ, ಹೆಂಡತಿನ್ನ !

[ಲೇಡೀ ಡಾಕ್ಟರರು ಹೊರಗೆ ಬರುತ್ತ ಡಾಕ್ಟರರನ್ನುದ್ದೇಶಿಸಿ]

ಲೇಡಿ ಡಾಕ್ಟರ್:– There are definite signs, must be that only and nothing else.

ಡಾಕ್ಟರ್:– ಉಂ. (ನರಸಿಂಗರಾಯರಿಗೆ) ನಾ ಆಗಲೇ ಊಹಿಸಿದ್ದೇ ಖರೇ ಅದ! ಏನು ಮಾಡೋದು ? ಇಂಥಾವು ಆಗದಿದ್ದರs ಆಶ್ಚರ್ಯ. we must overhaul the society, completely and thoroghly on moral grounds ನನ್ನ ಇಷ್ಟು ದಿವಸದ ಅನುಭವದ ಮ್ಯಾಲಿಂದ ನಾ ಒಂದು ನಿಶ್ಚಿತ ಅಭಿಪ್ರಾಯಕ್ಕ ಬಂದೀನಿ: ೧೬ ವರ್ಷದ ಮ್ಯಾಲ ನಮ್ಮ ಹೆಣ್ಣು ಹುಡುಗರ್ನ ಸಾಲಿಯೊಳಗೂ ಇಡೋ ಹಾಂಗಿಲ್ಲ, ಮದಿವೀ ಮಾಡ ದೆನೂ ಬಿಡೋ ಹಾಂಗಿಲ್ಲ. ಅನೇಕ ಮಂದಿಗೆ ನನ್ನ ಈ ಮಾತು ಮೂರ್ಖ ತನದ್ದೂ ಹಳೆತರದ್ದೂ ಅಂತ ಅನಿಸೀತು, ಅನಿಸಲಿ. ನಮ್ಮ ಸಮಾಜವನ್ನು ನಾವು ಬ್ಯಾರೆ ರೀತಿಯಿಂದ ಕಟ್ಟೋ ವರೆಗೂ ನಮಗ ಸ್ವಾತಂತ್ರ್ಯ

ಕಡಿಮಿದ್ದಷ್ಟು ಒಳ್ಳೇದು. ಇರಲಿ. ಈಗಾದದ್ದು ಆಗಿಹೋಗೇದ. ಕಾರಣಾ ಹುಡುಕೋದರೊಳಗ ಅರ್ಥಿಲ್ಲ. ನಾ ಒಂದು ಔಷಧ ಬರ್ದು ಕೊಡ್ತೇನಿ. ಅದನ್ನ ಕೊಡ್ರಿ. ಅದು ಗುಣಾ ಕೊಟ್ಟೇ ಕೊತ್ತsದ. ತಿಳೀತಿಲ್ಲೊ ? [ಕಿಸೆಯೊಳಗಿನ ನೋಟ್‌ಬುಕ್ಕನ್ನು ತೆಗೆದು ಒಂದು ಔಷಧವನ್ನು ಬರೆದು ಕೊಡುವರು.] ಇದನ್ನ ಕೂಡಲೇ ತರಿಸಿಕೊಡ್ರಿ.

ನರಸಿಂಗ:– ಇದು ಒಂದು ಸಾಕಾದೀತೋ, ಮತ್ತೇನಾದರೂ ಉಪಾಯ.... ?

ಡಾಕ್ಟರ್:–ಇದರಿಂದ ಒಮ್ಮೆ ಪಾರಾದ ಮ್ಯಾಲ ಮಾಡತಕ್ಕ ಇನ್ನೊಂದುಪಾಯ ಆದ ! ಅದನ್ನ ಮಾತ್ರ ಮಾಡೇತೀರಬೇಕು.

ನರಸಿಂಗ:– ಓಹೊ, ಹೇಳ್ರಿ ಡಾಕ್ಟರ್, ಹೀಂಗs ಆಕ್ಯೋತ ನಡದ್ರ ಗತಿ ಯೇನು ?

ಡಾಕ್ಟರ್:– ಮೊದಲನೆ ಕೆಲಸ ಅಂದ್ರ ನಿಮ್ಮ ನಾಲ್ಕೂ ಹುಡುಗರದು ಕೂಡಲೇ ಲಗ್ನಾ ಮುಗಿಸ್ರಿ ! ಯಾರದೂ ಉಳಿಸೋಹಾಂಗಿಲ್ಲ ! ತಿಳೀ ತಿಲ್ಲೋ ? ಒಳ್ಳೇದು, ನಾ ಬರ್ತೇನಿ. ಅಷ್ಟು ಮಾಡ್ತೀರಿಲ್ಲೋ ಮತ್ತೆ ?

ನರಸಿಂಗ:– ಓಹೊ, ಅಲ್‌ಬತ್.

ಡಾಕ್ಟರ್ :– ನಾಳೆ ನನಗ ಆಕೀ ಪ್ರಕೃತಿ ಬಗ್ಗೆ ಮಾತ್ರ ಆಗಾಗ್ಗೆ ತಿಳಿಸ್ತಾ ಹೋಗ್ರಿ ! Good night.

[ಇಬ್ಬರೂ ಡಾಕ್ಟರರು ಹೋಗುವರು. ನರಸಿಂಗರಾಯರು ಕಾರಿನ ವರೆಗೆ ಕಳಿಸಲು ಹೋಗುವರು. ಅಮಲಾ, ಕಮಲಾ, ನಿರ್ಮಲಾ ಒಳಗೆ ಬರುವರು. ಉಮಾಬಾಯಿ ಒಳಗಿಂದ ಹೊರಗೆ ಬರುವಳು.]

ಉಮಾ:– ಹೋದರೇನು ಡಾಕ್ಟರು್ರ !

ಅಮಲಾ:– ಹುಂ, ಹೋದರು.

ಉಮಾ:– ಇವರೆಲ್ಲಿದ್ದಾರ ?

ಅಮಲಾ:– ಅವರ್ನ ಕಳಿಸಲಿಕ್ಕೆ ಹೋಗ್ಯಾನ, ಬರ್ತಾನ !

ಉಮಾ:– ಏನು ಹೇಳಿದ್ರೇ, ಡಾಕ್ಟರು ?

ಅಮಲಾ:– ಏನೋವ್ವಾ ! ಏನೋ ಬರ್ದಂತೂ ಕೊಟ್ಟಾರ. ಚೀಟಿ ಅಪ್ಪನ ಕೈಯಾಗಿತ್ತು.

(ನರಸಿಂಗರಾಯ ಬರುತ್ತಾನೆ.)

ಉಮಾ:– (ಗಂಡನಿಗೆ) ಏನಂತ ? ಹೇಳಿದರೇನು ?

ನರಸಿಂಗ:– ಎಲ್ಲಾ ಹೇಳ್ಯಾರ. ಔಷಧಾನೂ ಬರ್ದು ಕೊಟ್ಟಾರ. ಅಮಲಾ ನೀ ನನ್ನ ಸಂಗ್ತಿ ಬಾ. ಔಷಧ ತಗೊಂಡು ಬರುವಿಯಂತ.

ಉಮಾ:– ಮತ್ತ ನೀವೆಲ್ಲಿ ಹೋಗ್ತೀರಿ ?

ನರಸಿಂಗ:– ಈಗ ರಾತ್ರಿ Feast (ಮೇಜವಾನಿ) ಅದ ಕ್ಲಬ್ಬಿನಾಗ! ಅದನ್ನ ತಪ್ಪಿಸೋ ಹಾಂಗಿಲ್ಲ. ನಾನs ಸೆಕ್ರೆಟರಿ ಬ್ಯಾರೆ ! ಲಗೂ ಬರ್ತೀನಿ.

ಉಮಾ:– ಅದೇನಿಲ್ಲ. ಇವತ್ತು ಹೋಗೋ ಹಾಂಗಿಲ್ಲ ಕ್ಲಬ್ಬಿಗೆ! ಹುಡಿಗೀ ಪ್ರಾಣಹೋದರೂ ನಿಮಗ ಕಾಳಜೀ ಇಲ್ಲ ! ಇಷ್ಟು ಅನರ್ಥ ಆದದ್ದು ಸಾಕಾಗಲಿಲ್ಲೇನು ? ಇನ್ನಾದರೂ ಹುಡುಗರ ಮದಿವೀ ಬೆನ್ನುಹತ್ರಿ !

ನರಸಿಂಗ:– ಇದು ನೋಡು, ಈಗಂತೂ ಹೋಗಿಬರ್ತೀನಿ. ನಾಳೆ ಎದ್ದ ಕೂಡ್ಲೆ ಮೊದಲನೇ ಕೆಲಸ ಅಂದ್ರ ಎಲ್ಲಾ ಪತ್ರಿಕೆಗಳೊಳಗೂ 'ಒನ್ಮೆಲೆ ನಾಲ್ಕು ವರಾ ಬೇಕು' ಅಂತ ಜಾಹೀರಾತು ಕೊಟ್ಟುಬಿಡೋದು. ಅರ್ಜಿ ಬಂದ ಬಂಧಾಂಗ ವಿಚಾರಮಾಡೋದು.

ಉಮಾ:– ಸುಟ್ಟಿತು ನಿಮ್ಮ ಜಾಹೀರಾತು, ನಿಮ್ಮ ಅರ್ಜಿ! ನಡೀರಿ ಒಳಗ. ಹುಡಿಗಿ ಒಂದs ಅದ—ಮೊದಲ ಆಕಿನ್ನ ಬದುಕಿಸೋಣು! ಅ ಮ್ಯಾಲ ಅವರ ಮದಿವಿ, ನಿಮ್ಮ ಪ್ರಸ್ತ !

[ಎಲ್ಲರೂ ಒಳಗೆ ಹೋಗುವಾಗ ತೆರೆ]

ನಾರ್‍ಯಾನ ಕರಾಮತ್ತು

★

ಪಾತ್ರಗಳು:

ತಿರುಕಪ್ಪ	....	....	....	ತಂದೆ
ಪುಟ್ಟವ್ವ	....	....	....	ತಾಯಿ
ನಾರ್‍ಯಾ	....	....	....	ಮಗ
ಸುಲೂ	....	....	....	ನಾರ್‍ಯಾ ತಂದ ವಧು

[ತಿರುಕಪ್ಪನ ಮನೆ. ಗೋಡೆಗೆ ಶ್ರೀ ರಾಘವೇಂದ್ರ ಸ್ವಾಮಿಗಳ ಪಟ ತೂಗು ಹಾಕಿದೆ. ಮಂಚದ ಮೇಲೆ ತಿರುಕಪ್ಪ ಮಲಗಿದ್ದಾನೆ. ಅವನ ವಯಸ್ಸು ಸುಮಾರು ೫೭-೫೮. ಬಡಕಲು ದೇಹ. ಗೂರುಬೇನೆಯಿಂದ ಬಳಲುತ್ತಿರುತ್ತಾನೆ. ಆಗಾಗ ದಮ್ಮು ಬಂದು ಕೆಮ್ಮುತ್ತಾನೆ.]

ತಿರುಕಪ್ಪ:– ನಾರ್‍ಯಾ, ಏ ನಾರ್‍ಯಾ .... (ಕೆಮ್ಮುತ್ತ, ಇನ್ನಷ್ಟು ದನಿ ಏರಿಸಿ) ಏಽಽಽ ನಾರ್‍ಯಾ, (ಮತ್ತೆ ಕೆಮ್ಮುತ್ತ, ಹೆಂಡತಿಯನ್ನು ಉದ್ದೇಶಿಸಿ) ಏನಽಽಽ ಏಽ .... ಇದ್ದಾನೇನಽ ಅಂವ? ಅವನ ಧನಿ ಕೇಳಿಸಿಧಾಂಗಾತು! ಏಽಽಽ ....

ಪುಟ್ಟವ್ವ:– (ಒಳಗಿಂದಲೆ) ಯಾಕ ಒದರಿಕೋತೀರಿ ಹಾಂಗ? ಏನು ಬೇಕಾಗೇದ? (ಹೊರಗೆ ಬಂದು ಮಂಚದ ಹತ್ತಿರ ನಿಲ್ಲುತ್ತಾಳೆ)

ತಿರು:– ಸಾಯೋದು ಬೇಕಾಗೇದ! ನಾಽಆರೆ ಸಾಯಬೇಕು, ... ಇಲ್ಲ, ಅಂವಽ ಆರೆ ಸಾಯಬೇಕು!

ಪುಟ್ಟವ್ವ:– ಏನಾಗೇದೇನೀಗ? ನಾರ್‍ಯಾ ಯಾಕ ಬೇಕು?

ತಿರು:– ಅವರಪ್ಪ ಸತ್ತಾನಿಲ್ಲಿ. ಸುಡುಗಾಡು ಕಾಣಿಸಬೇಕಾಗೇದ! (ಕೆಮ್ಮುತ್ತ ಎದ್ದು ಕೂಡುತ್ತಾನೆ.)

ಪುಟ್ಟವ್ವ:– ಏನು ಅಮಂಗಳ ಮಾತಾಡ್ತೀರಿ? ದೀಪಾ ಹಚ್ಚೋ ಹ್ಯಾಳ್ಯಾ ಆಗೇದ. ಮಾತಿಗೆ ಮಕಾಡಽ ಇಲ್ಲಲಾ!

ತಿರು:– ಮಸಡಿಗೆ ಕೊಟ್ಟೇನು—ಜಾಸ್ತಿ ಮಾತಾಡಿದ್ರ! (ಮತ್ತೆ ಕೆಮ್ಮುತ್ತಾನೆ.) ಎಲ್ಲಿದ್ದಾನವ !

ಪುಟ್ಟವ್ವ:– ಎಲ್ಲಿ ಹೋಗ್ತಾನ? ಇಲ್ಲೇ ಒಳಗಿದ್ದಾನ. (ನಾರ್ಯಾ ಹೊರಗೆ ಬರುತ್ತಾನೆ.) ಅಗಾ, ಬಂದ ನೋಡ್ರಿ!

ನಾರ್ಯಾ:– (ಅಪ್ಪನ ಹತ್ತಿರ ಬಂದು ನಿಂತು) ಯಾಕಪಾ ಅಪ್ಪಾ?

ತಿರು:– (ಅಣಕಿಸಿ) ಯಾಕಪಾ ಅಪ್ಪಾ ! ಮೂರು ದಿವಸಾತು ನಿನ್ನ ಮಾರೀ ನೋಡದ. ಎಲ್ಲಿ ಸೆಟಗಿದ್ದಿ? ನೋಕರೀ ಖಟಿಪಿಟಿ ಸೆವಮಾಡಿ, ಕಂಡವರಿಗೆ ಕಾಲು ಬೀಳೋದಾತು! ಕಡೆಗೇನಾತು?

ಪುಟ್ಟವ್ವ:– ಅಲ್ಲಾ, ನೋಕರೀ ಏನು ಇಂಗು ಜೀರಿಗೀ ಹಾಂಗ ಇಟ್ಟು ಮಾರ್‍ತಿರ್‍ತಾರs .... ಕೇಳಿದ ಘಳಿಗ್ಗೆ ಕೊಟ್ಟುಬಿಡಲಿಕ್ಕೆ? ನಿಮ್ಮದೊಂದು ಮಾತs!

ತಿರು:– ಏನs, ಅವನ್ನ ಕೇಳೋ ಮುಂದ ನೀ ನಡುವs ಬಾಯಿ ಹಾಕಬ್ಯಾಡ ! ಅವನ ಬಾಯಿಂದನs ಉಚ್ಚಾರ ಆಗ್ಲಿ. ಯಾಕೋ? ಏನಾತು?

ನಾರ್ಯಾ:– (ನಿರ್ಲಕ್ಷ್ಯದಿಂದ) ಏನೂ ಆಗೋ ಹಾಂಗಿಲ್ಲ.

ತಿರು:– (ಮತ್ತೆ ಅಣಕಿಸಿ) ಏನೂ ಆಗೋಹಾಂಗಿಲ್ಲ. ಏನಾಗ್ತsದ ಹಂಗಾರ ನಿನ್ನ ಕಡಿಂದ, ಪಿಂಡಪ್ರದಾನ! ಆಗೋದಿಲ್ಲ ಅಂದ್ರೇನು ನಿಮ್ಮಪ್ಪನ ಹಿಂಡೇ ಕೂಳು? ಅಲ್ಲೋ, ಎಲ್ಲೆಲ್ಲಿ ಹೋಗಿದ್ದಿ? ಏನೇನಾತು?

ನಾರ್ಯಾ:– (ಇಷ್ಟೇ ನಿರ್ಲಕ್ಷ್ಯದಿಂದ) ಆಗೋದೇನು? ಒಬ್ಬೊಬ್ಬರು ಒಂದೊಂದು ರೀತಿ ಮಾತಾಡ್ತಾರಪಾ!

ತಿರು:– ಏನು, ಅಂದದ್ದೇರೆ ಏನು ? ಒಬ್ಬಿಬ್ಬರು ಅಂದದ್ದೇರೆ ಹೊಗಳು !

ನಾರ್ಯಾ:– ಶಿಕ್ಷಣ ಖಾತೇದಾಗ ಶಿಕ್ಷಣಿಲ್ಲಾ ಅಂದ್ರು!

ಪುಟ್ಟವ್ವ:– ಯಾರಿಗೆ ? ನಿನಗ ? ಅಯ್ ಸುಡ್ಲಿ ! ಪಾಟಿಯಿಂದ ಹಿಡಿದು ನಿನ್ನ ಪ್ಯಾಂಟಿನ ತನಕ, ಐದು ಸಾವಿರ ಆದಕ್ಕs ಒಡೆದೆವಲ್ಲೋ ಮ್ಹಾರಾಯಾ !

ತಿರು:– ಪಾಟಿ ಆತು, ಪ್ಯಾಂಟ್ ಆತು, ಇವ ಪಾಸಾದದ್ದೇನು?

[ನಾರ್ಯಾ ಹತ್ತಿರದಲ್ಲಿರುವ ಪೇಪರ್ ಹಿಡುತ್ತ ನಿಲ್ಲುವನು.]

ಪುಟ್ಟವ್ವ:– ಅಯ್ಯ, ನಪಾಸ್ಸೇ ಆಗ್ಯಾನಲ್ಲ ! ಎಷ್ಟೋ ಹುಡುಗರು ಆದsಹೆ ಎಲ್ಲಿ ಆಗಿರ್‍ತಾವ ?

ಶಿರು:– ನಿನ್ನ ತಲಿ! ಆಗೋ ಪರೀಕ್ಷಾ ಆದರೂ ಈ ಕಾಲದಾಗ ನೌಕರೀ ಸಿಗೋದು ಕಷ್ಟ!

ಪುಟ್ಟವ್ವ:– ಆಗೋ ಪರೀಕ್ಷಾ ಅಂವ ಆಗೇಬಿಟ್ಟಾನ. ಆಗದವು ಆಗು ಅಂದ್ರ ಏನಾದಾನು? ಹನ್ನೊಂದ್ರಾಗ ಹತ್ತಾದ್ರ ಸಾಕಾಗಲಿಲ್ಲೇನು?

ಶಿರು:– ಸಾಕಾಗಲಿಲ್ಲ! ಹನ್ನೊಂದೂ ಆಗಬೇಕು, ಹನ್ನೆರಡೂ ಆಗಬೇಕು. ಅವು ಆದವ್ಯಾಲ ಸೀಂ ಮುಟ್ಟೋದು! ಇವು ಯಾವೂ ಆಗಲಿಲ್ಲ ಅಂದ್ರ ಕಲಿತವರ ಮರಣ, ಕಲಿಸಿದವರ ತರ್ಪಣ!

ಪುಟ್ಟವ್ವ:– ನಿಮಗ ವಾಗತ್ಯ ಅಂಬೋದಿಲ್ಲೇ ಇಲ್ಲ! ಈಗ ಯಾರಿಗೇನು ಸಾಯೋ ಹೊತ್ತು ಬಂದsದ?

ಶಿರು:– ಬಂದಿಲ್ಲ, ಬರ್ತsದ! ಅದಿರಲಿ. (ನಾರ್‍ಯಾನನ್ನು ಉದ್ದೇಶಿಸಿ) ಹಂ, ಮತ್ತ ಯಾರೇನಂದ್ರೋ?

ನಾರ್‍ಯಾ:– (ಪೇಪರು ಓದುವುದನ್ನು ನಿಲ್ಲಿಸಿ, ತಂದೆಯ ಕಡೆಗೆ ದೃಷ್ಟಿಹೊರಳಿಸಿ) ಪಿ. ಡಬ್ಲ್ಯು.ದಾಗ, 'ಪ್ರಾಮಾಣಿಕತನ ಬೇಕು!' ಅಂದ್ರು.

ಪುಟ್ಟವ್ವ:– ಯಾರಿಗೆ? ನಿನಗ?

ನಾರ್‍ಯಾ:– ಹೌದು, ಮತ್ತ ನನಗs!

ಪುಟ್ಟವ್ವ:– ನಿನಗೇನು ಬೇಕು ಅಂತಾರ? ಅವರಿಗೇ ಅವೆಲ್ಲಾ ಬೇಕಾಗಿದ್ದೀತು! ಇಲ್ಲದ್ದs ಕೇಳ್ತಾರ!

ಶಿರು:– ಹೌದs, ಅವರಿಗೆ ಯಾವುದ್ದ ಬೇಕೋ ಅದನ್ನs ಕೇಳ್ತಾರ! (ಕಿನ್ನುತ್ತಾನೆ.)

ಪುಟ್ಟವ್ವ:– ಕೇಳ್ಯಾರು! ಯಾವುದನ್ನ ಕೇಳಬೇಕು, ಯಾವುವನ್ನ ಕೇಳ ಬಾರದು– ಇದರ ವಿಚಾರ ಬೇಕು, ಕೇಳೋವ್ರಿಗೆ!

ಶಿರು:– ನಿನ್ನ ವಿಚಾರ ಸುಟ್ಟಿತು! (ನಾರ್‍ಯಾನಿಗೆ) ಹಂ, ಇರಲಿ. ಮತ್ತ ಯಾರೇನಂದ್ರೋ?

ನಾರ್‍ಯಾ:– ಮತ್ತ್ಯಾರಿಗೂ ನಾ ಕೇಳಲೇ ಇಲ್ಲ.

ಶಿರು:– ಯಾಕ ಕೇಳೀಯಪಾ? ನಿನಗೇನು ಧಾಡಗಾಣಿಸೇದ? .... ಮುಂದ? ಮುಂದ ಏನು ಅಂದಿ!

ಪುಟ್ಟವ್ವ:– ಹಿಂದಾದ್ದನ್ನs ಮುಂದ! ಅಂವ ಏನು ಮಾಡ್ತ್ಯಾನು ಪಾಪ! ಕಾಣಬೇಕಾದವರ್‍ನೆಲ್ಲಾ ಕಂಡ; ಕೇಳಬೇಕಾದವರ್‍ನೆಲ್ಲಾ ಕೇಳಿದ. ಕಾಡೋ ಕಾಲದಾಗ ಕೈಯಾಗಿನ ತುತ್ತು ಬಾಯಾಗ ಬೀಳೋದಿಲ್ಲಂತ! (ನಾರ್‍ಯಾ

ಒಳಗೆ ಹೋಗುತ್ತಾನೆ. ತಿರುಕಪ್ಪ ಪುಟ್ಟವ್ವ ಇಬ್ಬರೇ ಉಳಿಯುತ್ತಾರೆ) ನಿಮ್ಮ ವ್ಯಾಳ್ಯಕ್ಕೂ ಹೀಂಗs ಆಗಿದ್ದಿಲ್ಲೇನು ? ನೋಕರೀ ಹುಕುಮು ಸಿಕ್ಕದ್ದು, ಆಯಿತಾ ವ್ಯಾಳ್ಯಕ್ಕ ರದ್ದಾತು. ಆ ವ್ಯಾಲ ಮೂರು ವರ್ಷ ಮನೀ ಹಿಡಿದು ಕೂತಿರಿ. ನಾ ನಮ್ಮ ಅಪ್ಪನ ಕೈ ಕಾಲು ಹಿಡಕೊಂಡು, ನಿಮಗ ಹೊಟ್ಟಿಗೆ ಮಾರ್ಗ....

ತಿರು:– (ಅಣಕದ ದನಿಯಲ್ಲಿ) ಸಾಕು, ಸುಮ್ಮನಿರು. ಆ ಹಿಂದಿನ ಪುರಾಣಾ ಈಗ ಬಿಚ್ಚಬ್ಯಾಡ. ತನ್ನ ತವ್ರುಮನೀ ಶಿಫಾರಸು ಹೇಳಿಕೊಳ್ಳಿಕ್ಕೆ ಬಂದಾಳ !

ಪುಟ್ಟವ್ವ:– ಗಂಡನ ಶಿಫಾರಸು ಹೇಳಿಕೊಳ್ಳಿಕ್ಕೆ ಬಾರದಿದ್ರ, ಹೆಂಗುಸರು ಮತ್ತ .... ತಮ್ಮ ತವ್ರುಮನೀದs ಹೇಳಿಕೋಬೇಕಲ್ಲ!

ತಿರು:– ಏsss, ನನ್ನ ಮುಂದ ಅವರ ದಿಮಾಕು ಕೊಚ್ಚಬ್ಯಾಡ! ನಿನ್ನ– ಖರ್ಚಾ ಗದ ಕನ್ಯಾ ಅಂತ– ಕಂಗೆಟ್ಟು ಬಂದು, ನನ್ನ ಕೊರಳಿಗೆ ಕಟ್ಟಿದ್ರು. ನಾ ಕಣ್ಣು ಮುಚ್ಚಿಕೊಂಡು ನಿನ್ನ ಮಾಡಿಕೊಳ್ಳದಿದ್ದರ, ಕೂಡ್ತಿದ್ದಿ ಕಡೆ ತನಕಾ ಕನ್ಯಾಕುಮಾರಿ ಆಗಿ!

ಪುಟ್ಟವ್ವ:– ನನ್ನ ನೋಡೋ ಮುಂದ ನೀವು ಕಣ್ಣುಮುಚ್ಚಿದ್ರ, ನಿಮ್ಮನ್ನ ನೋಡೋ ಮುಂದ ನಾಽರೆ ಕಣ್ಣು ತೆರೆದಿದ್ದೇ–ಅಂತ ತಿಳಿಕೊಂಡೀರೇನು? ವರ ಅಂಬೋ ದೃಷ್ಟಿಯಿಂದ ವರೀಗೆ ಹಚ್ಚಿ ನೋಡಿದ್ರ, ಏನಿತ್ತು ನಿಮ್ಮಲ್ಲಿ?

ತಿರು:– ಮತ್ತ ನಿನ್ನಲ್ಲೇನs ಏನಿತ್ತು? ಹುಳುಕು ಮಾರಿ ಕೊಳಕು ಮೈ!

ಪುಟ್ಟವ್ವ:– ಮತ್ತ ನಿಮ್ಮದು? ಕರುಕು ಬಣ್ಣ, ಹರುಕು ಚಣ್ಣ! ಏನೋ....ಆ ಕಾಲಕ್ಕ ನಾಕು ಇಂಗ್ರೇಜಿ ಅಕ್ಷರ ನಿಮ್ಮ ಎದ್ಯಾಗ ಮೂಡಿದ್ದವು ಅಂತ ನಿಮ್ಮ ಸೆರಗಿನಾಗ ಬಿದ್ದೆ ನಾ! ಈ ಕಾಲಕ್ಕ ನಿಮ್ಮಷ್ಟು ಇಂಗ್ರೇಜಿಗೆ ಪೋರ್ಟರ್ ಕೆಲಸ ಸಹಿತ ಸಿಗೋದಿಲ್ಲ! ನನ್ನ ತವ್ರುಮನೀ ಹೆಸರು ತೆಗದ್ರ ನಿಮ್ಮ ತಲೀಗೆ ಕಾವೇರ್ತದ! ಅವರು ಮಾಡಿದ ನಿಮ್ಮ ಲುಕ್ಸಾನಾದ್ರೂ ಏನು? ಕಲಿತವರು ಅಂತ ಕನ್ಯಾ ಕೊಟ್ಟರು, ಕೆಲಸಿಲ್ಲದಾಗ ಕೈ ಹಿಡಿದರು, ಒಂದಲ್ಲದ ಬಾರಾ ಬಾಣಂತಿತನದ ಭಾರಾ ಹೊತ್ರು!

ತಿರು:– ಇದು ನೋಡು, ಮಾಡಿದ ಉಪಕಾರ ಆಡಿದ್ರ ಹೋತು. ವೈರಿಗಳ ಉಪಕಾರ ಸಹಿತ ಸೈರಿಸಬಹುದಂತ; ಆದರ ಹೆಂಡರ ಹಂಗಣೆ ಅಂದ್ರ, ಅಂಗಾಲಾಗ ಆನಿ ಬೆಳೆದ್ಹಾಂಗ! ಹೆಜ್ಜೆಜ್ಜೆಗೆ ಅಳುಕು! ಇಂಥಾದ್ರಾಗ, ನಾ ಮುಪ್ಪಾದ್ರೂ ಮಾನಾ ಮುಪ್ಪು ಮಾಡಿಕೊಳ್ಳದs ಮನೆತನ ನಡಸೀನ್ನಿ,

ಅದನ್ನೋಡು! ಅದಕ್ಕs ನಾ ನಾರ್‍ಯಾಗ ಹೇಳೋದು: 'ಮಗನs, ನಾ ಇರೋದ್ರಾಗs ಯಾವುದsರೆ ಕಟ್ಟಿಗೆ ಹೊಂದಿಕೊ' ಅಂತ. ದಾರೀ ಮ್ಯಾಲಿನ ಕಲ್ಲಾಗಿ, ಕಂಡವರ ಕೈಲೆ ಉಗುಳಿಸಿಕೊಂಬೋದು ಬ್ಯಾಡ!

ಪುಟ್ಟವ್ವ:– ಹುಟ್ಟಸಿದ ದೇವರೇನು ಹುಲ್ಲು ಮೇಯಿಸೋದಿಲ್ಲ ಬಿಡ್ರಿ!

ತಿರು:– ಆದ್ರ ದೇವರ ಕೈಯಾಗ ಉಳದsದೇನೀಗ? ಅಂವ ಮಾಡೋದ್ನೆಲ್ಲಾ ಈಗ ಮನಶಾನs ಮಾಡ್ತಾ ಇದ್ದಾನ! ಅಂವಗ ಅಂತ ಇಟ್ಟ ನೈವೇದ್ಯ ಸಹಿತ ಅವನ ಬಾಯಿಗೆ ಬೀಳೋದಿಲ್ಲ. ಅಂಥವ ಮನಿಶಾರಿಗೇನು ಉಣಿಸ್ತಾನ? ಈ ಕಾಲದಾಗ, ದೇವರು ಸಹಿತ ದಿಕ್ಕೇಡಿ ಆಗಿ ಕೂತಾವ! ಈ ಪುರಾಣಗೋಷ್ಠಿ ಸಾಕು! ಇವನ್ನ ವಾದಿಸಿ ನಮಗಾಗೋದೇನು? ನಮ್ಮ ಬಾಯಾಗ ತುತ್ತು ಬೀಳೋದನ್ನ ನಾವು ಸದ್ಯಕ್ಕ ನೋಡಿಕೊಂಬೋಣು!

ಪುಟ್ಟವ್ವ:– ಮತ್ತ ಅದಕ್ಕs ಅಲ್ಲs, ಅಂಗಾಲು ಸವಿಯೋ ಹಾಂಗ – ಆರು ತಿಂಗಳಾತು- ಓಡ್ಯಾಡ್ತsದ ಕೂಸು! ಯಾವುದೂ ನೆಲೀಗೇ ಹತ್ತವೊಲ್ದು.

ತಿರು:– ಇಲ್ಲಿ ನೋಡು, ಮೊದಲು ಅವನ ತಲೀಗೆ ಹತ್ತಿದ್ರ ನೆಲೀಗೆ ತಾನs ಹತ್ತತsದ. ಇಂವ ಮನಸಿಗೆ ಹಚ್ಚಿಕೊಂಡು ಪ್ರಯತ್ನ ಮಾಡ್ತಾನೋ ಇಲ್ಲೋ ಅಂತ ಅನಿಸ್ತsದ! ಇದs ನೋಡು, ನಾವು ಅವನ ಬಗ್ಗೇ ಈಗ ಮಾತಾಡ್ತೀವಿ— ಅವನು ಒಳಗ ಹೊರಟುಹೋದ! ಒಳಗೇನು ತತ್ತೀ ಕಾಯಿಸ್ತಾನೇನು? ಈಗ ಒಳಗೇನು ಕೆಲಸಿತ್ತು? (ಪುಟ್ಟವ್ವ ಒಳಬಾಗಿಲಲ್ಲಿ ಹಣಿಕಿಹಾಕುತ್ತಾಳೆ. ನಾರ್‍ಯಾ ಬರುತ್ತಾನೆ.) ಏನು, ಮುಂದ ಗತಿಯೇನು? ಮತ್ತ ಯಾವ ಖಾತೇದಾಗ ಕೇಳಬೇಕಂತ ಮಾಡಿ?

ನಾರ್‍ಯಾ:– (ತ್ರಾಸಗೊಂಡು) ಇನ್ನ ಯಾರಿಗೂ ಕೇಳೋ ಹಾಂಗಿಲ್ಲ! ಖಾತೆಯಿಲ್ಲ, ಗೀತೆ ಇಲ್ಲ! (ಮೇಜಿಗೆ ಆತುಕೊಂಡು ನಿಲ್ಲುವನು)

ತಿರು:– ಹಂಗಾರ? ಮನ್ಯಾಗಂತೂ ಎಲ್ಲಾರದೂ ಯಥಾಸ್ಥಿತಿ ಖಾತೇ ನಡದs ಬಿಟ್ಟದ— ತುಮ್ ಭಿ ಖಾತೆಂ, ಹಮ್ ಭೀ ಖಾತೆಂ, ಸಬ್ ಭೀ ಖಾತೆಂ! ಈ ಅನ್ನಖಾತೆ ನಡಿಸೋದ್ಹ್ಯಾಂಗ? ಹೇಳಲ್ಲಾ ತುಸು! ನಾ ಏನು ಕಿಡ್‌ವಾಯಿ ಅಂತ ತಿಳಕೊಂಡೀದೀನು, ಮಕ್ಳ?

ನಾರ್‍ಯಾ!– ನಾ .... ಒಂದು ಬ್ಯಾರೇನs ವಿಚಾರ ಮಾಡೀನಿ.

ತಿರು:– ಏನದು? ಹುಂ, ಬೊಗಳು. ಉಚ್ಚಾರಾಗಲಿ!

ನಾರ್‍ಯಾ:– (ಮುಖ ಗೋಡೆಯತ್ತ ತಿರುವಿ ಅಲ್ಲಿರುವ ಪಟದ ಕಡೆಗೆ ನೋಡುತ್ತ)

ಮದಿವೀ ಮಾಡಿಕೋಬೇಕೂ ಅಂತ ....

ತಿರು:– (ದನಿಯನ್ನು ಒಮ್ಮೆಲೆ ಗದ್ದರಿಸುವ ರೀತಿಯಲ್ಲಿ ಏರಿಸಿ) ಏನು? ಮದಿವೇ? ಮುಂಡೇಗಂಡ! ಮದಿವೆಂತ ಮದಿವಿ! ಆ್ಯಹಹಹ .... (ಉಪಹಾಸದ ನಗೆ ನಗುವನು.)

ಪುಟ್ಟವ್ವ:– ಮಾಡಿಕೋವಲ್ಲ್ಯಾಕ ಬಿಡ್ರಿ ....

ತಿರು:–(ಒಮ್ಮೆಲೇ ರೇಗಿ, ಮಂಚದ ಮೇಲೆಯೇ ಸಿಡಿದುಬಿದ್ದು) ಮತ್ತ್ಯಾತರಿಂದನೂ ಹೊಡೀಲಿಕ್ಕಿಲ್ಲ!.... ನಾರ್ಯಾ, ನಾ ಈಗs ಹೇಳ್ತೇನಿ– ಇಂಥಾದ್ದೇನಾದರೂ ಮಂಗ್ಯಾತನ ಮಾಡಿದಿ ಅಂದ್ರ, ನಿನ್ನ ಮಗ್ಗಲಾನs ಮುರಿದೀತು! ಹುಷಾರಿ ! ಅನ್ನಕ್ಕ ಗತಿ ಇಲ್ಲ ಲೌಡೀಮಕ್ಕಳಿಗೆ, ಮದಿವೆಂತ ಮದಿವಿ ! ಅಲ್ಲಾ, ಈಗಿನ ಹುಡುಗರ ತಲಿ ನೋಡ್ರೀ ಅಂತೀನಿ; ಹಿರೇರ ಹೆದರಿಕಿಲ್ಲ, ಕಿರೇರ ಕಾಳಜೀ ಇಲ್ಲ ! ಇದ್ದ ಮೂರು ಮಂದಿಗೇ ಕದ್ದು ತಿಂಬೋ ಹೊತ್ತು ಬಂದಾಗ, ನಾಲ್ಕನೇದೊಂದು ಜೀವಾ ತಂದು, ನನ್ನ ಜೀವಕ್ಕ ಉರ್ಲು ಹಾಕಬೇಕೂ ಅಂತಿಯೇನ?

ಪುಟ್ಟವ್ವ:– ಉರ್ಲು ಯಾತರದು? ಮನೀಗೆ ಸೊಸಿ ಬರ್ತಾಳ, ನನಗ ಮಾಡ್ಲಿಕ್ಕೆ ....

ತಿರು:– ನಿನಗ ಮಾಡ್ಲಿಕ್ಕೆ ? ಏನು ಮಾಡೋದು ? ಇನ್ನ ಒಂದs ಉಳದsದ ನೆಂದು– ಅವಿಧವಾ ನವಮಿ! ಅಷ್ಟಾಗ್ತsದ! ಮಾತು ಮಾತಿಗೆ ಆಕಿ ನಿನ್ನ ಕಟಬಾಯಿಗೆ ತಿವೀಲಿಕ್ಕೆ ತೊಡಗಿದ್ಲು ಅಂದ್ರ, ಅದೂ ಆಗಲಿಕ್ಕೆ ತಡಾ ಹಿಡಿ ಯೋದಿಲ್ಲ. ಸೊಸೀ ಅಂತ ಸೊಸೀ! ಸೊಸೀ — ಬಾಯಿ ಕಿಸಿ! ಮೊದಲs ಮನ್ಯಾಗ ಭಾಗ್ಯ ಅಳ್ತsದ, ಇನ್ನ ಸೊಸೀ ಅಷ್ಟು ಬಂದು ಸೌಭಾಗ್ಯ ಸುರ ಕೊಂಬೋದು ಉಳಿದsದ ! ಅಲ್ಲs, ನಾರ್ಯಾಗ ಕೆಲಸ ಸಿಗೋದು ಮುಖ್ಯೋ, ಕನ್ಯಾ ಸಿಗೋದು ಮುಖ್ಯೋ? ಯಾಕೋ ನಾರ್ಯಾ, ನೀನs ಉತ್ತರಾ ಕೊಡು! ಸಟ್‌ಸಟ್ ಉತ್ತರ ಬರಲಿ!

ನಾರ್ಯಾ:– ಈಗ ಕನ್ಯಾ ಬಂದsದ ....

ತಿರು:– ಅಹಹ ! ನಿನ್ನ ಮಾರಿಗೆ ಮಳ್ಳಾಗಿ ಬಂದಿದ್ದೀತು, ಪಾಪ! ಯಾವ ಕನ್ಯಾ ಅಪಾ ಅದು? ಸುದಾಮ ಕನ್ಯಾನೋ, ಸುಗ್ರೀವ ಕನ್ಯಾನೋ? ಯಾವ ಕನ್ಯಾ? ಎಲ್ಲೀದು?

ನಾರ್ಯಾ:– ಇದs ಊರಾಗ ಈಗ ಇದ್ದಾರ!

ತಿರು:– ಯಾರು? ಅವರ ನಾಮೋಚ್ಚಾರವಾಗಲಿ !

ನಾರ್‍ಯಾ:– ಗುರ್‍ರಾಯರು ಅಂತ.

ತಿರು:– ಯಾವ ಗುರ್‍ರಾಯರು? ಪೂರಾ ಹೆಸರರೆ ಹೇಳೋ! [ಕೆಮ್ಮುತ್ತಾನೆ.]

ನಾರ್‍ಯಾ:- ಮುತಾಲಿಕ ಗುರ್‍ರಾಯರು .... ಅಂತ.

ತಿರು:– ಯಾರು? ಮುತಾಲಿಕ ಗುರ್‍ರಾಯರ?

ಪುಟ್ಟವ್ವ:– ಹುಂ, ಸ್ಮಾರ್ತರು!

ತಿರು:– [ಒಮ್ಮೆಲೆ ಕೆರಳಿ] ಏನು ಸ್ಮಾರ್ತರ?

ನಾರ್‍ಯಾ:- ಹುಂ.

ತಿರು:– ನಿನ್ನ **ಕೊಂದ**ಬಿಟ್ಟೇನು.

ಪುಟ್ಟವ್ವ:– ಆದರೇನಾತು ಬಿಡ್ರಿ. ಪೂರ್ವದಿಂದ ಹೆಣ್–ಗಂಡು ನಡದ ನಡದಾವ! ನಾನ ಇಲ್ಲೇನು ಸ್ಮಾರ್ತರ ಮನೆಯಾಕಿ ?

ತಿರು:– ಅಂತ ಆ ತಪ್ಪು ಪುನಃ ಮಾಡೋದು ನನಗ ಬ್ಯಾಡಾಗೇದ! (ಕೆಮ್ಮುತ್ತಾನೆ.)

ಪುಟ್ಟವ್ವ:– ನೀವ ಪುನಃ ಯಾಕ ಮಾಡಲಿಕ್ಕೆ ಹೋಗ್ತೀರಿ? ನಾರ್‍ಯಾಗ ಮಾಡೋದು! ಅವರ ಕನ್ಯಾ ಅಂದ್ರ ವಿರುದ್ಧಂತೂ ಆಗೋದಿಲ್ಲ ಬ್ಯಾರೆ? ಉದ್ದೇನು ಅಡ್ಡೇನು? ಎಲ್ಲಾನೂ ಒಂದೇ!

ತಿರು:– ಉದ್ದೇನು ಅಡ್ಡೇನ? ಇದು ನೋಡು- ಈಗ ನೀ ಅಡ್ಡ ಕೂಡಿದ್ದರ ಪರಿಣಾಮನ ಇದು! ಯಾತರಾಗೊಂದೂ ಅಡ್ಡ! ಜಾಡುಹಿಡಿದು ಗಾಡಿ ಸಾಗೋ ಹಾಂಗ ಇಲ್ಲ! ಹೋಗಲಿ, ಗೋತ್ರ ಯಾವುದಂತ ? ಯಾವುದೋ ನಾರ್‍ಯಾ? ಕೇಳಿಯೇನು!

ನಾರ್‍ಯಾ:– ಹುಂ, ಇಬ್ಬರದೂ–ಒಂದ!

ತಿರು:– ಏನು, ಸಗೋತ್ರ?

ನಾರ್‍ಯಾ:- ಹುಂ ...

ತಿರು:– (ಅಣಕಿಸಿ) ಹುಂ ! ಹ್ಯೊಕೊಳ್ರಿಪಾ! (ದನಿ ಬದಲಿಸಿ) ಏನು ಅನಾಚಾರ ಬಂತಪಾ ದೇಶದಾಗ ಅಂತೀನ್ನಾ!

ಪುಟ್ಟವ್ವ:– ಯಾರಿಗರೆ ದತ್ತಕ ಮಾಡಿದರಾತು—ಬರ್‍ತದಂತಲ್ಲ?

ತಿರು:– ಯಾರಿಗೆ ದತ್ತಕ ಮಾಡ್ತಿ?

ಪುಟ್ಟವ್ವ:– ಹುಡುಗ – ಹುಡುಗಿ ಇಬ್ಬರ ಪೈಕಿ, ಯಾರ್‍ನ ಮಾಡಿದರೂ

ನಡೀತದಂತ.

ತಿರು:— ಅದ್ಯಾಕ? ನಾವs ದತ್ತಕ ಆಗಿಬಿಡೋಣು. (ದೈನಾಸಪಟ್ಟು) ನಾರ್ಯಾ, ಸಗೋತ್ರದಾಗ ಮದಿವ್ಯಾಗಿ ಯಾವ ನರಕಕ್ಕ ಹೋಗಬೇಕಂತೀಯಪಾ? ಏನು ಪುಣ್ಯಾತ್ಮರು ಹುಟ್ಟಿದರಪಾ ಜಗತ್ತಿನೊಳಗ! ಪರಮಾತ್ಮಾ, ಸಾಕಪಾ ಇನ್ನ ಕಣ್ಣುಮುಚ್ಚು!

ಪುಟ್ಟವ್ವ:— ಅಲ್ಲಾ, ಹೀಂಗ ಸಗೋತ್ರದಾಗ ಆದ ಮದಿವೇನು ಜೇಗು-ಜೆಳಗು ಕಂಡೇ ಇಲ್ಲ? ನಮ್ಮ ಓಣ್ಯಾಗಿಂದs ಉದಾಹರಣೆ ಅದ. ದೂರ್ಯಾಕ ಹೋಗಬೇಕು?

ತಿರು:— ಇದು ನೋಡು, ಅವರು ಕುತ್ತು ಕಿಂವ್ಯಾಗ ಇದ್ದಾರಂತ, ನಾವು ಮೂಗಿನಾಗ ಇಡೋಣೋ ಏನು? ಹೋಗಲಿ, ನಾಡಿ ಯಾವುದಂಬೋದsರೆ ಕೇಳೀಯೇನು, ನಾರ್ಯಾ?

ನಾರ್ಯಾ:— ಹುಂ.

ತಿರು:— ಯಾವುದಂತ? ಅದsರೆ ಭಿನ್ನಾಗ್ತದೋ?

ನಾರ್ಯಾ:— ಇಲ್ಲ!

ತಿರು:— ಏನು, ಅದೂ ಏಕನಾಡೇ? (ಅತ್ಯಂತ ಕೆರಳಿ, ದನಿ ಏರಿಸಿ) ಏನs ಸಾಕಿನ್ನ, ನಾ ಇರೋದಿಲ್ಲ, ನನ್ನ ಕಟಿಗೀ ಕಳಿಸು ಸ್ಮಶಾನಕ್ಕೀಗ! ನಾ ಹೊಂಟೆ. ನನ್ನ ಉತ್ತರಕ್ರಿಯಾ ನೀ ಮಾಡದಿದ್ದರೂ ನನ್ನಡ್ಡೀ ಇಲ್ಲ. ನಾ ಹೊಂಟೆ, ನಾ ಹೊಂಟೆ ಅಂದೆ ಸ್ಮಶಾನಕ್ಕ! ನನಗ ಟಾಂಗಾ ತರಿಸು.... (ಮಂಚದ ಮೇಲೆಯೇ ಜಿಗಿಜಿಗಿದು ಬೀಳುವನು.)

ನಾರ್ಯಾ:— (ಅಷ್ಟೇ ಶಾಂತಧ್ವನಿಯಲ್ಲಿ) ಅಲ್ಲಪಾ, ನೀ ಟಾಂಗಾದಾಗ ಸ್ಮಶಾನಕ್ಕ ಹೋಗಾಂವೇನು?

ತಿರು:— ಹೌದು. ನಾ ಹೋಂಟೆ, ನನಗ ಜೀವ ಬ್ಯಾಡಾಗೇದ!

ಪುಟ್ಟವ್ವ:— ಅಯ್ಯ, ಯಾಕ ಹೀಂಗ ತಲ್ಯಾಗ ಬೂದೀ ಹಾಕ್ಕೋತೀರಿ?

ತಿರು:— ನಾ ಹಾಕ್ಕೊಂಬೋದಿಲ್ಲ; ನೀವಿಬ್ಬರೂ ಹಾಕಲಿಕ್ಕೆ ನಿಂತೀರಿ! ತಾಯಿ-ಮಗನ ಮಸಲತ್ತು! ಆ ನಾರ್ಯಾ ಏನು ಮಾಡಿದ್ದಾ ಛಂದ ನಿನಗ!

ಪುಟ್ಟವ್ವ:— ಪೂರಾ ಹಕೀಕತ್ತsರೆ ಕೇಳಿಕೊಳ್ರಿ ಒಮ್ಮೆ! ಮಾತಿಗೊಮ್ಮೆ ಗುರ್ ಅಂದ್ರೇನು ಬಂತು?

ತಿರು:– ಇನ್ನ ಕೇಳಿಕೊಂಬೋದು ಉಳದsದೇನು? ಹೇಳೋದು ಕೇಳೋದು ಎಲ್ಲಾ ಮುಗಿದದ! ಕಾಶೀತೀರ್ಥ ತಂದಷ್ಟು ಬಾಯಾಗ ಬಿಡ್ರಿ. ಅಂದ್ರ ಈ ಇಹಲೋಕದ ಯಾತ್ರಾ ಒಮ್ಮೆ ಮುಗಿಸಿಬಿಡ್ತೇನಿ! ಆ ಮ್ಯಾಲ ನಿನ್ನ ಸೊಸಿನ್ನ ಕರಕೊಂಡು ಬಂದು, ಎಲ್ಲಾರೂ ಸೋಸಿಲೆ ಇರ್ರಿ! ನಾ ಅದನ್ನ.... ಈ ಕಣ್ಣಿಲೆನs ನೋಡೋದು ಬ್ಯಾಡ. ಮಂದೀ ಮನ್ಯಾಗ ನಡದದ್ದುವನ್ನ ಕೇಳಿದ್ದೆ. ಈಗ ಪ್ರತ್ಯಕ್ಷ ಮನ್ಯಾಗs ನಡಿಯೋದನ್ನ ನೋಡೋದು ಪಾಲಿಗೆ ಬಂತು. ಹೆಣ್ತಿ ಅಂತ ನೀ ಕೊಟ್ಟ ಸುಖ, ಮಗ ಅಂತ ನಾರ್‍ಯಾ ಕೊಟ್ಟ ಸುಖ, ಉಂಡೂಂಡು ಉಬ್ಬಳಿಕಿ ಬರ್ತಾವ! ಕೆಮ್ಮು ಒತ್ತರಸಿ ಬರ್ತದ. (ಅದನ್ನು ತಡೆಯುತ್ತ) ಸಾಕಿನ್ನ, (ಮತ್ತೆ ಕೆಮ್ಮುತ್ತ) ನನ್ನ ಆಯುಷ್ಯದ ಅಲಾರ್ಮು ಗಂಟೆ ಬಡಕೊಳ್ಳಿಕ್ಕೆ ತೊಡಗಿ ಬಹಳ ದಿನ ಆತು! (ಮತ್ತೆ ಗಟ್ಟಿಯಾಗಿ ಕೆಮ್ಮುತ್ತ) ಇದು ನೋಡು— (ಮತ್ತೆ ಕೆಮ್ಮುತ್ತ) ಇದs ಆ ಗಂಟೆ— ಕೇಳಿಸ್ತದೇನು? ಯಾವಾಗ ಪ್ರಾಣ ಪಟ್ ಅಂತ ಹಾರಿಹೋದೀತು................

ಪುಟ್ಟವ್ವ:– (ಕಾತರಸ್ವರದಲ್ಲಿ) ಸಾಕು ಹೋಗ್ರಿ, ಇಂಥಾದು ಏನಾರೇ ಮಾತಾಡಿ, ನನ್ನ ಕಣ್ಣಿಗೆ ನೀರು ತರಿಸಬ್ಯಾಡ್ರಿ! ನೀವು ಹೋಗಿ ನಾ ಇರಬೇಕು ಅಂತ ನನಗೆಂದಾದರೂ ಅನಿಸೀತs? ಹೀಂಗ ಬಯಸೊ ಆಕಿ ಯಾವ ಚಂಡಾಳಿ ಇದ್ದಿದ್ದಾಳು? (ದುಃಖ ತಡೆಯಲಾರದೆ ಬಿಕ್ಕುವಳು.)

ತಿರು:– (ಹೃದಯ ಕರಗಿದಂತಾಗಿ) ಹೀಂಗ ಅತ್ತs ನಮ್ಮನ್ನ ಗೋಳಿಗೆ ಹಾಕ್ತೀರಿ ನೋಡ್ರಿ.... ನೀವು ಹೆಂಗಸರು!

ಪುಟ್ಟವ್ವ:– (ತುಸು ಸಮಾಧಾನ ತಾಳಿ) ಅಲ್ಲಾ, ನಾನರೆ ಏನು ಮಾಡಬೇಕು ಹೇಳ್ರಿ ಹಂಗಾರ? ಇತ್ಲಾಗ ನಿಮ್ಮನ್ನ ನೋಡಬೇಕೋ, ಅತ್ಲಾಗ ಮಕ್ಕಳ್ನ ನೋಡಬೇಕೋ?

ತಿರು:– (ತಿಳಿವಳಿಕೆ ಬಂದಂತಾಗಿ) ಅದೂ ಖರೆ! ನಾವs ತಲೆತಿರುಕ ನನ್ನ ಮಕ್ಳು! ಹಿಂದs ಮುಂದs ನೋಡದ ಹಂದೀ ಹಾಂಗ ಹೊಂಡತೀವಿ. ಹೋಗಲಿ. ಈ ನಾರ್‍ಯಾ ಇದನ್ನೇನು ಈಗ ತಕ್ಕೊಂಡು ಕೂತಾನ? ಘಳಿಸಾಳಿ ಆಗದೆ ಮದಿವಿ ಅಂದ್ರ! ಕೊಡೋವ್ರಿಗರs ಬುದ್ಧಿ ಬೇಕೋ ಬ್ಯಾಡೋ?

ಪುಟ್ಟವ್ವ:– ಅವರ ಬುದ್ಧೀದು ನಾವ್ಯಾಕ ವಿಚಾರಮಾಡಬೇಕು? ಕೊಡ್ತಾರ

ಮುಗೀತು. ಅವರು ಅಷ್ಟು ವಿಚಾರಮಾಡದೆ ಕೊಡ್ತಾರs? ಇದು ನೋಡ್ರಿ, ನಿಮಗ ಇನ್ನೊಂದು ಮುಖ್ಯ ಮಾತು ಗೊತ್ತಿಲ್ಲ!

ತಿರು:– ಮತ್ತೇನದು?

ಪುಟ್ಟವ್ವ:– ಈ ಕನ್ಯಾನ್ನ ಮಾಡಿಕೊಂತ್ರ ನಮಗ ಫಾಯ್ದೇನs ಅದ! ಅದೆಲ್ಲಿ ನಿಮಗ ಗೊತ್ತದ?

ತಿರು:– ಇದೇನು ತೆಗದಿ ಮತ್ತ?

ಪುಟ್ಟವ್ವ:– ಹೌದು, ಆಕೀ ತಂದೀ ಆಸ್ತಿಯೆಲ್ಲ ನಾರ್ಯಾಗs ಬರ್ತದ! ಹೌದಲ್ಲೋ, ನಾರ್ಯಾ?

ನಾರ್ಯಾ:– ಹುಂ. ಈಗ ಮಗಳ ಹೆಸರ್ಲೆ ಕಾಗದ-ಪತ್ರ ಸಹಿತ ಮಾಡಿಬಿಟ್ಟಾರ. ಮದಿವ್ಯಾದ ಮ್ಯಾಲ ಆಸ್ತಿ ಎಲ್ಲಾ ಆಕೀಗೇ ಬರೋದು!

ತಿರು:– ಹೌದೋ, ಆ ಕನ್ಯಾನ್ನ ನಿನಗs ಕಾಮಣ್ಣಾಗ ಕೊಡ್ತಾರ ಅಂತ ಯಾತರ ಮ್ಯಾಲಿಂದ ?

ನಾರ್ಯಾ:– ಹಾಂಗ ಮಾತು ಆಗ್ಯಾವ !

ತಿರು:– ಅಲ್ಲೀ ತನಕಾ ಬಂದsದೇನು ಈ ಮಸಲತ್ತು ? ಯಾರವು ಮಾತಾಗ್ಯಾವ? ಏನು ?

ನಾರ್ಯಾ:– ನನ್ನವು–ಸುಲೂನವು !

ತಿರು:– ನಿನ್ನ ಸುಲೂ–ವಸೂಲೂ! ಅಲ್ಲೋ ಶತಮೂರ್ಖಾ, ಆ ಉಲ್‌ಕೋಚಿ ಹುಡಿಗಿ ಒಪ್ಪಿದರೇನು ಮಾತು ಮುಗಿದ್ಹಾಂಗಾಕೇನು ? ಮಳ್ಳು ಹುಡುಗಿಯರ ಮಾತೆಲ್ಲಾ ವಚನ ಅಂತ ತಿಳೀತಾರೇನೋ ಮಂಗ್ಯಾ ?

ಪುಟ್ಟವ್ವ:– ಅಯ್ಯs, ಅಷ್ಟು ಧಡ್ಡಿದ್ದಾನೇನು ನಮ್ಮ ನಾರ್ಯಾ ? ಅಂವ ಆ ಹುಡಿಗೀ ಅಪ್ಪನ ಕಡಿಂದನs ವಚನಾ ತಗೊಂಡು ಬಂದಾನ !

ತಿರು:– ಹೌದೇನೊ ?

ನಾರ್ಯಾ:– ಹುಂ !

ತಿರು:– ಎಷ್ಟದ ಅಂತ ಆಸ್ತಿ ? ಖರೇನಂತ್ರೂ ಅದನೋ ? ಏನು ಕಾಗದದ ಮ್ಯಾಲ ಬರೇ ಡ್ರಾಯಿಂಗ್ ತೆಗದು ತೋರಿಸ್ಯಾರೊ ?

ನಾರ್ಯಾ:– ಡ್ರಾಯಿಂಗ್ ಯಾಕ ? ಊರಾಗ ಎರಡು ಮನಿ ಅವ. ಮ್ಯಾಲ ಹತ್ತು ಸಾವಿರ ರೂಪಾಯಿ ಬ್ಯಾಂಕಿನೊಳಗದ. ಎಲ್ಲಾ ಆ ಹುಡಿಗ್ಗೇ ಬರೋದು !

ತಿರು:– ನೀವು ಹೇಳೋದೆಲ್ಲಾ ಖರೇನs ಇದ್ರ, ಇದೆಲ್ಲಾ ಠೀಕ್ ಆತು. ಆದ್ರ ಸಗೋತ್ರದ್ದೇನು ಮಾಡೋದು ?

ನಾರ್‍ಯಾ:– ಹುಡಿಗಿನ್ನ ಸೋದರತ್ತಿಗೆ ದತ್ತಕ ಮಾಡ್ತಾರಂತ ! ಅದನ್ನೂ ವಿಚಾರ ಮಾಡ್ಯಾರ.

ತಿರು:– ಆ ಸೋದರತ್ತಿ ಯಾರು ? ಸ್ಮಾರ್ತರೋ ವೈಷ್ಣವರೊ ? ಇನ್ನೇನು– ಯಾರಿದ್ದರೂ ನಡೀತದ ಬಿಡು !

ಪುಟ್ಟವ್ವ:– ಇಲ್ಲ, ಅವರೂ ವೈಷ್ಣವರs !

ತಿರು:– ಹಂಗಾರ ಎಲ್ಲಾನೂ ಹೊಂದತದ ಅಂದ್ಹಾಂಗಾತು !

ನಾರ್‍ಯಾ:– ಹುಂ.

ತಿರು:– (ಆನಂದಿತನಾಗಿ) ಅಡ್ಡಿಯಿಲ್ಲ, ಅಡ್ಡಿಯಿಲ್ಲ. ಈ ಮಾತೆಲ್ಲಾ ಮೊದಲs ಹೇಳಬಾರದೇನೋ ಮುಠ್ಠಾಳಾ ! ನಾ ಎಲ್ಲಿ ಇಷ್ಟು ತಲೀ ಕೆಡಿಸಿ ಕೋತಿದ್ದೆ !

ಪುಟ್ಟವ್ವ:– ಈ ಎಲ್ಲಾದಕ್ಕಿಂತಾ ಇನ್ನೂ ಒಂದು ಹೆಚ್ಚಿನ ಮಾತದ ! ಅದೆಲ್ಲಿ ನಿಮಗ ಗೊತ್ತದ ?

ತಿರು:– ಅದೇನದು ಮತ್ತ ?

ಪುಟ್ಟವ್ವ:– ಈ ಕನ್ಯಾದ ಅಪ್ಪನs ಅಂತ, ನಿಮ್ಮ ನೌಕರೀ ಹುಕುಮು ರದ್ದುಮಾಡಿದ್ದು !

ತಿರು:– ಹೌದೇನೋ ನಾರ್‍ಯಾ ?

ನಾರ್‍ಯಾ:– ಹುಂ. ಅವರs ತಮ್ಮ ಬಾಯಿಲೆ ಹೇಳಿದರು ! ಜಿ. ವಿ. ಮುತಾಲಿಕ ಅಂದ್ರ ಅವರs !

ತಿರು:– ಯಾರು ? ಜಿ. ವಿ. ಮುತಾಲಿಕ ಅಂದ್ರ ಈ ಗುರ್‍ರಾಯರs ಏನು ?

ನಾರ್‍ಯಾ:– ಹುಂ !

ತಿರು:– ಎಲಾ ಮುಂಡೇಗಂಡಾ ! ನಾರ್‍ಯಾ, ಇನ್ನ ಸಾಕು, ನನಗ ಹೇಳs ಬ್ಯಾಡ. ನನಗ ಹೇಳs ಬ್ಯಾಡ ಅಂದೆ. ಅವನ ಮಗಳ್ನ ಮಾಡಿಕೊಂಡು, ಆ ಹಿಂದಿನ ಸೇಡು ತೀರಿಸೇಬಿಡೋದು! ಅಂತೂ ನನ್ನ ಹೊಟ್ಟೀಲಿ ಹುಟ್ಟಿದ್ದಕ್ಕೂ ಸಾರ್ಥಕಮಾಡಿದಿ, ಮಗನ! (ಹರ್ಷಿತನಾಗಿ) ಆಂ, ಆಂ, ಹ್ಯಾಂಗಿದ್ದಾನs ನಮ್ಮ ನಾರ್‍ಯಾ ? ಹಾಹವ್ವಾರೆ ಮಗನ !

ಪುಟ್ಟವ್ವ:– ನಾ ಮೊದಲs ಹೇಳಲಿಲ್ಲೇನು !

ತಿರು:– ಏನು ಹೇಳಿದಿ? ನಿನಗ, ಮೊದಲು ಯಾವುದು ಹೇಳಬೇಕು, ಹಿಂದಾಗಡೆ ಯಾವುದು ಹೇಳಬೇಕು, ತಿಳಿಯೋದs ಇಲ್ಲ. ಆದದ್ದಾತು. ನಾರ್‍ಯಾ! ಆ ಹುಡಿಗಿನ್ನ ಎಂದು ತಂದು ತೋರಿಸ್ತೀ ನನಗ?

ಪುಟ್ಟವ್ವ:– ಈಗ ತೋರಿಸಲಿಕ್ಕೆ ಆಕಿನ್ನ ತಂದsಬಿಟ್ಟಾನ; ಒಳಗ ಕೂಡಿಸಿ ಬಂದೀನಿ.

ತಿರು:– ವಾಹವ್ವಾರೆ ಮಕ್ಳ! ಏನು ತಂಟಾರೀ ಇಟ್ಟೀರೋ? ಆಗಲಿ ನಡೀರಿ! ಸೊಸೀನೂ ಬರ್‍ತಾಳ, ಸಂಪತ್ತೂ ಬರ್‍ತsದ! ಏನs ಏ, ಮೊದಲು ಫೇಡೆ ತರಿಸು, ಫೇಡೆ ಕೈಯಾಗಿಟ್ಟs ಸೊಸಿನ್ನ ನೋಡೋದು!

ಪುಟ್ಟವ್ವ:– ನಾರ್‍ಯಾ, ಲಗು ಫೇಡೆ ತಗೊಂಡು ಬಾರಪಾ!

ನಾರ್‍ಯಾ:– ಅವ್ವಾ, ಅದನ್ನೂ ತಂದsಬಿಟ್ಟೇನಿ! ಮತ್ತ ಅಪ್ಪಗ್ಯಾಕ ಒಳಗ ಹೋಗಿ ನೋಡೋ ಧಾವತಿ? ಸುಲೂನ್ನ ಹೊರಗs ಕರಕೊಂಡು ಬರ್‍ತೀನಿ.

ಪುಟ್ಟವ್ವ:– ಹಾಂಗs ಮಾಡು! (ನಾರ್‍ಯಾ ಒಳಗೆ ಹೋಗುತ್ತಾನೆ.) ಹುಡಿಗಿನ್ನ ನೋಡಿದ್ರ ಲಕ್ಷ್ಮೀದೇವೀನs! ಆದ್ರ .... (ತಡವರಿಸಿ) .... ಒಂದು ಕಾಲು ತುಸು ಡೊಂಕದ!

ತಿರು:– ಹಾಂ, ತಿಳೀತು ಬಿಡು! ಅಂದಲ್ಲೇ ನಾರ್‍ಯಾಗ ಕೊಡ್ಲಿಕ್ಕೆ ತಯಾರಾಗ್ಯಾರ! (ಮತ್ತೆ ಸಮಾಧಾನ.) ಆತು, ಲಕ್ಷ್ಮೀ ಹೆಳವಿದ್ದಾಳ ಅಂತ ಮ್ಯಾಲ, ನಮ್ಮ ಮನ್ಯಾಗs ಕಾಲು ಮುರಕೊಂಡು ಬಿದ್ದಿರ್‍ತಾಳ ಅಂಥಾಂಗಾತು.

[ನಾರ್‍ಯಾ ಸುಲೂನನ್ನು ಕರೆದುಕೊಂಡು ಬರುತ್ತಾನೆ. ಆಕೆ ಕುಂಟುತ್ತ ಬರುತ್ತಾಳೆ; ಮತ್ತು ತಿರುಕಪ್ಪನಿಗೆ ನಮಸ್ಕರಿಸುತ್ತಾಳೆ.]

ತಿರು:– "ಸೌಭಾಗ್ಯವತಿಯಾಗು." ನಾರ್‍ಯಾ, ಫೇಡೆ ತಾ.

[ನಾರ್‍ಯಾ ಫೇಡೆಯ ಪೊಟ್ಟಣ ಕೈಯಲ್ಲಿ ಇಡುತ್ತಾನೆ. ಅದನ್ನು ಸುಲೂನ ಕೈಯಲ್ಲಿ ಕೊಡುವಾಗ]

(ತೆರೆ ಬೀಳುವುದು.)

ಸಂತಾನಲಕ್ಷ್ಮಿ

★

ಪಾತ್ರಗಳು :

ಗಜಾ	....	....	....	ಗಂಡ
ಹೇಮಾ	....	....	....	ಹೆಂಡತಿ
ಶಕು	....	....	....	ಮಗಳು
ಲಕು	....	....	....	ಮಗ
ಮಾಧೂಕಾಕಾ	....	....		ಗಜಾನ ತಂದೆಯ ಮಿತ್ರರು

[ಹೇಮಾ ನಡುಮನೆಯಲ್ಲಿ ಜಮಖಾನೆಯ ಮೇಲೆ ಕುಳಿತು, ಮಕ್ಕಳ ಹೊಸ ಬಟ್ಟೆಗಳನ್ನು ಒಂದೊಂದೆಯಾಗಿ ಬಿಚ್ಚಿ, ಮೇಲೆ ಕೆಳಗೆ ಮಾಡಿ ನೋಡುತ್ತಿದ್ದಾಳೆ. ಗಜಾ ಕುರ್ಚಿಯ ಮೇಲೆ ಕುಳಿತು ಕಾಗದ ಬರೆಯುತ್ತಿದ್ದಾನೆ. ಅವನ ಮೈಯಲ್ಲಿ ಜುಬ್ಬ, ದೋತರ. ಹೇಮಾ ಪತ್ತಲ ಉಟ್ಟು ಬ್ಲೌಜನ್ನು ತೊಟ್ಟಿದ್ದಾಳೆ. ಕಿವಿಯಲ್ಲಿ ಲೋಲಕು, ಕೈಯಲ್ಲಿ ಒಂದೊಂದೇ ಬಂಗಾರದ ಬಳೆ, ಎಡಗೈಯಲ್ಲಿ ಬಂಗಾರದ ಗಡಿಯಾರ ಇದ್ದು, ಬೆಡಗಿನ ಹೆಣ್ಣಾಗಿ ತೋರುತ್ತಾಳೆ. ಗಜಾನ ವಯಸ್ಸು ಸುಮಾರು ೩೫, ಹೇಮೂನ ವಯಸ್ಸು ೨೮—೩೦. ಶಕೂಗೆ ೬ ವರ್ಷ, ಲಕೂಗೆ ೩ ವರ್ಷ. ಎರಡೂ ಮಕ್ಕಳು ಹೊರಗೆ ಅಂಗಳದಲ್ಲಿ ಆಡುತ್ತಿವೆ. ಅವರ ದನಿ ಆಗಾಗ್ಗೆ ಕೇಳಬರುತ್ತದೆ. ಹೊತ್ತು ಸಾಯಂಕಾಲ ೫ ಗಂಟೆ.]

ಹೇಮಾ:— (ಮೂಗು ಮುರಿದು, ಗಂಡನ ಕಡೆಗೆ ನೋಡುತ್ತ) ಛೆ, ಒಂದೂ ನೆಟ್ಟಗಿಲ್ಲ. ಇಬ್ಬರಿಗೂ ಹೊಸಾ ಅರಿವೆ ತರಲಿಕ್ಕೇಬೇಕು. (ಒಂದೊಂದೇ ಬಟ್ಟೆಯನ್ನು ಮಡಿಕೆಹಾಕಿ ಇಡುವಳು.)

ಗಜಾ:— (ಬರೆಯುವುದರಲ್ಲಿ ತೊಡಗಿರುತ್ತಾನೆ. ಉತ್ತರ ಕೊಡುವುದಿಲ್ಲ.)

ಹೇಮಾ:— ನಾಳೆ ಬೆಳಗಾದ್ರ ಲಕು–ಶಕೂರ ಹುಟ್ಟಿದ ಹಬ್ಬ. ಏನಂತೀರಿ ?

ಗಜಾ:— ಊಂ. (ಬರೆಯುವುದರಲ್ಲಿ ತೊಡಗಿದವನು, ಕತ್ತು ಮೇಲಕ್ಕೆತ್ತಿ ಹೆಂಡತಿಯ

ಕಡೆಗೆ ನೋಡದೆ ಹಾಗೇ ಮುಂದುವರಿಸುತ್ತಾನೆ.)

ಹೇಮಾ:–(ಬೇಸರದ ದನಿಯಲ್ಲಿ) ಮುಗೀತೋ ಇಲ್ಲೋ ನಿಮ್ಮ ಪತ್ರಲೇಖನ? ಯಾವುದೋ ಸ್ನೇಹಿತನಿಗೆ ಬರೆಯೋದು. ಅದೇನು ಪರಸ್ಪರರಿಗೆ ಕದ್ದು ಬರೆಯುವ ಪ್ರೇಮಪತ್ರ ಅಲ್ಲs ಬ್ಯಾರೆ! ಎಷ್ಟು ತಲ್ಲೀನರಾಗಿ ಕೂತೀರಿ! ಬರಿಯೋದಿರ್ಲಿ; ನೋಡ್‌ಬರ್ರಿಲ್ಲಿ.

ಗಜಾ:– (ನಗೆಯನ್ನು ಎಳೆದುತಂದು, ಎದ್ದು ಬರುತ್ತಾನೆ. ಹೇಮಾಳ ಎದುರಿಗೆ ನಿಂತು) ಉಂ, ಏನಂತೀ? ಆಜ್ಞಾ ಆಗಲಿ.

ಹೇಮಾ:– ಎಲ್ಲಾ ಅರಿವೆ ನೋಡಿದೆ. ಹುಟ್ಟಿದ ಹಬ್ಬಕ್ಕ ತೊಡಿಸಲಿಕ್ಕೆ ಒಂದೂ ಬರೋ ಹಾಂಗಿಲ್ಲ. ಎಲ್ಲಾ ಹಳೇವs ಅನಿಸ್ತಾವ.

ಗಜಾ:– ಉಂ, ಇದ್ದದರಾಗs ಒಳ್ಳೇದೊಂದನ್ನಾರಿಸಿ, ಇಸ್ತ್ರಿಮಾಡಿಸಿ ಉಪಯೋಗಿಸಿದ್ರ ನಡೀಲಿಕ್ಕಿಲ್ಲೇನು? (ಬಾಗಿ ಒಂದೆರಡು ಬಟ್ಟೆಗಳನ್ನು ಎತ್ತಿಕೊಂಡು ನೋಡುತ್ತಾನೆ.)

ಹೇಮಾ:– ಅಪರೂಪಧಾಂಗ ಎರಡು ಮಕ್ಕಳವ. ಅವರ ಹುಟ್ಟಿದ ದಿವಸಕ್ಕ ಇಸ್ತ್ರೀ ಅರಿವೆ? ಯಾರಾರೆ ನಕ್ಕಾರು! ಹುಟ್ಟಿದ್ದಿನ ಮಕ್ಕಳಿಗೆ ಹೊಸದೇನಾರೆ ಉಡಿಸಬೇಕು, ತೊಡಿಸಬೇಕು. ವಸ್ತ ಒಡವೆ ಇಲ್ಲದಿದ್ರ ಬಿಡ್ರಿ, ಒಂದೆರಡು ಅರಿವ್ಯಾರs ಬ್ಯಾಡs?

ಗಜಾ:– ಶಕೂಗ ಇದ್ದದ್ರಾಗs ನಡೀತದ. ಲಕೂಗಷ್ಟು ಏನಾರೆ ತರೋಣು. ಅಂವ ಆಕೀಗಿಂತ ೩ ವರ್ಷಕ್ಕ ಚಿಕ್ಕವ ಇದ್ದಾನ. ಇಬ್ಬರಿಗೂ ಹೊಸಾ ಅರಿವೇ ಖರೀದಿ ಅಂದ್ರ ದುಬಾರಿ ಬಡಕೋತದ.

ಹೇಮಾ:– ಲಕೂಗ ತಂದು ಶಕೂಗ ಬಿಟ್ರ ಆಕಿ ಕೇಳ್ತಾಳೇನು? ಇಷ್ಟಾಗಿ ಆಕೀದೂ ಹುಟ್ಟಿದ ದಿವಸ, ಇವನದೂ ಹುಟ್ಟಿದ ದಿವಸ.

ಗಜಾ:– ಅದs. ಇಬ್ಬರೂ ಒಂದೊಂದೇ ದಿವಸದ ಅಂತರದಿಂದ ಜಗತ್ತಿನೊಳಗ ಬಂದಾರ. ಅಂತs ಪೀಕಲಾಟ!

ಹೇಮಾ:– ಹಾಂಗ ಬಂದಾರಂತs ಅವರ ಹುಟ್ಟಿದ ಹಬ್ಬ ಒಂದರಾಗೊಂದು ಆಗಿಹೋಗ್ತದ. ಹುಡುಗರು ಸಣ್ಣವರ ಅಂತ ಇವೆಲ್ಲ ಸಂಭ್ರಮ ಮಾಡೋದು. ನಾಳೆ.... ನಿಮಗs.... ಇನ್ನೊಂದೆರಡು ಆದುವು ಅಂದ್ರ ....

ಗಜಾ:– ಉಂಹುಂ! ಅದನ್ನ ಮರ್ತsಬಿಡೋದು! ಇದ್ದ ಎರಡನ್ನs ಛಂದಾಗಿ ಬೆಳಸೋಣ, ಒಳ್ಳೇ ಶಿಕ್ಷಣ ಕೊಡಿಸಿ ಉತ್ತಮ ನಾಗರಿಕರನ್ನಾಗಿ

ಮಾಡೋಣ. ಲಕು ಹುಟ್ಟಿದ ವಂಶಕ್ಕ ಕೀರ್ತಿ ತರಲಿ; ಶಕು ಕೊಟ್ಟ ಮನಿ ಉದ್ಧಾರಮಾಡಲಿ. ಈ ಹೆತ್ತು ಹಡಿಯೋ ಹಂದಿತನ ಬ್ಯಾಡ. ಮುತ್ತಿನ್ಹಾಂಗ ಎರಡು ಹಡದೀವಿ. ಇನ್ನ ಇದರಿಂದ ಮುಕ್ತರಾಗೋ ಜಾಣತನ ಕಲಿಯೋಣ!

ಹೇಮಾ:– ಆಹಾ! ಏನು ಜಾಣತನ! ಎರಡು ಹಡದ್ರ ಮುತ್ತು, ಮೂರನೇದಾದ್ರ ಮುತ್ತು ಹೋಗಿ ಮತ್ತೇನಾದರೂ ಆಗ್ತsದೇನು? ಹಡೆದ ಮಕ್ಕಳೆಲ್ಲಾ ಹಡೆದವರಿಗೆ ಮುತ್ತs!

ಗಜಾ:– ಅವು ಎರಡಕ್ಕಿಂತ ಹೆಚ್ಚಾದುವು ಅಂದ್ರ ಖರೆ ಮುತ್ತು ಹೋಗಿ ನೀರು ಮುತ್ತಾಗ್ತಾವ! ಆ ವ್ಯಾಲ ಆ ನೀರುಮುತ್ತು ನಮ್ಮ ಕಣ್ಣಿಗೆ ನೀರು ತರಿಸ್ತಾವ! ತಿಳೀತೇನು?

ಹೇಮಾ:– ಅದನ್ನ ಯಾರು ಕಂಡಾರ? ಆದ ಒಬ್ಬನೇ ಮಗ ಆದರ್ಶ ಪುತ್ರ ಅನಿಸಿಕೊಂಡವ ಜವಾಹರಲಾಲೊಬ್ಬನೇ. ಅದೇನು ಮೋತಿಲಾಲರ ಕರ್ಮಮುತ್ತು ಅಲ್ಲ; ದೈವದಾಟ! ಸುಭಾಸ್ ತಾಯಿತಂದೆಗೆ ಮೊದಲನೇ ಮಗನೇ ಇದ್ದಿದ್ದಿಲ್ಲ! ಹುಟ್ಟಿದ ಮಕ್ಕಳೊಳಗ ಯಾವ ಮಕ್ಕಳು ಏನಾದಾರು ಯಾರು ಕಂಡಾರ! ಹಡೆಯೋ ಹಾಂಗ ಹಡೆಯೋದು. ಇಷ್ಟಕ್ಕs ಸಾಕು ಅನಲಿಕ್ಕೆ ನಮ್ಮ ಶಕು–ಸರೋಜನಿ ನ್ಯಾಡು, ಲಕು–ಲಜಪತರಾಯ್, ಆಗ್ತಾರಂತ ತಿಳಿದೀರೇನು ನೀವು?

ಗಜಾ:– ಆದ್ರ ಯಾರಿಗೆ ಬ್ಯಾಡ? ನನಗೂ ಬೇಕು, ನಿನಗೂ ಬೇಕು– ನಮ್ಮ ದೇಶಕ್ಕೂ ಬೇಕು. ಅಷ್ಟು ದೊಡ್ಡವರಾಗದಿದ್ದರೂ ಒಳ್ಳೇ ನಾಗರಿಕರಾದರೂ ಸಾಕು.

ಹೇಮಾ:– ಅಷ್ಟಾದ್ರೂ ಆಗ್ತಾರಂತ ಯಾತರ ವ್ಯಾಲಿಂದ?

ಗಜಾ:– ಇದೇನು ಅಶಕ್ಯಕೋಟಿಯೊಳಗಿನ ಆದರ್ಶ ಅಲ್ಲ, ಸಾಮಾನ್ಯ ಮಾತು.

ಹೇಮಾ:– ಇವತ್ತು ಸಾಮಾನ್ಯ ಮಾತs ಅಸಾಮಾನ್ಯ ಆಗಿ ಕೂತಾವ! ನೋಡೋದಿಲ್ಲೇನು ನೀವು? ಮೂವತ್ತೈದು ಕೋಟಿಯೊಳಗಿನ ಮೂವತ್ತೈದು ಜನರಾದರೂ ಉತ್ತಮ ನಾಗರಿಕರು ಅನಿಸಿಕೊಳ್ಳೋ ಯೋಗ್ಯರು ಸಿಗ್ತಾರೇನು?

ಗಜಾ:– ಅಂಥಾ ಯೋಗ್ಯರು ಇರದಿದ್ದರ ನಮ್ಮ ಸಂಸ್ಕೃತಿ ಉಳೀತಿತ್ತs, ಸಮಾಜ ಬಾಳ್ತಿತ್ತs, ರಾಜ್ಯ ಆಳ್ತಿತ್ತs?

ಹೇಮಾ:– ಆಳೋದಿಲ್ಲ, ಅಳ್ತದ. ಇದು ನೋಡ್ರಿ, ಏನs ಆದ್ರೂ ಮಕ್ಕಳು ಅಂಬೋದೊಂದು ಲೆಕ್ಕೀಮುಷ್ಟಿ!

ಗಜಾ:– ಹೌದು. ಅಂತs ಮುಷ್ಟಿ ಅಂದ್ರ ಹಿಡಿತದೊಳಗಿರಬೇಕು ಅಂಬೋದು! ಸರಕಾರದವರು ಎಲ್ಲಾದ್ರ ವ್ಯಾಲೂ ಕಂಟ್ರೋಲ್ ಹಾಕಲಿಕ್ಕೆ ಕಾರಣೇನು ಮತ್ತ? ನಾವು ಬರ್ಥ್ ಕಂಟ್ರೋಲ್ ಮಾಡ ಲಿಲ್ಲ ಅಂತ! ಬರ್ಥ್ ಕಂಟ್ರೋಲ್ ಮಾಡಿರಿ ಅಂತ ಜವಾಹರಲಾಲರs ಹೇಳ್ಯಾರ!

ಹೇಮಾ:– ಜವಾಹರಲಾಲರು ಹಾಂಗ ಮಾತಾಡ್ತಾರ ಅಂತ ನೀವೂ ಹಾಂಗs ಮಾತಾಡಬ್ಯಾಡ್ರಿ! ಹೇಣ್ತಿನ್ನ ಕಳಕೊಂಡು ಕೂತಿರಾ ಸನ್ಯಾಸಿ ಹಾಂಗs! ಆಚಾರ ಹೇಳ್ಳಿಕ್ಕೇನು ಬಂತು? ಅಲ್ಲs, ಎರಡು ಮಕ್ಕಳು ಸಾಕು ಅಂತ ಹೇಳsವರು ನೀವು ಯಾರು?

ಗಜಾ:– ಯಾರು ಅಂದ್ರ? ನಾವು ಗಂಡ ಹೆಂಡತಿ! ನಾವs ಅದನ್ನ ನಿರ್ಧರಿಸ ದಿದ್ರ ಮತ್ಯಾರು ಅದನ್ನ ನಿರ್ಧರಿಸಬೇಕು? ಇಂಥ ವಿಷಯದೊಳಗ ಮಂದೀಕಿಂತ ನಾವs ನಮುಗ ಹೇಳಿಕೋಬೇಕು.

ಹೇಮಾ:– ಅಂಗೈಯೊಳಗಿನ ಗೆರೀ ಹೇಳ್ಳಿಕ್ಕೆ ಬರೋದಿಲ್ಲ; ಹೊಟ್ಟೀಯೊಳಗಿನ ಮಕ್ಕಳ್ನ ಹೇಳ್ತಾರಂತ!

ಗಜಾ:– ಇದು ನೋಡು. ಇರೋ ಮಕ್ಕ ವಿಚಾರ ಮೊದಲು ಮಾಡೋಣ. ಆ ಮ್ಯಾಲ ಬರೋ ಮಕ್ಕ ವಿಚಾರ! ಈ ವಾದ ಇರಲಿ. ನನ್ನ ಪತ್ರ ಅಲ್ಲಿ ಅರ್ಧಕ್ಕs ಕೂತಿತು. ಬರೆಯೋದು ಬಿಡಿಸಿ ನನ್ನ ಕರೆದಿ. ಅರಿವೀ ವಿಚಾರ ಏನು ಮಾಡೋಣಂತಿ? ಹೊಸವು ತರಲಿಕ್ಕೇ ಬೇಕೇನು?

ಹೇಮಾ:– ಹೌದು, ಬೇಕು; ತರಲಿಕ್ಕೇ ಬೇಕು. ಇಸ್ತ್ರೀ ಅರಿವೀ ಮ್ಯಾಲ ನಾ ಏನು ಮಕ್ಕಳ ಹುಟ್ಟಿದ ಹಬ್ಬ ಮಾಡೋ ಆಕಿ ಅಲ್ಲ.

ಗಜಾ:– ಹತ್ತು ಮಕ್ಕಳಾದ ಮ್ಯಾಲೂ ಹೀಂಗs ಹಟ ಹಿಡಿದ್ರ ನನ್ನ ಗತಿ ಏನು?

ಹೇಮಾ:– ಸದ್ಯಕ್ಕಂತೂ ಆಗಿಲ್ಲಲ್ಲ! ಆದ ಮ್ಯಾಲ ನೋಡೋಣಂತ.

ಗಜಾ:– ನೋಡೋದು ಗೀಡೋದು ಸುಳ್ಳು. ನಮ್ಮ ಸಂಸಾರ ಎಷ್ಟು ಬೆಳೆ ಯೋದು ಅಂಬೋದ್ರ ನಿರ್ಣಯ ಆಗಲಿಕ್ಕೇ ಬೇಕು. ಅಂದ್ರs ಮುಂದ ಹೊಸಾ ಅರಿವೇ ತರೋ ವಿಚಾರ.

ಹೇಮಾ:— ಆ ನಿರ್ಣಯ ಮೊದಲು ದೇವರs ಮಾಡಿ ಕಳಿಸಿರ್ತಾನ ! ನೀವೇನು ಮಾಡೋದು? ನಿರ್ಣಯನs ಬೇಕಾಗಿದ್ದರ ದೇವರು ಕೊಟ್ಟಷ್ಟು ಆಗಲಿ ಅಂಬೋದs ನಂದೂ ನಿರ್ಣಯ !

ಗಜಾ:— ಅಲ್ಲ, ಇದೇನು ಹೂಡಿದಿ ಇವತ್ತು ?

ಹೇಮಾ:— ಇದು ನೋಡ್ರಿ, ಒಂದs ಕೈಲೆ ಚಪ್ಪಾಳೆ ಆಗ್ತಿರೋದಿಲ್ಲ.

ಗಜಾ:— ಇದು ನನಗ ಮೂರು ವರ್ಷದವನು ಇದ್ದಾಗಿನಿಂದನs ತಿಳಿದದ ! ಮುಂದೇನಂತೀದಿ ?

ಹೇಮಾ:— ತಿಳಿದಿದ್ದರೂ ಇನ್ನೂ ನಿಮಗ ಹೊಳೆದಿಲ್ಲ ಅಂತೀನಿ.

ಗಜಾ:— ಅದರೊಳಗ ಹೊಳೆಯೋ ಅಂಥಾದೇನದ ?

ಹೇಮಾ:— ಇದು ನೋಡ್ರಿ, ನಿಮ್ಹಾಂಗ ನನಗೂ ಮಾತಾಡಲಿಕ್ಕೆ ಬರ್ತsದ.

ಗಜಾ:— ಅದೊಂದs ನಿನಗ ಬರೋದು. ಹೆಂಗುಸರಿಗೆ ಕಾಲೇಜ್ ಶಿಕ್ಷಣದ್ದು ಬ್ಯಾರೆ ಉಪಯೋಗ ಏನದ ಮತ್ತ? ಗಂಡನ ಜೊತೆಗೆ ಮಾತು ಮಾತಿಗೂ ವಾದಹಾಕೋದು !

ಹೇಮಾ:— ಇದರೊಳಗ ವಾದದ ಪ್ರಶ್ನೆ ಏನು ಬಂದದ ? ಮಕ್ಕಳ ಹುಟ್ಟಿದ ಹಬ್ಬಕ್ಕ ಹೊಸಾ ಅರಿವೆ ಬೇಕು ಅಂತ ನಾ ಅಂಬೋದರಾಗ ವಾದಕ್ಕ ಜಾಗಾ ಎಲ್ಲ್ಯದ ?

ಗಜಾ:— ಹುಂ....ನೀ ಅಂದದ್ದಕ್ಕೆಲ್ಲ ನಾ ಕಬೂಲಿ ಕೊಟ್ಟುಕೋತಹೋದ್ರ ವಾದಕ್ಕ ಜಾಗಾ ಉಳಿಯೋದಿಲ್ಲ, ಖರೆ ! ಯಾಕಂದ್ರ ಇದಕ್ಕೆಲ್ಲ ಹಣ ಪೂರೈಸೋದ್ರಾಗ ನಾ ಬದುಕಿ ಉಳಿದ್ರ ವಾದ !

ಹೇಮಾ:— ನಿಮ್ಮ ತಂದೆ ತಾಯಿಗೆ ನೀವು ಎಷ್ಟು ಮಂದಿ ಮಕ್ಕಳು? (ನಗುತ್ತಾಳೆ.)

ಗಜಾ:— ನಿನ್ನ ಕೈಯೊಳಗಿಂದ ನಾ ಪಾರಾಗಿ ಉಳಿದ್ರ ಎಂಟು ಮಂದಿ ! 'ಅಷ್ಟ ಪುತ್ರಾಃ ಸೌಭಾಗ್ಯವತೀ ಭವ' ಅಂತ ಕೊಟ್ಟ ಆಶೀರ್ವಾದ ಖರೆ ಆಗೇದ ನಮ್ಮ ತಾಯಿಗೆ !

ಹೇಮಾ:— ನನಗೂ ಹಾಂಗs ಆಶೀರ್ವಾದ ಮಾಡ್ಯಾರ ಎಲ್ಲಾರೂ! (ಮತ್ತೆ ನಗುತ್ತಾಳೆ.)

ಗಜಾ:— ಹುಂ, ಉಳಿದೆಲ್ಲಾ ಆಶೀರ್ವಾದ ಸುಳ್ಳಾಗ್ತಿದ್ರೂ ಇದು ಒಂದು ಆಶೀರ್ವಾದ ಮಾತ್ರ ಕಲಿಯುಗದಾಗ ಖರೆ ಬರ್ತದ! ಬ್ಯಾಡಾದ್ದು ಖರೆ ಬರ್ತsದ, ಬೇಕಾದ್ದು ಸುಳ್ಳಾಗ್ತದ. ಸಂಪತ್ತು ಬೆಳೀಲಿ ಅಂತ ಕೊಟ್ಟ

ಆಶೀರ್ವಾದ ಎಂದಾದ್ರೂ ಖರೆ ಬಂದsದೇನು? ಹಾಂಗs ದೀರ್ಘಾಯುಷ್ಯ! ಖರೆ ಆಗಬೇಕಾದ ಇವೆರಡೂ ಆಶೀರ್ವಾದ ಸುಳ್ಳಾಗ್ತಾವ; ಮತ್ತ ಸುಳ್ಳಾಗಲಿ ಅಂತ ನಾವು ಅಪೇಕ್ಷಾ ಮಾಡೋ ಆಶೀರ್ವಾದ ಖರೆ ಬರ್ತಾವ!

ಹೇಮಾ:– ಇದು ನೋಡ್ರಿ, 'ಅಷ್ಟ ಪುತ್ರಾಃ ಸೌಭಾಗ್ಯವತೀ ಭವ' ಅಂಬೋ ಆಶೀರ್ವಾದ ನಮಗ ಮಾಡ್ತಾರ; ನಿಮಗ ಗಂಡುಸರಿಗೆ ಬ್ಯಾರೆ ಮಾಡೋದಿಲ್ಲs? ಅಂದಮ್ಯಾಲ, ನೀವ್ಯಾಕ ಅದರ ಬಗ್ಗೆ ತಕರಾರು ಮಾಡಬೇಕು?

ಗಜಾ:– ಹೌದು, ಆಶೀರ್ವಾದ ಪಡೆಯುವವರು ನೀವು, ಮಕ್ಕಳಾದ ಮ್ಯಾಲ ಪಡಿಪಾಟಲು ಪಡುವವರು ನಾವು. ಹೇಮಾ, ನಾ ಗಟ್ಟಿಮುಟ್ ಹೇಳ್ತನಿ– ನೀ ಬೇಕಾದ ಶಿಫ್ಪರಲಾಗ ಒಗದರೂ ನಾ ಏನು ಇದಕ್ಕ ಒಪ್ಪಿಗೆ ಕೊಡs ವಲ್ಲ. ವರ್ಷಕ್ಕೆ ೫೦ ಲಕ್ಷ ಪ್ರಜಾ ನಮ್ಮ ಬಡ ಹಿಂದುಸ್ತಾನದಾಗ ಹೆಚ್ಚಾಗ್ತ ಹೋದ್ರ ನಮ್ಮ ಅನ್ನವಸ್ತ್ರದ ಗತಿಯೇನು? ಇದು ಒಂದು ಕ್ಷೇತ್ರ ಬಿಟ್ರ ಉಳಿದ ಯಾತರಾಗೂ ನಮ್ಮ ಕರ್ತೃತ್ವ ಕಾಣವಲ್ಲದು!

ಹೇಮಾ:– ಉಳಿದದ್ದು ಇದs ಒಂದು ಕ್ಷೇತ್ರ! ಇದರಾಗೂ ಕರ್ತೃತ್ವಹೀನರೂ ಅಂತ ಅನಿಸಿಕೋಬ್ಯಾಡ್ರಿ! (ಮತ್ತೆ ಖೊಳ್ಳನೆ ನಗುತ್ತಾಳೆ. ಗಜಾ ಅವಳ ಈ ನಗೆಯಲ್ಲಿ ತಾನೂ ಒಂದಾಗುತ್ತಾನೆ. ಹೊರಗೆ ಆಡುತ್ತಿರುವ ಮಕ್ಕಳ ನಗೆಯೂ ಕೇಳಬರುತ್ತದೆ)

ಗಜಾ:– (ಕೂಡಲೇ ಗಂಭೀರನಾಗಿ) ಇದೆಲ್ಲಾ ಹರಟಿ ಇರಲಿ, ನನಗ ಆ ಪತ್ರಾ ಬರೀಬೇಕಾಗೇದ. ನಾಳಿಂದೂ ಏನಾರೆ ಮತ್ತ ತರೋದು ಗಿರೋದು ಇದ್ರ ಪ್ಯಾಟ್ಯಾಗೂ ಹೋಗಬೇಕಾಗ್ತದ. ಆದ್ರ.... ನಮ್ಮ ಸಂಸಾರದ್ದು ನಾವು ಈಗಿನಿಂದsನs ಪ್ಲ್ಯಾನ್ ಮಾಡಬೇಕು ಅಂಬೋದನ್ನ ನಾವು ಮರೀಯೋ ಹಾಂಗಿಲ್ಲ. ಇವತ್ತಿನಿಂದ ನಾ ನಿಶ್ಚಯನs ಮಾಡsವಿದ್ದೀನಿ!

ಹೇಮಾ:– ಅಲ್ಲಾ, ಇಷ್ಟ್ಯಾಕ ಇದು ಇವತ್ತ ತಲ್ಯಾಗ ಹೊಕ್ಕದ?

ಗಜಾ:– ಈಗ ಬರೆಯೋ ಪತ್ರ ಯಾರಿಗೆ ಬರೀತೀನಂಬೋದು ಗೊತ್ತದ ಏನು?

ಹೇಮಾ:– ಯಾರಿಗೆ? ನೀವs ಹೇಳ್ರಲಾ?

ಗಜಾ:– ವಿಠ್ಯಾ ಮಾಮಾಗ. ಹೆಂಡತೀದು ೯ನೆ ಬಾಣಂತಿತನ ಆಗಿ ಎನಿಮಿಕ್ ಆಗ್ಯಾಳ, ಔಷಧಕ್ಕ ಹಣ ಹತ್ತಿತ್ತಾಗೇದ, ದುಡ್ಡು ಕಳಿಸು ಅಂತ ಇವತ್ತಿನ ಟಪಾಲಿಗೆ ಅವನ ಪತ್ರ! ಅದಕ್ಕ ಈಗ ಉತ್ತರಾ ಬರೀಲಿಕ್ಕೆ

ಕೂತೀನಿ! (ಮೇಜಿನ ಹತ್ತಿರ ಹೋಗಿ ಮಾನಾನ ಪತ್ರ ತಂದು ಹೇಮಾಳ ಎದುರಿಗೆ ಹಿಡಿಯುತ್ತಾನೆ.)

ಹೇಮಾ:– ಹುಟ್ಟಿದ್ದು ಗಂಡೊ ಹೆಣ್ಣೊ? ಪಾಪ, ಈ ಮೊದಲಿನವು ಎಂಟೂ ಹೆಣ್ಣs ಅವ ಮಹಾರಾಯರಿಗೆ!

ಗಜಾ:– ಅದನ್ನ ಅವ ಬರೆದಿಲ್ಲ ಅಂದವ್ಯಾಲ ಈ ೯ನೇದೂ ಹೆಣ್ಣs ಹುಟ್ಟಿರ ಬೇಕು! ಈಗ ಎನಿಮಿಕ್ ಆದ ಹೆಣ್ತೀನ್ನ ಬದುಕಿಸೋ ಖಟಾಟೋಪ! ಯಾಕ ಅಂದ್ರ.... ಮತ್ತ ಹೆಣ್ಣ ಹಡೀಲಿಕ್ಕೆ! ನಮಸ್ಕಾರ ಈ ಸಂತಾನಲಕ್ಷ್ಮಿಗೆ!

ಹೇಮಾ:– ಹಾಂಗಂದ್ರ, ನಮ್ಮ ಕಾಕಾಗ ೮ ಬರೇ ಗಂಡs ಹುಟ್ಟಿದ್ದವು. ಅಂದ ರೇನು, ಕೆಲವರಿಗೆ ಬರೇ ಗಂಡೇ ಹುಟ್ಟುತಾವ, ಕೆಲವರಿಗೆ ಬರೇ ಹೆಣ್ಣs ಹುಟ್ಟುತಾವ, ಕೆಲವರಿಗೆ ಅವೂ ಇವೂ ಕೂಡೇ ಹುಟ್ಟುತಾವ!

ಗಜಾ:– ಗಂಡs ಹುಟ್ಟಲಿ ಹೆಣ್ಣs ಹುಟ್ಟಲಿ, ಒಟ್ಟು ನಮ್ಮ ಅಳತೆ ಮೀರಿ ಹುಟ್ಟಬಾರದು ಅಂಬೋ ಪೈಕಿ ನಾನು. ಇವತ್ತಿನ ತನಕ ಇದರ ಬಗ್ಗೆ ಮನಸ್ಸು ಹೊಯ್ದಾಡುತಿತ್ತು. ಇವತ್ತು ವಿಶ್ವಾ ಮಾಮಾನ ಕಾಗದ ನೋಡಿ....

ಹೇಮಾ:– ವೈರಾಗ್ಯ ಬಂತೇನು? (ನಗುತ್ತಾಳೆ.)

ಗಜಾ:– ಇದು ನೋಡು, ನಾ ಎಷ್ಟು ಸಹನ ಮಾಡ್ತೀನಿ ಅಂಬೋದನ್ನ ಪರೀಕ್ಷಾ ಮಾಡಬ್ಯಾಡ. ನಾ ಖರೇ ಆವೇಶದಿಂದ ಮಾತಾಡ್ತೀನಿ. ನೀ ಅದನ್ನೆಲ್ಲ ಚಾಷ್ಟಿಗೆ ತಿರುಗಿಸ್ತಾ ಇದ್ದೀ!

ಹೇಮಾ:- ಚಾಷ್ಟಿ ಅಲ್ಲ, ಪ್ರಸೂತಿ ವೈರಾಗ್ಯಧಾಂಗ ಈ ಪತ್ರದ ವೈರಾಗ್ಯಾನೂ ಕಡೆಪೂರೈಸೋದಿಲ್ಲ ಅಂತ ಹೇಳ್ತೀನಿ.

ಗಜಾ:– ನಿನ್ನ ತಲೆ. (ಕೈಯಲ್ಲಿಯ ಮಗುವಿನ ಅಂಗಿಯನ್ನು ಬೀಸಿ ಹೇಮಾಳ ಮೇಲೊಗೆದು, ಸಿಡಿಮಿಸಿಂದ ಬಂದು ಕುಳಿತು ಪತ್ರವನ್ನು ಬರೆಯಲು ತೊಡಗುತ್ತಾನೆ. ಹೇಮಾ ಅವಮಾನಿತಳಾಗಿ ಬಟ್ಟೆಗಳನ್ನೆಲ್ಲ ಟ್ರಂಕಿನಲ್ಲಿ ತುಂಬಿ, ಧಡಾರನೆ ಟ್ರಂಕಿನ ಮುಚ್ಚಳ ಹಾಕುತ್ತಾಳೆ. ಅದನ್ನೆತ್ತಿ ಗೋಡೆಗೆ ಆನಿಸಿ ಇಡುತ್ತಾಳೆ. ಒಳಗೆ ಹೋಗುತ್ತಿರುವಾಗ) ನಿಲ್ಲು. (ಹೇಮಾ ತಿರುಗಿ ನೋಡಿ, ನಿಂತಲ್ಲಿಯೇ ನಿಲ್ಲುತ್ತಾಳೆ.) ನಾಳಿನದೇನು ಮಾಡೋದು ಹಂಗಾರ?

ಹೇಮಾ:– (ಸುಮ್ಮಗೆ ನಿಲ್ಲುತ್ತಾಳೆ.)

ಗಜಾ:– ಮಕ್ಕಳಿಗೆ ಹೊಸ ಅರಿವಿ ತರೋದೋ ಇಸ್ತ್ರೀ ವ್ಯಾಲ ಬಗೆಹರಿ ಸೋದೋ?

ಹೇಮಾ:- ನನಗ ಗೊತ್ತಿಲ್ಲ, ಬೇಕಾದ್ದು ಮಾಡ್ರಿ.

ಗಜಾ:– ಇಸ್ತ್ರೀ ಮಾಡಿಸಿ ತರ್ತೀನಿ—

ಹೇಮಾ:– ಅದೂ ಬೇಕಾಗಿಲ್ಲ. ಹುಟ್ಟದ ಹಬ್ಬಾದರೂ ಯಾತಕ್ಕ ಮಾಡಬೇಕು? ನಾಳೆ ಅದನ್ನೂ ಮಾಡೋದು ಬ್ಯಾಡ.

ಗಜಾ:– ನಾ ಆಡೋ ಮಾತು ನಮ್ಮ ಜೀವನದೊಳಗ ಎಷ್ಟು ಮಹತ್ವದ್ದದ ಅಂಬೋದು ನಿನಗ ತಿಳೀತದ ಹೌದಲ್ಲೊ ?

ಹೇಮಾ:- ನನಗೇನೂ ತಿಳಿಯೂದಿಲ್ಲ. ಎಷ್ಟು ಕಲಿತರೂ ಹೆಂಗುಸರ ಬುದ್ಧಿ ಮೊಣಕಾಲ್ಕೆಳಗ! ಗಂಡುಸರು ಇಟ್ಟಾಂಗ ಇರೋದು, ಅಂಥಾಂಗ ಆಡಿಸಿ ಕೊಂಬೋದು ನಮ್ಮ ಹಣೆಬರಹದಾಗs ಬರದಾನ ಬ್ರಮ್ಹ! (ಎರಡು ಹೆಜ್ಜೆ ಮುಂದಿಟ್ಟು ನಡೆಯುತ್ತಿರುವಾಗ)

ಗಜಾ:- ಇಲ್ಲಿ ಬಾ ಇಲ್ಲಿ.

ಹೇಮಾ:– (ತುಂಬ ಸಿಟ್ಟಿನ ಅನಿರ್ಭಾವವನ್ನು ತೋರಿ) ನನಗ ಈ ಮಾತೆಲ್ಲ ಬೇಕಾಗಿಲ್ಲ. ಸಂಜೀ ಅಡಿಗೆ ಹೊತ್ತಾತು. ನಾ ಒಳಗ ಹೋಗ್ತೀನಿ. (ಮತ್ತೆ ಹೋಗಲು ಹೆಜ್ಜೆ ಮುಂದಿಟ್ಟಾಗ)

ಗಜಾ:– (ತಾನೇ ಎದ್ದು ಬಂದು) ನಮ್ಮ ಮಕ್ಕಳ್ನ ನಾವು ಸುಖವಾಗಿ ಬೆಳೆಸ ಬೇಕಂತಿಯೋ ಇಲ್ಲೊ?

ಹೇಮಾ:– ಬೆಳೆಸ್ರಲ್ಲ, ಬ್ಯಾಡ್ಯಾರಂತಾರ?

ಗಜಾ:– ಅವರಿಗೆ ಒಳ್ಳೇ ಶಿಕ್ಷಣ ಕೊಡಿಸಬೇಕಂತಿಯೋ ಇಲ್ಲೊ?

ಹೇಮಾ:– ಕೊಡಿಸ್ರಲ್ಲ, ಅದು ತಪ್ಪು ಅಂತ ನಾ ಎಲ್ಲಿ ಅಂತೀನೀ?

ಗಜಾ:– ಹಾಂಗಾದ್ರ, ಇದಕ್ಕೆಲ್ಲ ನಮಗ ಪ್ಲ್ಯಾನ್ ಬೇಕಂತಿಯೋ ಇಲ್ಲೊ?

ಹೇಮಾ:– ಮನಿ ಮಾಡೋ ಮೊದಲು ಪ್ಲ್ಯಾನ್ ಬೇಕಾಗ್ತದ; ಮಾಡಿದ ವ್ಯಾಲ ಬೇಕಾಗೋದಿಲ್ಲ.

ಗಜಾ:– ಇದು ನೋಡು, ನನ್ನ ಜಾಣತನದೊಳಗ ನಿನಗ ವಿಶ್ವಾಸದs ನೋ ಇಲ್ಲೊ?

ಹೇಮಾ:– ನಿಮಗಿದ್ರ ಸಾಕು. ನನಗ ಇರೋದು ತಗೊಂಡು ಏನು ಮಾಡೋದದ? ಒಂದು ವ್ಯಾಳ್ಯಾ ನನಗಿತ್ತು, ನಿಮಗs ಇರಲಿಲ್ಲ! ಅಂದ್ರ

ಏನುಪಯೋಗ!

ಗಜಾ:– ನೀನು ಈ ಕೊಂಕೊಂಕು ಮಾತಾಡೋದು ಎಂದು ಬಿಡ್ತೀ ಅಂತೀನ್ನಾ! ಒಮ್ಮೊಮ್ಮೆ ಇದರ ಕಾಲಾಗ ಹೀಂಗ ಸಿಟ್ಟು ಬರ್ತದ....ತಗಡು.... ಎರಡೇಟು....

ಹೇಮಾ:– ಅದೊಂದು ಕಡಿಮೆಯಾಗಿತ್ತು ಅದೃಷ್ಟಕ್ಕ. ಅದನ್ನೊಂದು ಮಾಡಿ ಬಿಡ್ರಿ.

ಗಜಾ:- ಮಾಡೋ ಮಾತಲ್ಲ; ಹಾಂಗ ಅನಿಸ್ತದ ಅಂತ ಹೇಳಿದೆ!

ಹೇಮಾ:- ತಿಳೀತು–ಒಂದಿಲ್ಲೊಂದು ದಿನ ಕೃತಿಯಲ್ಲೂ ಬರ್ತದ!

ಗಜಾ:– ಅದೆಲ್ಲ ಇರಲಿ, ನಾಳಿನದೇನು ಮಾಡೋದು? ನನ್ನ ಮಾತಿಗೆ ನೀ ಒಪ್ಪಿಕೊಂಡೀ.........ನಿನ್ನ ಮಾತಿಗೆ ನಾ ಒಪ್ತೀನಿ.

ಹೇಮಾ:– ಯಾರ ಮಾತಿಗೆ ಯಾರೂ ಒಪ್ಪೋದು ಬ್ಯಾಡ.

ಗಜಾ:– [ಸಿಟ್ಟು ತಡೆಯಲಾರದೆ] ಬುದ್ಧಿಗೇಡಿ ಇದ್ದೀದಿ ನೀನು. (ಬೇರೆ ಕಡೆಗೆ ಮುಖ ತಿರುವಿ) ಹೆಣ್ಣು ಎಷ್ಟೇ ಕಲಿತು ಸುಧಾರಿಸಿದರೂ ಕಡೆತನಕ ತಾಯಾಗಿರೋ ಹಂಬಲೇನು ಹೋಗೋದಿಲ್ಲ!

[ಲಕು ಮತ್ತು ಶಕು ತಮ್ಮ ಆಟಿಗೆಯ ವಸ್ತುಗಳನ್ನು ಹಿಡಿದುಕೊಂಡು ಬರುತ್ತಾರೆ. ಅವರ ಹಿಂದಿಂದೆ ಮಾಧೂಕಾಕಾ ಬರುತ್ತಾರೆ.]

ಶಕು:– ಅಣ್ಣಾ, ಅಣ್ಣಾ, ಇವರ್‍ಯಾರೋ ಅಜ್ಜ ಬಂದಾರ ನೋಡು. ನಮ್ಮ ಮನೀಗೆ.

ಗಜಾ:– ಓಹೊಹೊ! ಇವೇನು, ಮಾಧೂಕಾಕಾ ಅವರು! ಯಾವಾಗ ಬಂದ್ರಿ ಕಾಕಾ! ಬರ್ರಿ, ಕೂಡ್ರಿ, ಕಾಕಾ, ಹೀಂಗ ಬರ್ರಿ. (ಮಾಧೂಕಾಕಾ ಬಂದು ಸುತ್ತಲೂ ಒಮ್ಮೆ ನೋಡಿ ಗಜಾ ತೋರಿಸಿದ ಕುರ್ಚಿಯ ಮೇಲೆ ಕೂಡುತ್ತಾರೆ.)

ಮಾಧೂಕಾಕಾ:– ಎಲ್ಲಾ ಕ್ಷೇಮದಿಂದಿದ್ದೀರಾ?

ಗಜಾ:– ಇದ್ದೀವಿ ಕಾಕಾ ನಿಮ್ಮ ಆಶೀರ್ವಾದದಿಂದ. ಈಕಿ ನನ್ನ ಹೆಂಡತಿ ಹೇಮಾ.

ಮಾಧೂ:– ಹೌದ, ಲಗ್ನದಾಗ ನೋಡಿದ್ದು ಈಕಿನ್ನ. (ಹೇಮಾ ಮುಂದೆ ಬಂದು ನಮಸ್ಕಾರ ಮಾಡುತ್ತಾಳೆ. ಮಾಧೂಕಾಕಾ 'ಅಷ್ಟಪುತ್ರ ಸೌಭಾಗ್ಯವತೀ ಭವ' ಎಂದು ಆಶೀರ್ವಾದ ಮಾಡುತ್ತಾರೆ. ಹೇಮಾ ಸಾಭಿಮಾನದ ನಗುಮುಖದೊಡನೆ ಗಜಾನ ಕಡೆಗೆ ನೋಡುತ್ತಾಳೆ.) ನಿನ್ನ ಮದಿವ್ಯಾಗಿ ಈಗ ಏನಿಲ್ಲಂದ್ರೂ ನೋಡು .... ಯಾವ ತಾರೀಕು ಹೇಳ್ತೀನಿ.... ೧೯೪೦ನೇ ಇಸ್ವಿ ಮೇ ತಿಂಗಳ ೧೨ನೇ ತಾರೀಕು. ನನಗ ಛಲೋ ನೆನಪದ. ಆವೊತ್ತು

ಬುಧವಾರ ಆಗಿತ್ತೇನಪಾ. ಹನ್ನೆರಡು ವರ್ಷದವು ಆ ಮಾತಿಗೆ. ನಾ ಆಗ ಅದs ಮಾಮಲೇದಾರ ಕಾಯಮಾಗಿದ್ದೆ. ರಾಣೇಬೆನ್ನೂರಿಂದ ಮದಿವಿಗೆ ಬಂದಿದ್ನೇನಪಾ. ಆವೊತ್ತು, ರಾತ್ರಿ ಸ್ಟೇಶನ್ ಮ್ಯಾಲ ಬಂದ್ರ ಒಂದsರs ಟಾಂಗಾ ಇರಬೇಕು ! ಕಡೀಗೆ ಅರ್ಧ ದಾರಿಗೆ ನಾನs ಹಾಸಿಗೀ ಸುರುಳಿ ಹೊತ್ತುಕೊಂಡು ಬಂದೆ. ಇವು ನಿನ್ನ ಮಕ್ಳೇನೋ, ಅಲ್ಲs? ಆಯುಷ್ಮಂತರಾಗಲಿ. ಮದಿವೀ ಮಾತು ಹೇಳ್ತಿದ್ದೆನಲ್ಲs....

ಗಜಾ:– ಆಗಿಂದಾಯ್ತುಲಾ. ಈಗ ಯಾವಾಗ ಬಂದ್ರಿ? ಏನು? ಈಗ ಎಲ್ಲಿ ರೋದು? ಹೇಮಾ, ಚಹಾಕ್ಕ ಇಡು. ಇವರು ನಮ್ಮ ತಂದೆಯವರ ಸ್ನೇಹಿತರು, ತಂದೆಯವರ ಸಮಾನರು. ಚಹಮಾಡು ಲಗು, ಚಹಮಾಡು. [ಹೇಮಾ ಹೋಗತೊಡಗುವಳು.]

ಮಾಧೂ:– ಇದು ನೋಡು ಗಜಾ, ನಾ ಚಹ ಬಿಟ್ಟುಬಿಟ್ಟೇನೇನಪಾ. ಈಗ ದಿನಾಲು ಪಾರಾಯಣ ಬ್ಯಾರೆ ಸುರುಮಾಡೀನಿ. ನಿತ್ಯದ ಆನ್ಹಿಕ ಪಾರಾಯಣ ಮುಗೀಬೇಕಾದ್ರ ಹನ್ನೊಂದು ಹೊಡೀತದ. ಆ ಮ್ಯಾಲ ಊಟದ ವ್ಯಾಖ್ಯಾನs ಆಗಿರ್ತದ. ಇಷ್ಟಾಗಿ ಈ ವಯಸ್ಸಿಗೆ ಸುಟ್ಟಸುಡುಗಾಡು ಚಹಾ ಕಾಫಿ ಬ್ಯಾಡ ಅಂತ ಅನಿಸಿತು. ಮೊನ್ನೆ ಮಂತ್ರಾಲಯಕ್ಕ ಬ್ಯಾರೆ ಹೋಗಿ ಬಂದೆ! ಅದರಾಗ ಈ ಚಹ ಬಲು ಪಿತ್ತಮಾಡ್ತದ ಲೌಡಿಮಗಂದು! ಮೊನ್ನೆ ಆ ಅಮೇರಿಕಾದ ಫಿಜಿಕಲ್ ಕಲ್ಚರ್‌ನಾಗ ಬರ್‍ದಿತ್ತಲ್ಲಪಾ ಚಹಾನ್ನದಿಂದ .... ಓದಿದೇನು?

ಗಜಾ:– ಇಲ್ಲ ಬಿಡ್ರಿ. ಚಹ ಬ್ಯಾಡಾದ್ರ ಶರಬತ್ತ ತಗೊಳ್ರಿ ಲಿಂಬೀಹಣ್ಣಿಂದು – ಹೇಮಾ, ಶರ್‌ಬತ್ತು ಮಾಡಿಬಿಡು. (ಹೇಮಾ ಹೋಗುತ್ತಾಳೆ. 'ನಂಗೂ ಶರ್‌ಬತ್ತು' 'ನಂಗೂ ಶರ್‌ಬತ್ತು' ಎಂದೆನ್ನುತ್ತ ಲಕು ಶಕು ತಾಯಿಯನ್ನು ಹಿಂಬಾಲಿಸುತ್ತಾರೆ.) ಉಂ, ಯಾವಾಗ ಬಂದಿರಿ? ಈಗ ಎಲ್ಲಿರೋದು– ಕಾಕಾ ಈಗ?

ಮಾಧೂ:– ಬಂದು ಎರಡು ದಿವಸ ಆತೇನಪಾ. ಹೋದ ಎಪ್ರಿಲಿಗೆ ರಿಟೈಯರ್ ಆದೆ. ಈಗ ಹತ್ತು ತಿಂಗಳಾಗ್ತ ಬಂತು ಅನ್ನು. ಇನ್ನೂ ನಮ್ಮ ಪೆನ್ಶನ್ ಮಂಜೂರಾಗಿ ಬರವಲ್ಲದು. ಅಕೌಂಟಂಟ್ ಜನರಲ್ ಆಫೀಸಿಗೆ ಹೋಗಿ ಬಿದ್ದು ಬಿಟ್ಟsದ ಆತು ಪ್ರಕರಣ! ಏನು ಈಗಿನ ಅಕೌಂಟಂಟ್ ಜನರಲ್ ಆಫೀಸಪಾ! ದಾದಿಲ್ಲ, ಫಿರ್ಯಾದಿಲ್ಲಾ. ಹಿಂದಿನ ಬ್ರಿಟಿಶ್ ಅಮದಾನಿ

ವ್ಯಾಳ್ಯಕ್ಕ ಹೀಂಗ ಎಂದೂ ಇದ್ದಿಲ್ಲ ಮಾರಾಯಾ– ಲಂಡನ್ನಿಗೆ ಹೋದರೂ ಲಟಿಕೀ ಹೊಡಧಾಂಗ ಕೆಲಸಾಗೋದು. ಈಗ ಸಾದಾ ಒಂದು ರಜಾದ ಅರ್ಜಿ ಮಂಜೂರಾಗಿ ಬರಲಿಕ್ಕೆ ಆರಾರು ತಿಂಗಳು. ಒನ್ಮೆ ಹೀಂಗ ಆತು, ನಾ ಕಲಘಟಗಿ ತಾಲೂಕಿಗಿದ್ದೆ ....

ಗಜಾ:– ಕಾಕಾ, ಕ್ಷಮಿಸಿರಿ! .... ಅಂ, ನೀವು ಬಂದು ಎರಡು ದಿನ ಆತು ಅಂದ್ರಿ. ಇಳಿದೀರೆಲ್ಲಿ? ಏನು ಸಮಾಚಾರ?

ಮಾಧೂ:– ಕೂಡಲ್ಲ? ಮನಿಯವ ಆದರೂ ನಿಂತ್ಯಾಕ ಮಾತಾಡೋದು? ಎಲ್ಲಿ ಇಳಿದೀನಿ ಅಂತ ಕೇಳಿದ್ಯಲ್ಲ? ನಾ ನಿನ್ನಲ್ಲಿಗೇ ಸರಳ ಬರಂವ. ಆದ್ರ ನಮ್ಮ ನರಸಿಂಹಗ ಹೆಣ್ಣು ಕೊಟ್ಟ ಬೀಗರು— ನರಸಿಂಹ ಅಂದ್ರ ಐದನೇ ಹುಡುಗೇನಪಾ— ಅವನ ಮಾವ ಇಲ್ಲೇ ಇರ್ತಾರ. ಮಗ ಅವರಲ್ಲೇ ಇಳೀರಿ ಅಂತ ಪತ್ರ ಬರೆದಿದ್ನs. ಅವರು ಬೀಗರಾಗಿದ್ದರೂ ಬೀಗರ ಹಾಂಗಿಲ್ಲ. ಭಾಳ ಛಲೋ ಜನ. ಅದರಾಗ ನಮಗೂ ನರಸಿಂಹನ ಮಾವಗೂ ಛಲೋ ಕೂಡ್ತದೇನಪಾ. ಅವರೂ ರಿಟೈಯರ್ ಆಗ್ಯಾರ. ಒಂದs ಡಿಪಾರ್ಟಮೆಂಟಿನೊಳಗ ನೌಕರಿ ಮಾಡಿದವರು ನಾವು. ಹಾಂಗ ನೋಡಿದ್ರ ಮೊದಲ ನಮಗೂ ಅವರಿಗೂ ಪರಿಚಯನs ಇದ್ದಿಲ್ಲ. ಅದು ಆದದ್ದೂ ವಿಲಕ್ಷಣನs. ಅದರದು ಹೀಂಗ ಮೋಜಾತೇನಪಾ— ನಾನು ೪೭ನೇ ಇಸ್ವಿ ಫೆಬ್ರುವರಿ ತಿಂಗಳಿನಾಗ ....

ಗಜಾ:– ಫೆಬ್ರುವರಿ ಅಂದ್ರ ನೆನಪಾತು ಕಾಕಾ. ಇನs ಫೆಬ್ರುವರಿ ಸುರು ಆಗೇದ. ಆದರೂ ಬಿಸಿಲೆಷ್ಟದ ನೋಡ್ರಿ. ಕಕ್ಕಿ ಎಲ್ಲಿದ್ದಾರ?

ಮಾಧೂ:– ಆಕೀನೂ ನನ್ನ ಸಂಗ್ತಿ ಬಂದಾಳೇನಪಾ. ಈಗ ಇಲ್ಲಿಗೆ ಕರ ಕೊಂಡು ಬರಲಿಲ್ಲ. ಯಾವುದೋ ಗುಡ್ಯಾಗ ಹೆಣ್ಣುಮಗಳ ಕೀರ್ತನ ಅದಂತs, ಹೋಗ್ಯಾಳ.

[ಅಷ್ಟರಲ್ಲಿ ಹೇಮಾ ಎರಡು ಗ್ಲಾಸಿನಲ್ಲಿ ಶರ್‌ಬತ್ತು ತಂದು ಟೇಬಲ್ ಮೇಲೆ ಇರಿಸಿ, ತುಸು ಅಂತರದ ಮೇಲೆ ನಿಲ್ಲುತ್ತಾಳೆ.]

ಗಜಾ:– (ಒಂದು ಗ್ಲಾಸನ್ನು ಮಾಧೂಕಾಕಾಗೆ ಕೊಡಹೋಗಿ) ತಗೊಳ್ರಿ ಕಾಕಾ.

ಮಾಧೂ:– (ಅನುಮಾನಿಸುತ್ತ) ಉಂ, ... ಇದು ನೋಡು ಗಜಾ, ನನಗ ಈ ಗ್ಲಾಸು ನಡಿಯೋದಿಲ್ಲೇನಪಾ. ಏನೋ ಆಚಾರ ಇರಬೇಕು ಅಂತ ಭಾನಸು. ಮಾಡೋ ಕಾಲಕ್ಕೆ ಎಲ್ಲಾ ಮಾಡಿದಿವಿ. ಯಾವುದs ವಿಷಯ

ತಪ್ಪು ಅಂತ ಒಮ್ಮೆ ಅಲ್ಲ ಹತ್ತು ಸಾರೆ ತಿಳಿದ ಮ್ಯಾಲೂ ....

ಗಜಾ:– ಹಂಗಾರ ಬ್ಯಾರೆ ಪಾತ್ರೆಯೊಳಗ ತರಿಸ್ತೀನಿ. ಹೇಮಾ, ಇದನ್ನೊಯಿದು ಬೆಳ್ಳೀ ಜಾಂಬಿನೊಳಗ ಹಾಕ್ಕೊಂಡು ಬಾ. (ಹೇಮಾ ಅದನ್ನುಒಯ್ಯುತ್ತಾಳೆ.)

ಮಾಧೂ:– ಅದರೊಳಗ ಮಂತ್ರಾಲಯಕ್ಕ ಹೋಗಿ ಬಂದಮ್ಯಾಲ ಮನಸ್ಸು ಬಹಳ ಬದಲಾಗೇದೇನಪಾ. ನಾ ಎಷ್ಟು ಸಿಗರೇಟು ಸೇದ್ತಿದ್ದೆ? ಈಗ ಎಲ್ಲಾ ಬಂದು. ಚಟ ಅಂದ್ರ ನಾಶೀಪುಡಿ ಒಂದಿಟ್ಟೇನಿ ನೋಡು. ಯಾಕಂದ್ರ ಅದು ಮಡೀಲಿದ್ದಾಗೂ ನಡೀತದ ಅಂತ. (ಜೇಬಿನಲ್ಲಿಯ ನಾಶೀಪುಡಿ ಡಬ್ಬಿ ಯನ್ನು ಹೊರತೆಗೆದು ಒಂದು ಚಿಮುಟಿ ಮೂಗಿಗೆ ಏರಿಸುತ್ತಾರೆ.) ಯಾವ್ದರ ಆದರೂ ವ್ಯಸನ ಅಂಬೋದು ಬಹಳ ಕೆಟ್ಟದು ನೋಡಪಾ. (ಹೇಮಾ ಬೆಳ್ಳಿಯ ಜಾಂಬಿನಲ್ಲಿ ಶರ್‌ಬತ್ತು ತಂದು ಮಾಧೂಕಾಕಾನ ಕೈಯಲ್ಲಿ ಕೊಡುತ್ತಾಳೆ. ಮಾಧೂಕಾಕಾ ನಗುಮುಖದಿಂದ ಆದನ್ನು ತಕ್ಕೊಂಡು) ಮಕ್ಕಳೆಷ್ಟು ಅವ ನಪಾ ಈಗ ನಿನ್ಗ? ಅವೆರಡs ಏನು?

ಗಜಾ:– ಹೌದು ಕಾಕಾ. ಸಾಕಲ್ಲ! ಒಂದು ಗಂಡು, ಒಂದು ಹೆಣ್ಣು. ನಿಮ್ಮ ಮಕ್ಕಳು, ಕಾಕಾ, ಯಾರ್‍ಯಾರು ಏನೇನು ಮಾಡ್ತಾರ? ಎಲ್ಲಾರೂ ಈಗ ಉದ್ಯೋಗದೊಳಗ ತೊಡಗಿರಬಹುದು?

ಮಾಧೂ:– ಒಟ್ಟs ನಮ್ಮ ಹೊಟ್ಟೆಲೆ ಹುಟ್ಟಿದವು ಹನ್ನೊಂದು ಮಕ್ಕಳೇನಪಾ. ಮೂರು ಚಿಕ್ಕವಿದ್ದಾಗs ಹೋಗಿಬಿಟ್ಟವು ಅನ್ನು. ಈಗ ಎಂಟು ಮಂದಿ ಇದ್ದಾರ. ಐದು ಗಂಡು, ಮೂರು ಹೆಣ್ಣು. ಎಲ್ಲಾರವೂ ಮದಿವ್ಯಾಗ್ಯಾವ. ಗಂಡು ಹುಡುಗರು ಏನೇನೋ ಉದ್ಯೋಗದೊಳಗ ಸೇರಿಕೊಂಡಾರೇನಪಾ. ಅದ್ರ ಏನು ಮಾಡೋದು ನಮ್ಮ ಅದೃಷ್ಟಕ್ಕ! ಕಡೆಯವ ನಮ್ಮ ನರಸಿಂಹನ್ನ ಬಿಟ್ರ ಉಳಿದವರು ನಮ್ಮ ಪಾಲಿಗೆ ಇದ್ರೂ ಇಲ್ಲಧಾಂಗ! ನಾ ಇದ್ದೇನೊ ಸತ್ತೇನೋ ಅಂತ ಸಹಿತ ಕೇಳೋದಿಲ್ಲ. ಅವರ ಶಿಕ್ಷಣಕ್ಕ, ಹೊಟ್ಟಿಗೆ, ಬಟ್ಟಿಗೆ ಅಂತ ಬಂದ ಪಗಾರೆಲ್ಲ, ಒಂದು ಕೈ ಕೂಡಿದಧಾಂಗ, ಖರ್ಚು ಮಾಡಿದೆ. ಆದ್ರ ನನ್ನ ಪ್ಯಾಂತ್ಯಾಕ್ಕ ಕಡೀ ಮಗನ ಹೊರ್ತು ಯಾರೂ ಆಗಲಿಲ್ಲ. ಅಂವಗ ನೋಡಿದ್ರ ಹಾಂಗ ಪಗಾರ ಕಡಿಮಿ. ಆದ್ರ ಭಂಗಾರದಂಥ ಗುಣದ ಹುಡುಗ ನೋಡು. ಅವ ಇರದs ಇದ್ರ ನಾವು ಗಂಡ ಹೆಂತಿ ಭಿಕ್ಷಾ ಬೇಡೋ ಪ್ರಸಂಗನs ಇತ್ತು! ದಿಲ್ಲೀ ಸೆಕ್ರೆಟರಿಯೆಟ್‌ನೊಳಗಿದ್ದಾನ. ಅಲ್ಲಿ ಅವಗ ಖರ್ಚು ಬಹಳ. ಆದರೂ ಅಷ್ಟರಾಗs ನನಗ

ತಿಂಗಳಿಗೆ ೧೫೦ ರೂಪಾಯಿ ಕಳಿಸ್ತಾನ. ನನ್ನ ಹಿರೇ ಮಗ ಚಿಕ್ಕಂವಿದ್ದಾಗ ಬಹಳ ಜಾಣ ಇದ್ದ. ಆದ್ರ ಹಿಂದಾಗಡೆ ಹುಚ್ಚುಮುಂಡೇಗಂಡ ಆದ. ಮುಂಬಯಿಯೊಳಗಿರ್ತಾನ, ಏನು ಮಾಡ್ತಾನೋ ಆ ಭಗವಂತಗs ಗೊತ್ತು. ಮಿಕ್ಕ ಮೂರು ಮಂದಿ ನಮ್ಮಿಬ್ಬರ್ನೂ ಸೇರೂದಿಲ್ಲ. ಒಬ್ಬವ ಹೆಂತಿ ಹೇಳಿಧಾಂಗ ಕುಣೀತಾನ. ಒಬ್ಬವ ಹೆಂತ್ಯಾನ್ನ ಬಿಟ್ಟು ಇನ್ನೊಬ್ಬಾಕೀನ್ನ ತಂದು ಮನ್ಯಾಗಿಟ್ಟುಕೊಂಡಾನ. ಒಬ್ಬವ ಆಫ್ರಿಕಾಕ್ಕs ಹೋಗಿ ಬಿಟ್ಟಾನ. ನಾವು ಇಷ್ಟು ಮಕ್ಕಳ್ನ ಹಡದರೂ ಕಡೀಗೆ ನಮ್ಮ ಮುಪ್ಪಿನ ಕಾಲಕ್ಕ ಉಪಯೋಗಬಿದ್ದವ ಕಡೀಯುವನs! ಐದು ಮಂದಿ ಗಂಡುಸು ಮಕ್ಕಳಿದ್ರೂ ಐದು ಮಂದೀದೂ ಐದು ಥರಾನs! ಏನು ಮಾಡೋದು ಪಡೆದು ಬಂದ ಅದೃಷ್ಟಕ್ಕ! ನಿನಗೆಷ್ಟು, ಎರಡವ ಅಂದೆಲ್ಲs!

ಗಜಾ:– ಹುಂ ಸಾಕಲ್ಲ, ಇನ್ನೆಷ್ಟು ಬೇಕು ಕಾಕಾ!

ಮಾಧೂ:– ಸಾಕು ಅನಬ್ಯಾಡ. ಹುಟ್ಟೋ ಮಕ್ಕಳ ಆಯುಷ್ಯ ನಮ್ಮ ಕೈಯಾಗದ ಏನು? ಹುಟ್ಟಿದೊಬ್ಬ ಮಗ ಅಶ್ವತ್ಥಾಮ ಆಗಬೇಕಾದ್ರ ನಾವೂ ದ್ರೋಣಾಚಾರ್ರು ಇರಬೇಕಾಗ್ತದಪಾ! ಹುಟ್ಟಿದ ಪ್ರತಿಯೊಂದು ಜೀವಾನೂ ತನ್ನ ಅದೃಷ್ಟ ಕಟಿಕೊಂಡs ಬಂದಿರ್ತದೇನಪಾ. (ಹೇಮಾನ ಮುಖದ ಮೇಲೆ ಗೆಲುವಿನ ಕಳೆ ಕಂಗೊಳಿಸುತ್ತದೆ. ಗಜಾನ ಕಣ್ಮುಂದೆ ಯಾವುದೋ ಒಂದು ದೃಶ್ಯ ಕಂಡಂತಾಗಿ ಅವನ ಮೈಯೆಲ್ಲ ನವಿರುತ್ತದೆ. ಲಕು-ಶಕು ಹೊರಗೆ ಬರುತ್ತಾರೆ. ತಾಯಿಯ ಪತ್ತಿರ ಶಕು, ತಂದೆಯ ಹತ್ತಿರ ಲಕು ನಿಲ್ಲುತ್ತಾರೆ.) ನಿನ್ನ ಹೆಸರೇನೋ ಬಾಳಾ?

ಲಕು:– ಲಕು.

ಮಾಧೂ:– ಹಂ, ನಿಂದವ್ವಾ?

ಶಕು:– ಶಕುಂತಲಾ.

ಮಾಧೂ:– ಹಂ ಬೇಷ್. (ಜೇಬಿನೊಳಗಿಂದ ಒಂದು ಪುಡಿಕೆಯನ್ನು ತೆಗೆದು ಬಿಚ್ಚಿ) ಹಿಡೀರಿ. (ಎರಡೆರಡು ಫೇಡೆ ಇಬ್ಬರು ಮಕ್ಕಳ ಕೈಯಲ್ಲಿ ಕೊಡುತ್ತಾರೆ.) ನಿನಗ ಎಷ್ಟು ಮಕ್ಕಳವ ಅಂಬೋದ್ರ ಕಲ್ಪನಾ ಇರಲಿಲ್ಲ. ಸಂತೋಷಾತು. ಎಷ್ಟು ವರ್ಷ ಇವಕ್ಕ?

ಹೇಮಾ:– ಇಂವಗ ಮೂರು ತುಂಬುತಾವ, ಆಕೀಗೆ ಆರು ತುಂಬುತಾವ ನಾಳಿಗೆ. ಇಬ್ಬರದೂ ನಾಳೇ ಹುಟ್ಟಿದ ದಿವಸ.

ಗಜಾ:– ಹೌದು, ಅಂಥಾಂಗs ಕಾಕಾ, ನಾಳೆ ನೀವು ಕಕ್ಕೀನ್ನ ಕರಕೊಂಡು ನಮ್ಮಲ್ಲೇ ಊಟಕ್ಕ ಬಂದುಬಿಡ್ರಿ.

ಹೇಮಾ:– ಅಡಿಗೀ ಎಲ್ಲಾ ನಿಮ್ಮ ದಶಿಂದ ನಾ ಮಡೀಲೇನs ಮಾಡ್ತೇನಿ.

ಮಾಧೂ:– ಹೀಂಗs? ಆಗಲೆಪಾ. ಇಷ್ಟು ಪ್ರೀತಿಲೆ ನೀವು ಕರೀತೀರಿ ಅಂದ ಮ್ಯಾಲ ಬರ್ತೇನಿ.

ಗಜಾ:– (ಗಡಬಡಿಸಿ ಎದ್ದು) ಹೇಮಾ, ಹೊಸಾ ಅರಿವೆ ತರೋದು ಅಂದೆಲ್ಲ, ತಂದುಬಿಟ್ಟೇನಿ. ಮತ್ತ ಮಿಕ್ಕ ಸಾಮಾನೇನು ಬೇಕು, ಅದನ್ನೂ ಹೇಳು.

ಹೇಮಾ:- ಪಟ್ಟಿ ಮಾಡೇ ಇಟ್ಟೇನಿ. (ತಂದು ಕೊಡುತ್ತಾಳೆ. 'ಅಣ್ಣಾ, ನಂಗ ಬುಚ್‌ಕೋಟು ಬೇಕು' ಎಂದು ಲಕು, 'ಅಣ್ಣ, ನನಗ ಅವ್ವ ಹಾಕ್ಕೊಂಡಂಥಾ ಲೋಲಕು ಬೇಕು' ಎಂದು ಶಕು ಎನ್ನುತ್ತಾರೆ.]

ಗಜಾ:– ತರ್ತೇನಿ ಆಂ! ಹೊರಡೋಣಲ್ಲs ಕಾಕಾ?

[ಮಾಧೂಕಾಕಾ 'ಹೋ' ಎಂದು ಏಳುತ್ತಾರೆ. ಗಜಾ ಹೇಮಾಳ ಕಡೆಗೆ ಸೂಚಕ ದೃಷ್ಟಿಯಿಂದ ನೋಡುತ್ತ ಹೊರಬೀಳುತ್ತಿರುವಾಗ]

ತೆರೆ ಬೀಳುತ್ತದೆ.

ತಿರುವು–ಮುರುವು

★

ಪಾತ್ರಗಳು:

ಇಂದ್ರ: .... ಸ್ವರ್ಗಾಧಿಪ
ಬ್ರಹ್ಮಚಾರಿ: .... ಹೆಂಡತಿಗಾಗಿ ಹಂಬಲಿಸುವ ನಡುಹರೆಯದವನು
ಸಂಸಾರಿಗ: .... ಹೆಂಡತಿ–ಮಕ್ಕಳಿದ್ದೂ ಇರಲು ಮನೆ ದೊರಕದೆ ಒಂಟಿಗನಾಗಿ ಬಳಲುತ್ತಿರುವ ನಗರವಾಸಿ
ಅಪ್ಸರೆ: .... ಬ್ರಹ್ಮಚಾರಿಗಾಗಿ ಭೂಲೋಕಕ್ಕಿಳಿದ ಸುರಸುಂದರಿ
ವಿಶ್ವಕರ್ಮ: .... ಮನೆಯಿಲ್ಲದ ಸಂಸಾರಿಗನಿಗೆ ಮನೆಯನ್ನೊದಗಿಸಲು ಬಂದ ಸ್ವರ್ಗದ ವಾಸ್ತುಶಿಲ್ಪಿ

[ಸುರಪತಿಯಾದ ದೇವೇಂದ್ರನು ಸಿಂಹಾಸನದಲ್ಲಿ ವಿರಾಜಮಾನನಾಗಿದ್ದಾನೆ. ಇಕ್ಕೆಲದಲ್ಲಿ ಅಪ್ಸರೆಯರು ದಿವ್ಯಗಂಧವನ್ನು ತಳೆದ ಬೀಸಣಿಗೆಗಳಿಂದ ಗಾಳಿ ಹಾಕುತ್ತಿದ್ದಾರೆ. ಮಿಕ್ಕ ದೇವತೆಗಳೂ ಗಂಧರ್ವರೂ ತಮ್ಮ ತಮ್ಮ ಸ್ಥಾನವನ್ನಲಂಕರಿಸಿ ಕುಳಿತಿದ್ದಾರೆ. ಅಪ್ಸರೆಯರು ಸುಮನೋಹರ ನೃತ್ಯ ಗೀತಗಳಿಂದ ಸಭಿಕರನ್ನು ಆನಂದಗೊಳಿಸುತ್ತಿದ್ದಾರೆ. ಆಗ ಮೃತ್ಯುಲೋಕದಿಂದ, ಆರ್ತಸ್ವರದಲ್ಲಿ ಯಾರೋ ಕೂಗಿಕೊಳ್ಳುವಂತೆ ಕೇಳುವುದು. ದೇವೇಂದ್ರನು ನೃತ್ಯಗೀತಗಳನ್ನು ಅಷ್ಟಕ್ಕೇ ನಿಲ್ಲಿಸಲು ಆಜ್ಞೆ ವಿಧಿಸಿ, ಕೂಗಿದವರು ಯಾರೆಂದು ಕೇಳುತ್ತಾನೆ.]

ಬ್ರಹ್ಮಚಾರಿ:– ದೇವಾಧಿದೇವಾ! ಇಂದ್ರದೇವಾ! ನಾನೊಬ್ಬ ಮೃತ್ಯುಲೋಕದ ನಿವಾಸಿಯಾದ ಬ್ರಹ್ಮಚಾರಿ.

ಇಂದ್ರ:– ಇಷ್ಟು ಸಣ್ಣ ದನಿಯಲ್ಲಿ ಏಕೆ ಕೂಗಿಕೊಳ್ಳುವೆ?

ಬ್ರಹ್ಮಚಾರಿ:– ದೇವಾ! ರೇಶನ್ ಅನ್ನವನ್ನುಂಡು ನಿತ್ರಾಣ; ಗಟ್ಟಿಯಾಗಿ ಕೂಗಲಿಕ್ಕೆ ಶಕ್ತಿ ಸಾಲದು.

ಇಂದ್ರ:– ಇರಲಿ, ಸಣ್ಣ ದನಿಯಲ್ಲಿಯೇ ಹೇಳು; ನನಗೆ ಕೇಳಬರುತ್ತದೆ. ನಿನಗೇನು ಬೇಕಾಗಿದೆ?

ಬ್ರಹ್ಮಚಾರಿ:– ಅಪ್ಸರೆಯರಿಗೆ ಒಡೆಯನಾದ ಸಹಸ್ರಾಕ್ಷ! ನನ್ನ ಮೇಲೆ ಕೃಪೆಮಾಡು. ನನಗೆ ಈಗ ೩೫ ವರ್ಷ ವಯಸ್ಸಾಗುತ್ತ ಬಂತು. ಇನ್ನೂ ಮದುವೆಯಿಲ್ಲ. ತಿಂಗಳಿಗೆ ನೂರು ರೂಪಾಯಿ ಸಂಬಳ ತರುತ್ತೇನೆ. ಆದರೂ, ಹೆಂಡತಿಯ ಹೊಟ್ಟೆಗೆಹಾಕುವ ಸಾಮರ್ಥ್ಯ ನನಗೆ ಸಾಲದು ಎಂದು ಜನ ಭಾವಿಸುತ್ತಾರೆ. ಈ ಪಟ್ಟಣದಲ್ಲಿ ಸಾವಿರಾರು ಜನ ಮದುವೆ ಆಗದ ಕನ್ಯೆಯರಿದ್ದಾರೆ! ಒಬ್ಬರಾದರೂ ನನ್ನ ಅದೃಷ್ಟಕ್ಕೆ ದೊರೆಯದಿರುವುದು ಅನ್ಯಾಯವಲ್ಲವೇ? ಇನ್ನು ಐದು ವರ್ಷ ನಾನು ಇದೇ ಸ್ಥಿತಿಯಲ್ಲಿ ಕಳೆದರೆ, ವರಗಳ ಪಟ್ಟಿಯೊಳಗಿನ ನನ್ನ ಹೆಸರೇ ಹೋಗಿಬಿಡುತ್ತದೆ. ಆ ಮೇಲೆ ನನ್ನ ಲಗ್ನವಾಗುವ ಬಗೆ ಎಂತು? ಈ ಪರಿಸ್ಥಿತಿಯಲ್ಲಿ ನನಗೆ ಹುಚ್ಚು ಹಿಡಿದರೆ ಯಾರು ಜವಾಬ್ದಾರರು? ದೇವಾ! ಬ್ರಹ್ಮಚರ್ಯದ ನನ್ನ ಕಷ್ಟಗಳನ್ನು ಲಕ್ಷ್ಯಕ್ಕೆ ತಂದು, ಸದ್ಯಕ್ಕೆ ಒಬ್ಬ ಅಪ್ಸರೆಯನ್ನಾದರೂ ಕಳುಹುವ ಕೃಪೆಮಾಡು. ಎಂದರೆ ಒಂದು ದಿನವನ್ನಾದರೂ ಸುಖ-ಸಮಾಧಾನದಲ್ಲಿ ಕಳೆಯುತ್ತೇನೆ.

ಇಂದ್ರ:– ದುಃಖಿತ ತರುಣಾ, ನಿನ್ನ ಬೇಡಿಕೆಯನ್ನು ಪೂರ್ಣಮಾಡುತ್ತೇನೆ, ನಿಶ್ಚಿಂತನಾಗಿರು, ಹೋಗು.

[ಬ್ರಹ್ಮಚಾರಿ ಹೋಗುವನು. ಮತ್ತೆ ನೃತ್ಯಗೀತಗಳು ಪ್ರಾರಂಭವಾಗುವವು. ಆಗ ಇನ್ನೊಂದು ಅಂಥದೇ ಆರ್ತಧ್ವನಿಯು ಕೇಳಬರುವುದು. ನೃತ್ಯಗೀತಗಳು ನಿಲ್ಲುವವು.]

ಇಂದ್ರ:– ಯಾರವರು– ಮತ್ತೆ ಮೊರೆಯಿಡುವವರು?

ಸಂಸಾರಿಗ:– ಹೇ ನಾಕಾಧಿಪನೆ, ನಾನು ತಾಪತ್ರಯದಿಂದ ಬಳಲಿದ ಒಬ್ಬ ಸಂಸಾರಿಗ. ಮೃತ್ಯುಲೋಕದಲ್ಲಿ ನನ್ನ ದುಃಖವನ್ನು ಕೇಳಿಕೊಳ್ಳುವ ಒಬ್ಬ ಸಜ್ಜನನೂ ಇಲ್ಲ! ಅಂತೇ ಸಾಯುವ ಮೊದಲು ಸ್ವರ್ಗಕ್ಕೆ ಮೊರೆಯಿಡುವ ಸಾಹಸ ಮಾಡಿದ್ದೇನೆ. ನೀನಾದರೂ ನನಗೆ ಒದಗಿರುವ ಕಷ್ಟವನ್ನು ನಿವಾರಿಸಿ, ನನ್ನನ್ನು ಕೃತಾರ್ಥನನ್ನಾಗಿ ಮಾಡು.

ಇಂದ್ರ:– ಇದೇನು? ನೀನು ಗಂಡುಸಾಗಿಯೂ ಹೀಗೇಕೆ ಲಜ್ಜಿತನಾಗಿ ನಿಂತಿರುವೆ? ನಿನ್ನ ಮೈಮೇಲಿನ ವಸ್ತ್ರಗಳೆಂಥ ವಿಚಿತ್ರ? ನೀನು ಉಟ್ಟಿರುವುದೇನು

ಪಂಚಿಯೊ ಪತ್ತಲವೊ?

ಸಂಸಾರಿಗ:– ದೇವಾ, ಅದು ಹೆಂಗುಸರುಡುವ ಪತ್ತಲ! ಈಗ ನನಗೆ ಪಂಚಿಯಾಗಿದೆ! ಒಂದು ಪತ್ತಲ ಕೊಂಡು ಎರಡು ತುಂಡು ಮಾಡಿದ್ದೇನೆ! ಅರ್ಧವನ್ನು ಹೆಂಡತಿ ಉಡುತ್ತಾಳೆ, ಅರ್ಧ ನಾನು ಉಡುತ್ತೇನೆ. ಕಲಿಯ ದವಡೆಯಲ್ಲಿ ಸಿಕ್ಕ ನಳ-ದಮಯಂತಿಯರಂತೆ ನಮ್ಮದೂ ಅವಸ್ಥೆ ಆಗಿದೆ. ಅಂತೆಯೇ ನಾಚಿಕೆ.

ಇಂದ್ರ:– ಇರಲಿ! ನಿನ್ನ ಮುಖ್ಯ ತಾಪತ್ರಯವಾದರೂ ಏನು? ಒಮ್ಮೆ ಹೇಳಿಬಿಡು. ಇದು ವರೆಗೆ ಯಾರೂ ಮೃತ್ಯುಲೋಕದ ಕಷ್ಟಗಳನ್ನು ನಮ್ಮೆದುರು ತೋಡಿಕೊಂಡವರಿಲ್ಲ. ಆಗಲೇ ಒಬ್ಬ ಬ್ರಹ್ಮಚಾರಿ ಮಾತ್ರ ತನ್ನ ದುಃಖ ನಿವಾರಣೆಗಾಗಿ ನನ್ನನ್ನು ಪ್ರಾರ್ಥಿಸಿಕೊಂಡ. ನಿನ್ನ ದುಃಖವೇನು?

ಸಂಸಾರಿಗ:– ನಾನೊಬ್ಬ ಬಡ ಸಂಸಾರಿಗ; ಹೊಟ್ಟೆಪಾಡಿಗಾಗಿ ಪಟ್ಟಣಕ್ಕೆ ಬಂದಿದ್ದೇನೆ. ಅನೇಕ ವರ್ಷಗಳಿಂದ ಹೆಂಡತಿಮಕ್ಕಳನ್ನಗಲಿ ಇಲ್ಲಿ ಕಾಲ ಕಳೆಯುತ್ತಿದ್ದೇನೆ. ಎಷ್ಟು ದಿನ ನಾನು ಈ ವಿರಹತಾಪದಲ್ಲಿ ಕಳೆಯಲಿ? ನನಗೂ ಮುಪ್ಪಿನ ಕಾಲ ಸಮೀಪಿಸುತ್ತ ಬಂತು. ಇನ್ನಾದರೂ ನನ್ನ ಹೆಂಡತಿ ಮಕ್ಕಳನ್ನು ಕೂಡಿಕೊಂಡಿದ್ದು ಜೀವನವನ್ನು ಕಳೆಯಬೇಕೆಂದಿದ್ದೇನೆ. ಆದರೆ ಹಾಗೆ ಮಾಡಬೇಕೆಂದರೆ ನನಗೆ ಚಿಕ್ಕದಾದರೂ ಸರಿ, ಒಂದು ಮನೆಯೆಂಬುದು ಇಲ್ಲ. ಮೃತ್ಯುಲೋಕದಲ್ಲಿ ಈಗ ಮಡದಿ-ಮಕ್ಕಳು ದೊರೆಯಬಹುದು; ಮನೆ ದೊರೆಯುವುದು ದುಸ್ತರವಾಗಿದೆ. ಆದ್ದರಿಂದ ಒಂದು ಮನೆ ದೊರೆಯುವಂತೆ ಮಾಡು. ಮನೆ ಹಿಡಿದುಕೊಂಡಿರುವವರು ಯಾರೂ ಮನೆ ಬಿಡಲು ಸಿದ್ಧರಿಲ್ಲ. ಹೊಸ ಮನೆಗೆ ಬುನಾದಿ ತೋಡಿದ ದಿನವೇ ಹತ್ತುತ್ತು ವರ್ಷದ ಮುಂಗಡ ಬಾಡಿಗೆ ಕೊಟ್ಟು, ಅವನ್ನು ದುಡ್ಡುಳ್ಳವರು ಹಿಡಿದುಬಿಡುತ್ತಾರೆ. ನನ್ನಲ್ಲಿ ಆ ಶಕ್ತಿ ಇಲ್ಲ. ಇತ್ತೀಚೆಗೆ ಹೊಸತಾಗಿ ಬಳಕೆಯಲ್ಲಿ ಬಂದಿರುವ ಸಿದ್ಧಗೃಹವೊಂದನ್ನು ನನಗೆ ಕಳುಹು. ನಾನು ಈ ಸುದ್ದಿಯನ್ನು ಯಾರಿಗೂ ಅರುಹದೆ ಗುಪ್ತವಾಗಿಡುತ್ತೇನೆ. ನನ್ನ ಮೇಲೆ ಕರುಣಿಸು. ನನ್ನನ್ನು ನಿರಾಶೆಗೊಳಿಸಬೇಡ.

ಇಂದ್ರ:– ಎಲೋ ದುರ್ದೈವಿಯಾದ ಮಾನವನೆ, ನಿನ್ನ ಕಷ್ಟವನ್ನು ಕೇಳಿ ನನ್ನ ಅಂತಃಕರಣವು ದ್ರವಿಸಿತು. ಮೃತ್ಯುಲೋಕದ ಮಾನವರಿಗೆ ಎಂಥೆಂಥ ತಾಪತ್ರಯಗಳು! ಇರಲಿ. ಇತ್ತೀಚೆಗೆ ನಾವು ಮೃತ್ಯುಲೋಕಕ್ಕೆ ಯಾವ

ಸಹಾಯವನ್ನೂ ಮಾಡುತ್ತಿಲ್ಲ. ಯಾಕೆಂದರೆ, ಅಲ್ಲಿಯ ಜನರು ಪರಸ್ಪರರ ದ್ವೇಷ, ಜಗಳಾಟಗಳಲ್ಲಿ ಮನುಷ್ಯತ್ವವನ್ನೇ ಮರೆತುಬಿಟ್ಟಿದ್ದಾರೆ. ನೀನೇನೊ ನನ್ನತನಕ ಬರುವ ಧೈರ್ಯ ಮಾಡಿದ್ದೀಯೆ. ಯಾಚನೆಗೆ ಬಂದವರನ್ನು ಬರಿಗೈಯಿಂದ ಕಳುಹುವುದು ನನ್ನ ಶೀಲವಲ್ಲ. ಆದ್ದರಿಂದ ನಿನ್ನ ಮನೋವಾಂಛಿತವನ್ನು ಪೂರ್ಣಗೊಳಿಸುತ್ತೇನೆ. ನೀನು ನಿನ್ನ ಹೆಂಡತಿ ಮಕ್ಕಳನ್ನು ಕೂಡಲೆ ಕರೆಯಿಸಿಕೊ.

ಸಂಸಾರಿಗ:– ಆಗಲಿ, ದೇವಾ. ತಂತಿಕೊಟ್ಟು ಇಂದೇ ಅವರು ಬರುವಂತೆ ಮಾಡುತ್ತೇನೆ!

[ದೇವೇಂದ್ರನು ಒಬ್ಬ ಅಪ್ಸರೆಯನ್ನು ಕರೆದು, ಬ್ರಹ್ಮಚಾರಿಯ ಬಳಿಗೆ ಹೋಗಬೇಕೆಂದೂ, ವಿಶ್ವಕರ್ಮನನ್ನು ಕರೆದು, ಒಂದು ಸಿದ್ಧಗೃಹವನ್ನು ಸಂಸಾರಿಗನಿಗೆ ತಲ್ಪಿಸಿ ಬರಬೇಕೆಂದೂ ಆಜ್ಞೆಯನ್ನಿತ್ತನು. ಅವರು ತಮ್ಮ ತಮ್ಮ ಸಿದ್ಧತೆಯೊಂದಿಗೆ ವಿಮಾನಾರೂಢರಾಗಿ ಮೃತ್ಯುಲೋಕಕ್ಕೆ ಬಂದು, ಅಲ್ಲಿಯ ಪೂರೈಕೆ ಮಂತ್ರಿಯನ್ನು ಕಂಡರು. 'ಸರಕಾರದ ಅಪ್ಪಣೆಯಿಲ್ಲದೆ ಯಾವುದೂ ಯಾರಿಗೂ ದೊರಕುವಂತಿಲ್ಲ' ಎಂಬ ಇಲ್ಲಿಯ ಕಾನೂನಿನ ಮೇರೆಗೆ ಅವರು ನಡೆಯಬೇಕಾಯಿತು. ಪೂರೈಕೆ ಮಂತ್ರಿಗಳು ಕೈಕೆಳಗಿನವರಿಗೂ, ಕೈಕೆಳಗಿನವರು ತಮ್ಮ ಕೈಕೆಳಗಿನವರಿಗೂ ಅಪ್ಪಣೆ ವಿಧಿಸುತ್ತ ನಡೆಸರು. ಅಪ್ಸರೆ–ವಿಶ್ವಕರ್ಮರು ಕೆಲವು ದಾರಿ ಉಗಿಬಂಡಿಯಲ್ಲಿ, ಕೆಲವು ಅಂತರವನ್ನು ಬಸ್ಸಿನ ಮೂಲಕ ಕ್ರಮಿಸಿ, ಕೊನೆಗೊಮ್ಮೆ ತಮ್ಮ ನಿರ್ದಿಷ್ಟ ಸ್ಥಳಕ್ಕೆ ಬಂದು ಮುಟ್ಟಿದರು. ಈ ಮಾರ್ಗಕ್ರಮಣದಲ್ಲಿ ಸಾರಿಗೆಯ ಅಧಿಕಾರಿಗಳ ತಪ್ಪಿನ ಮೂಲಕ ತಿರುವು-ಮುರುವಾಗಿ ಬ್ರಹ್ಮಚಾರಿಯ ಕಡೆಗೆ ವಿಶ್ವಕರ್ಮನೂ ಮುಪ್ಪಿನ ಸಂಸಾರಿಗನ ಕಡೆಗೆ ಅಪ್ಸರೆಯೂ ಹೋದರು.]

ಬ್ರಹ್ಮಚಾರಿ:– ಯಾರವರು, ಬಾಗಿಲು ತಟ್ಟುವವರು?

ವಿಶ್ವಕರ್ಮ:– ನಾನು ವಿಶ್ವಕರ್ಮ. ಬಾಗಿಲು ತೆರೆಯಿರಿ.

ಬ್ರಹ್ಮಚಾರಿ:– ನನ್ನ ಕಡೆಗೇನು ಕೆಲಸ?

ವಿಶ್ವಕರ್ಮ:– ದೇವೇಂದ್ರನಿಂದ ಬಂದಿದ್ದೇನೆ. ನಿಮಗಾಗಿ ಸಿದ್ಧಗೃಹವನ್ನು ತಂದಿದ್ದೇನೆ. ಅದನ್ನು ಎಲ್ಲಿರಿಸಲಿ?

ಬ್ರಹ್ಮಚಾರಿ:– ಸಿದ್ಧಗೃಹ? ನಾನು ದೇವೇಂದ್ರನಿಗೆ ಅಪ್ಸರೆಯನ್ನು ಕಳುಹಲು ಕೇಳಿಕೊಂಡಿದ್ದೆ! ನಿಮ್ಮ ಸಿದ್ಧಗೃಹವನ್ನು ತೆಗೆದುಕೊಂಡು ಏನು ಮಾಡಲಿ?

ಅದರಲ್ಲಿ ನೇಣುಹಾಕಿಕೊಂಡರೆ ಸರಿ! ನನಗೆ ಸಿದ್ಧಗೃಹ ಬೇಕಾಗಿಲ್ಲ, ಸಿದ್ಧ ಗೃಹಿಣಿ ಬೇಕು! ಅವಳಿಗಾಗಿ ಈಗ ೮ ವರ್ಷಗಳಿಂದಲೂ ಬಳಲುತ್ತಿದ್ದೇನೆ; ನನಗೆ ಈಗಿದ್ದ ಈ ಗೇಣಂಕಣದ ಕೋಣೆಯೇ ಸಾಕು. ಒಬ್ಬನೇ ಇರುವು ದಾದರೆ ಈ ಮಠವೇ ಇರಲಿ. ನೀವು ತಂದ ಮನೆ ನನಗೆ ಬೇಕಾಗಿಲ್ಲ. ಅದನ್ನು ಕಟ್ಟಿಕೊಂಡು ನೀವು ಸ್ವರ್ಗಕ್ಕೆ ತಿರುಗಿ ಹೋಗಿಬಿಡಿರಿ! ಅಯ್ಯೋ ಅದೃಷ್ಟವೆ!

[ವಿಶ್ವಕರ್ಮನು ನಿರುಪಾಯನಾಗಿ ಮನೆಯನ್ನು ಬೆನ್ನಿಗೆ ಕಟ್ಟಿಕೊಂಡು ಸ್ವರ್ಗಕ್ಕೆ ಮರಳುವನು. ಇತ್ತ ಅಪ್ಸರೆ ಮುದುಕನಾದ ಸಂಸಾರಿಗನತ್ತ ಹೋಗುವಳು. ಅವನು ರೈಲು ನಿಲ್ದಾಣದ ಪ್ಲಾಟ್‌ಫಾರ್ಮಿನ ಮೇಲೆಯೇ ಹೆಂಡತಿಮಕ್ಕಳೊಡನೆ ವಾಸ್ತವ್ಯ ಮಾಡಿರುತ್ತಾನೆ. ಅಪ್ಸರೆ ಅಲ್ಲಿಗೆ ಹೋದಾಗ, ಸಂಸಾರಿಗನ ಹೆಂಡತಿ ಮಕ್ಕಳು ಮಲಗಿ ನಿದ್ರೆಹೋಗಿರು ತ್ತಾರೆ. ಸಂಸಾರಿಗ ಮಾತ್ರ ಸ್ವರ್ಗದ ಕಡೆಗೆ ಕಣ್ಣಿಟ್ಟು ಸಚಿಂತನಾಗಿ ಕುಳಿತುಬಿಟ್ಟಿರುತ್ತಾನೆ.]

ಅಪ್ಸರೆ:– ಇಂದ್ರನ ಕಡೆಗೆ ಬಂದವರು ತಾವೇ ಏನು?

ಸಂಸಾರಿಗೆ:– ಹೌದಮ್ಮಾ, ಯಾಕೆ? ತಾವು ಇಂದ್ರಲೋಕದಿಂದ ಬಂದಿದ್ದೀರಾ?

ಅಪ್ಸರೆ:– ಅಹುದು! ತಮ್ಮ ಸೇವೆಗೆ ಬಂದಿದ್ದೇನೆ.

ಸಂಸಾರಿಗೆ – ನನ್ನ ಸೇವೆಗೆ? ಅಯ್ಯೋ ರಾಮಾ ರಾಮಾ! ತಮ್ಮಂಥ ಸ್ವರ್ಗಾಂಗನೆ ಯರು ನನ್ನ ಸೇವೆಮಾಡುವುದೆ?

ಅಪ್ಸರೆ:– ತಾವು ಸಂಕೋಚಪಟ್ಟುಕೊಳ್ಳಬಾರದು. ನಮ್ಮ ಒಡೆಯನಾದ ದೇವೇಂದ್ರನು ನನಗೆ ಅಪ್ಪಣೆ ವಿಧಿಸಿದ್ದಾನೆ. ನಾನು ಸದ್ಯಕ್ಕೆ ತಮ್ಮ ದಾಸಿ–ತಮಗೆ ಸುಖಕೊಡಲು ಬಂದಿದ್ದೇನೆ.

ಸಂಸಾರಿಗೆ:– ಅಯ್ಯೋ ಮಹಾರಾಯಿತಿ, ಆ ಕೆಲಸವನ್ನು ಮಾತ್ರ ಸರ್ವಥಾ ಮಾಡಬೇಡ! ತುಸು ಮೆತ್ತಗೆ ಮಾತನಾಡು! ನನ್ನ ಹೆಂಡತಿ ಇಲ್ಲಿಯೇ ಮಲಗಿದ್ದಾಳೆ.

ಅಪ್ಸರೆ:– ಅಂದರೆ ತಾವು ಬ್ರಹ್ಮಚಾರಿಗಳಲ್ಲವೆ?

ಸಂಸಾರಿಗೆ:– ಹ ಹ ಹ! ಬ್ರಹ್ಮಚಾರಿ! ಹೌದು ಬ್ರಹ್ಮಚಾರಿಯೇ ನಿಜ. ಹೆಂಡತಿ ಇದ್ದೂ ಈಗ ೮ ವರ್ಷ ಬ್ರಹ್ಮಚಾರಿಯಂತೆ ಕಾಲ ಕಳೆವೆ. ಮನೆ ಇಲ್ಲದ್ದ ಕ್ಕಾಗಿ ನಾನು ಬ್ರಹ್ಮಚಾರಿ ಆಗಿದ್ದೇನಾಗಲಿ ಹೆಂಡತಿ ಇಲ್ಲದ್ದಕ್ಕಾಗಿ ಅಲ್ಲ.

ಅಪ್ಸರೆ:– ಹಾಗಾದರೆ ನೀವು ದೇವೇಂದ್ರನಿಗೆ ಕೇಳಿದ್ದೇನು? ಮನೆಯನ್ನೋ–ನನ್ನನ್ನೋ?

ಸಂಸಾರಿಗ:– ನಿನ್ನನ್ನು ಕೇಳಿ ನಾನು ಯಾವ ಸುಡುಗಾಡಿಗೆ ಹೋಗಲಿ? ನನಗೊಂದು ಮನೆ ಸಿಕ್ಕರೆ ನನ್ನ ಹೆಂಡತಿಯೇ ನನಗೆ ಅಪ್ಸರೆ. ನಾನು ದೇವೇಂದ್ರನಿಗೆ ಕೇಳಿದ್ದು ಮನೆಯಾಗಲಿ, ನಿನ್ನನ್ನಲ್ಲ ಮಹಾರಾಯಿತಿ! ಹೆಚ್ಚು ಕಾಲ ಇಲ್ಲಿ ನಿಲ್ಲಬೇಡ. ದಯಮಾಡಿ ಬೇಗನೆ ನಿನ್ನ ಸ್ವಸ್ಥಾನಕ್ಕೆ ತೆರಳು. ನಿನ್ನ ಮಾತಿಗೆ ನನ್ನ ಹೆಂಡತಿ ಎಚ್ಚತ್ತು, ನಿನ್ನನ್ನು ನನ್ನೊಡನೆ ನೋಡಿದಳೆಂದರೆ, ಬಂದ ಹಾದಿಯಿಂದ ತಿರುಗಿ ಹೋದಾಳು. ಆ ಮೇಲೆ ಮನೆಯೂ ಇಲ್ಲ, ಮಡದಿಯೂ ಇಲ್ಲದಂತಾದರೆ ನಾನು ಇಂದೇ ಸ್ವರ್ಗಸ್ಥನಾಗಬೇಕಾದೀತು! ಇನ್ನೂ ಮಕ್ಕಳ ಮದುವೆ ಮಾಡಬೇಕಾಗಿದೆ. ಪೆನ್‌ಶನ್ ಪಡೆಯಬೇಕಾಗಿದೆ. ಆಗಲಿ, ನೀನಿನ್ನು ಹೊರಡು! ಹೆಂಡತಿ ಮಕ್ಕಳೊಡನೆ ಕೂಡಿಕೊಂಡಿರುವುದು ನನ್ನ ದೈವದಲ್ಲಿಯೆ ಇಲ್ಲದಿರುವಾಗ ದೇವೇಂದ್ರನಾದರೂ ಏನು ಮಾಡಿಯಾನು?

ಅಪ್ಸರೆ:– ಹಾಗಾದರೆ ನಾನು ಹೊರಡಲಾ?

ಸಂಸಾರಿಗ:– ಆಗಲಿ.

[ವಿಶ್ವಕರ್ಮನೂ ಅಪ್ಸರೆಯೂ ದೇವಲೋಕಕ್ಕೆ ಮರಳಿ ಬಂದು ದೇವೇಂದ್ರನಿಗೆ ತಮ್ಮ ತಮ್ಮ ಕಾರ್ಯದ ವರದಿಯನ್ನೊಪ್ಪಿಸಿ, ತಾವು ಪೂರೈಕೆ ಹಾಗು ಸಾರಿಗೆ ಖಾತೆಯ ಅಪ್ಪಣೆಗೆ ಒಳಗಾಗಿ ನಡೆಯಬೇಕಾದುದರಿಂದ ಹೀಗಾಯಿತಾಗಲಿ ತಮ್ಮ ಕಡೆಗೇನೂ ದೋಷವಿಲ್ಲೆಂದು ಬೆಸಗೊಂಡರು. ದೇವೇಂದ್ರನು ಬ್ರಹ್ಮಚಾರಿಯನ್ನೂ ಸಂಸಾರಿಗನನ್ನೂ ಕರೆಕಳುಹಿದನು.]

ಇಂದ್ರ:– ಎಲೈ ದುರ್ದೈವಿಯಾದ ತರುಣನೆ, ಈಗ ನೀನೆನ್ನುವುದೇನು?

ಬ್ರಹ್ಮಚಾರಿ:– ದೇವಾ, ನನ್ನ ಬ್ರಹ್ಮಚರ್ಯದ ಬವಣೆಯನ್ನು ನೀಗಿಸಿಕೊಳ್ಳಬೇಕೆಂದು ದೇವಾಧಿದೇವನಾದ ನಿನ್ನನ್ನು ಆಶ್ರಯಿಸಿದೆ. ನೀನು ಕರುಣೆಯನ್ನು ತೋರಿ, ಭೂಮಿಯಲ್ಲಿ ಯಾವ ತರುಣನಿಗೂ ದೊರೆಯದವಳಾದ ಅಪ್ಸರೆಯನ್ನು ಕಳುಹಿದರೂ ನನಗೆ ಅವಳು ಲಭಿಸಲಿಲ್ಲ. ಭೂಮಿಯ ಮೇಲೆ ಈಗ ಎಲ್ಲೆಡೆಯಲ್ಲಿಯೂ ಹೀಗೆಯೇ ನಡೆದಿದೆ. ಬೇಕಾದದ್ದು ದೊರೆಯುವುದಿಲ್ಲ, ಬೇಡವಾದದ್ದು ನಮ್ಮ ಪಾಲಿಗೆ ಬರುತ್ತದೆ.

ಇಂದ್ರ:– ನಿನ್ನ ವೃತ್ತಾಂತ ಕೇಳಿದಂತಾಯಿತು. ಸಂಸಾರಿಗನು ಏನು ಹೇಳುತ್ತಾನೆ?

ಸಂಸಾರಿಗ:– ಹೇ ಶಚೀಪತಿ, ಮಡದಿ–ಮಕ್ಕಳೊಡಗೂಡಿ ಬಾಳುವೆ ಮಾಡಿಕೊಂಡು ನಿಲ್ಲಬೇಕೆಂದರೆ ಒಂದು ತಾಣವಿಲ್ಲದೆ ಬಳಲಿದವನಾದ ನನ್ನ ಪಡಿಪಾಟಲನ್ನು ಕೇಳಿ, ನೀವು ಸುಂದರವಾದ ಒಂದು ಸಿದ್ಧಗೃಹವನ್ನು ಕಳುಹಿದರೆ, ನನ್ನ ಪಾಲಿಗೆ ಗೃಹ ಹೋಗಿ ಅಪ್ಸರೆ ಬರಬೇಕೆ? ಪಾಲಿಗೆ ಬಂದದ್ದನ್ನು ಬಿಡಬಾರದು ಎಂಬ ಮನಸ್ಸುಳ್ಳವನು ನಾನಲ್ಲ. ಆದುದರಿಂದ ಅಪ್ಸರೆಯನ್ನು ಹಿಂದಿರುಗಿ ಕಳುಹಿದೆ. ಇಂಥದಕ್ಕೆ ಆಶೆಮಾಡಿ ಮೈ ಸುಟ್ಟುಕೊಂಡ ಅನುಭವ ನಿಮಗೂ ಇದೆ! ಅದು ಹಾಗಿರಲಿ. ಕೊಡುವ ದೇವರು ಕೊಟ್ಟರೂ ನಮ್ಮನ್ನು ಕಾಡುವ ಕಾಲ ಇನ್ನೂ ಮುಗಿದಿಲ್ಲ.

ಇಂದ್ರ:– ಎಲೋ ಮೃತ್ಯುಲೋಕದ ಮಾನವಪ್ರಾಣಿಗಳೇ, ನೀವು ವಿವೇಕದಿಂದ ನಡೆದರೆ ನಿಮ್ಮ ಮೃತ್ಯುಲೋಕವನ್ನೇ ಸ್ವರ್ಗವಾಗಿಸಬಹುದು! ಆಗ ನಾವು ಕೂಡ ಅಲ್ಲಿಗೆ ಬರಲು ಅಪೇಕ್ಷಿಸುತ್ತೇವೆ. ನಿಮ್ಮಲ್ಲಿಯೇ ವಿವೇಕವಿಲ್ಲದಾಗ ನಾವು ಕೊಟ್ಟರೂ ನಿಮಗದು ಲಭಿಸುವುದಿಲ್ಲ. ಹೋಗಿರಿ, ಆ ವಿವೇಕವನ್ನು ಮೊದಲು ಎಲ್ಲರೂ ನಿಮ್ಮಲ್ಲಿ ಬೆಳೆಯಿಸಿಕೊಳ್ಳಿರಿ!

ಬ್ರಹ್ಮಚಾರಿ ಮತ್ತು ಸಂಸಾರಿಗ:– ಆಗಲಿ ಪ್ರಭೊ! ದೈವದಲ್ಲಿಲ್ಲದಾಗ ದೇವೇಂದ್ರನಾದರೂ ಏನು ಮಾಡಿಯಾನು?

[ಎನ್ನುತ್ತ ಅವರು ಮೃತ್ಯುಲೋಕಕ್ಕೆ ಇಳಿಯುತ್ತಿರುವಾಗ ಅವರ ದನಿ ವಾತಾವರಣದಲ್ಲಿ ವಿಲೀನವಾಗುವುದು.]

ಕುಂಭಕರ್ಣ

★

ಪಾತ್ರಗಳು :

ಶಂಕರಣ್ಣ:	...	...	ತಂದೆ	....		
ಶ್ಯಾಮು:	...	...	ಮಗ	....	ವಯಸ್ಸು	೧೩
ರಾಮು:	...	....	,,	....	,,	೧೦
ಇಟ್ಟಿ:	....	...	ಮಗಳು	....	,,	೭

[ಹೊತ್ತು ರಾತ್ರಿ ೮ ಗಂಟೆ ಶ್ಯಾಮು, ರಾಮು, ಇಟ್ಟಿ, ಅಭ್ಯಾಸಮಾಡಲು ಕೂತಿದ್ದಾರೆ. ತಂದೆ ಶಂಕರಣ್ಣ ಬೀಡಿ ತರಲು ಹೊರಡುತ್ತಾನೆ.]

ಶಂಕರಣ್ಣ:– ಶ್ಯಾಮ್ಯಾ, ರಾಮ್ಯಾ, ನಾ ಅಂಗಡಿಗೆ ಹೋಗಿ ಬೀಡಿ ತರ್ತೀನಿ. ನೀವು ಅನಕಾತ ಅಭ್ಯಾಸ ಮಾಡಿಕೋತ ಕೂಡ್ರಿ. ಬಂದಮ್ಯಾಲ ಊಟಕ್ಕ ಬಡಿಸ್ತೀನಿ. ಈಕಿ ಅರಿಷಿಣಾ ಕುಂಕುಮಕ್ಕ ಹೋದಾಕಿ ಇನ್ನೂ ಬರಲಿಲ್ಲ. ಸತಗೋವಳ್ಯಾಕ ಅಲ್ಲೇ! ಏ ಇಟ್ಟೀ, ನೀನೂ ಅಕ್ಷರ ತೀಡಿಕೋತ ಕೂಡು, ಹಂ. ಈಗ ಬರ್ತೀನಿ. ಯಾರೂ ನಿದ್ದಿ ಹೋಗಬ್ಯಾಡ್ರಿ ಮತ್ತ.

[ಎಲ್ಲರೂ ಹುಂ ಹುಂ ಎನ್ನುತ್ತಾರೆ ಶಂಕರಣ್ಣ ಹೊರಡುತ್ತಾನೆ. ಶ್ಯಾಮು, ರಾಮು, ಓದುವುದರಲ್ಲಿ ತೊಡಗುವರು. ಇಟ್ಟಿ ಪಾಟಿಯನ್ನು ತರುವಾಗ ಜಮಖಾನೆಯ ಹರಕಿನಲ್ಲಿ ಕಾಲು ತೊಡಕಿ ಮುಗ್ಗರಿಸುತ್ತಾಳೆ. ಕೈಯೊಳಗಿನ ಪಾಟಿ ನೆಲಕ್ಕೆ ಅಪ್ಪಳಿಸಿ ಒಂದು ಕಡೆಯ ಕಟ್ಟು ಉಚ್ಚಿ, ಮೂಲೆಯಲ್ಲಿ ತುಂಡಾಗುತ್ತದೆ. ಇಟ್ಟಿ ಅಳುವ ದನಿ ಕೇಳಬರುತ್ತದೆ.]

ಶ್ಯಾಮು:– ಏಳು, ಏಳು. (ಇಟ್ಟಿಯನ್ನು ಎಬ್ಬಿಸುತ್ತಾನೆ.) ನಿನ್ನೇನು ಮಂದಿ ಕೆಡವಿದರೇನು, ಹ್ಹಂಯ್ ಅಂತ ಅಳ್ಳಿಕ್ಕೆ ?

[ಇಟ್ಟಿ ಅಳುವ ದನಿ ಕಡಿಮೆಯಾಗುತ್ತದೆ. ಶ್ಯಾಮು, ರಾಮು, ಮತ್ತೆ

ಇಟ್ಟಿ:- ಅಪ್ಪ ನಿಮಗ ಬೈಯೋದನ್ನ ಕೇಳಿ ಅಂದೆ.

ರಾಮು:- ಸಾಕು, ಸುಮ್ಮನೆ ಕೂಡು. ಅಪ್ಪ ಬೈದ್ರ ಆದs ಖರೆಯೇನು? ನಿನಗೂ ಅಪ್ಪ ಹುಚ್ಚುಮುಂಡೆ ಅಂತಾನಲ್ಲ!

ಇಟ್ಟಿ:- ಯಾಕೊ ಬೋಳ್ಯಾ! ನಾ ಇಲ್ಲಿ ಕೂಡೋದs ಇಲ್ಲ ಹೋಗು.

ಶ್ಯಾಮು:- ಕೂಡದಿದ್ರ, ಹೋಗು ಹಾಳಾಗಿ. ಇತಿಹಾಸದ ಪಾನು ಹರದsದ. ನಾ ರಾಮಾಯಣದ ಕಥಿ ಓದ್‌ತೀನಿ.

ರಾಮು:- ನಾ ಭಾರತದ ಕಥಿ ಓದ್‌ತೀನಿ!

ಇಟ್ಟಿ:- ಹಂಗಾರ ನಾ ಕೂತು ಕೇಳೋ ಆಕೇ!

ಶ್ಯಾಮು:- (ಸುಳ್ಳೇ ಓದುವವನಂತೆ) ದಶರಥ ರಾಜನಿಗೆ ರಾಮ, ಲಕ್ಷ್ಮಣ, ಸೀತಾ, ಹನುಮಂತಾ ಎಂದು ನಾಲ್ಕು ಮಕ್ಕಳಿದ್ದರು.

ರಾಮು:- ಏ ಮಗನ, ಸೀತಾ ಹನುಮಂತಾ ದಶರಥನ ಮಕ್ಕಳೇನು?

ಶ್ಯಾಮು:- ನಮ್ಮ ಪುಸ್ತಕದಾಗ ಹಾಂಗs ಅದ! ಹಾಂಗಿರದಿದ್ರೂ, ನಾ ಹಾಂಗs ಓದsವ! ನೀಯೇನು ಮಾಡ್ತೀ?

ರಾಮು:- ಓದು, ನಿನಗ್ಯಾರು ಬ್ಯಾಡಂತಾರ? (ಪುಸ್ತಕವನ್ನು ತೆರೆದು) ನಾ ಭಾರತಾ ಓದ್‌ತೀನಿ? ಧರ್ಮರಾಜನಿಗೆ ಅಕಬರ್, ಹುಮಾಯೂನ್, ಜಹಾಂಗಿರ್, ಔರಂಗ್‌ಜೇಬ್ ಎಂದು ನಾಲ್ವರು ತಮ್ಮಂದಿರಿದ್ದರು.

ಶ್ಯಾಮು:- ಅವರು ಯಾವಾಗಲೂ ಬಡಿದಾಡುತ್ತಿದ್ದರು.

ರಾಮು:- ನಾವಿಬ್ಬರೂ ಬಡಿದಾಡಿಧಾಂಗ!

ಶ್ಯಾಮು:- ಯಾಕ ರಾಮ್ಯಾ, ನನ್ನ ಓದಿನಾಗ ಬರಬ್ಯಾಡ ಅಂತ ಹೇಳಲಿಲ್ಲೇನು?

ರಾಮು:- ನನ್ನ ಪುಸ್ತಕದಾಗಿಂದು ನಾ ಓದ್‌ತೀನಿ!

ಶ್ಯಾಮು:- ನಿನ್ನ ಪುಸ್ತಕದಾಗ ಹೀಂಗs ಅದಯೇನು?

ರಾಮು:- ಇರದಿದ್ರೂ ನಾ ಹಾಂಗs ಓದಂವ! (ಮತ್ತೆ ಓದುವನು.) ಧರ್ಮರಾಜನಿಗೆ ರಾವಣ, ಕುಂಭಕರ್ಣ ಎಂದು ಇಬ್ಬರು ಮಕ್ಕಳು ಹುಟ್ಟಿದರು.

ಶ್ಯಾಮು:- ಯಾಕ? ರಾವಣ ಕುಂಭಕರ್ಣ ನನ್ನ ರಾಮಾಯಣದಾಗಿನವರು; ನಿನ್ನ ಭಾರತದಾಗ ಓದಿದಿ ಅಂದ್ರ ಮಸಡಿಗೆ ಕೊಟ್ಟೇನು!

ರಾಮು:- ರಾಮಾಯಣಕ್ಕ ಅವನ್ನೇನು ಗುತ್ತಿಗೀ ಕೊಟ್ಟsದೇನು? ಅಪ್ಪ ನಿನಗ ಹೆಸರಿಟ್ಟಿಲ್ಲೇನು ಕುಂಭಕರ್ಣ ಅಂತ! ಕಲಿಯುಗದ ಕುಂಭಕರ್ಣ!

ಶ್ಯಾಮು:– ಮತ್ತ ನೀನು?

ರಾಮು:– ಕಲಿಯುಗದ ರಾಮಚಂದ್ರ! ನನ್ನ ಹೆಸರು ರಾಮು ಅಂತ ಅದs ನೆs ಅದ!

ಶ್ಯಾಮು:– ರಾಮುನ ಹೆಣ್ತಿನ್ನ ರಾವಣ ಕುಂಭಕರ್ಣ ಒಯ್ಯಾರ ನೋಡು, ಗೊತ್ತದs ನೋ ಇಲ್ಲೊ?

ರಾಮು:– ಅದಕ್ಕs ಅವರ್ನ ಕೊಂದುಹಾಕ್ತಾನಲ್ಲ ರಾಮು– ಬಿಡ್ತಾನೇನು?

ಶ್ಯಾಮು:– ಅಪ್ಪ ಬರೋ ಹೊತ್ತಾತು. ನಾ ನಿಬಂಧ ಬರಕೊಂಡು ಹೋಗಬೇಕು – ನಾಳಿಗೆ. ನನ್ನ ತಡವಬ್ಯಾಡ ಇನ್ನ! ತೂಕಡಿಸ್ತೀ ಏನs ಇಟ್ಟೀ? ನನಗೂ ನಿದ್ದಿ ಬರ್‍ತಾ ಅದ ಈಗಾಗಲೇ! (ನಿಬಂಧ ಬರೆಯಲು ತೊಡಗುವನು.)

ರಾಮು:– ಯಾವ ನಿಬಂಧಲೇ?

ಶ್ಯಾಮು:– ‘ಸಭ್ಯತನ.’

ರಾಮು:– ಅಂದ್ರೇನು?

ಶ್ಯಾಮು:– ಒಳ್ಳೇ ರೀತಿಯಿಂದ ನಡಿಯೋದು.

ರಾಮು:– ನೀನು ನಡೀತೀಯೇನು?

ಶ್ಯಾಮು:– ಬರೇ ನಿಬಂಧ ಬರಿಯೋದು! ಹಾಂಗ ನಡೀತಿರ್‍ತಾರೇನು, ಹುಚ್ಚಾs!

ರಾಮು:– ಮತ್ತ ಗಾಂಧಿಯವರು ಆಡಿಧಾಂಗ ನಡೀಲಿಲ್ಲೇನು?

ಶ್ಯಾಮು:– ಮತ್ತದಕs ಕೊಂದುಹಾಕಲಿಲ್ಲೇನು ಅವರ್ನ? ಸತ್ಯ, ಸಭ್ಯತನ ನಡಿಯೋದಕ್ಕಲ್ಲ!

ರಾಮು:– ಭಾಳ ಶಾಣ್ಯಾ ಇದ್ದೀದಿ. ಅದರಂತೆ ನಡೀಬೇಕು ಅಂತಿರೋದು.

ಶ್ಯಾಮು:– ಯಾಂವ ನಡೀತಾನ? ಮಾಸ್ತರ್‍ರು ನಮಗ ಹೇಳಿಧಾಂಗ ತಾವು ನಡೀತಾರೇನು? ಅಪ್ಪ ತಾ ಬೀಡಿ ಸೇದ್‌ತಾನ; ನಾವು ಸೇದಿದ್ರ ಸುಮ್ನಿರ್‍ತಾನೇನು?

ರಾಮು:- ಅಪ್ಪ ಬರ್‍ಲಿ– ಇದನ್ನ ಹೇಳೀಬಿಡ್ತೀನಿ.

ಶ್ಯಾಮು:– ಹೇಳಿದ್ರ ಹೇಳಿದಿ, ಹೋಗು! ನಾ ಬರ್‌ಕೋತ ಕೂತುಬಿಡ್ತೀನಿ. ನಿದ್ದಿ ಬರೋದ್‌ರಾಗs ಇದನ್ನ ಮುಗಿಸಬೇಕು! (ಬರೆಯುತೊಡಗುವನು.)

ರಾಮು:– ಏ ಇಟ್ಟೀ, ಏಳs! ಮಲಕೊಂಡsಬಿಟ್ಟಿತು! ನಾ ಇನ್ನೂ ಕವಿತಾ ಪಾಠ ಮಾಡಬೇಕಾಗೇದ; ಅದನ್ನsರೇ ಮಾಡೋಣು. (ಕವಿತಾ ದನಿತೆಗೆದು) ‘ಉತ್ತರ ಧ್ರುವದಿಂ ದಕ್ಷಿಣ ಧ್ರುವಕು ಚುಂಬಕ ಗಾಳಿಯು ಬೀಸುತಿದೆ.’

ಶ್ಯಾಮು:– ಏನು ಕೆಟ್ಟ ಧನೀಲೆ ಕೂಗ್ತೀಯಲೆ? ಆ ರಿಕಾರ್ಡು ಹಚ್ಚಿ

ಅದರ್ಹಾಂಗಾರೆ ಪಾಠಮಾಡು.

ರಾಮು:– ಈಗ ಫೋನೊ ಹಚ್ಚಿದ್ರ ಅಪ್ಪ ಬೈದುಗೀದಾನಪಾ.

ಶ್ಯಾಮು:– ಬೈತಾನ್ಯಾಕ? ಅದೂ ಕವಿತಾ ಪಾಠಮಾಡೋದದ ಅಂತ ಹೇಳಿದರಾತು.

ರಾಮು:– ಹಾಂಗs ಮಾಡ್ತೀನಿ ನಿಂದ್ರು.

[ರಾಮು ಫೋನೊ ತಂದು 'ಉತ್ತರ ಧ್ರುವದಿಂ' ರಿಕಾರ್ಡು ಹಚ್ಚುವನು. ರಿಕಾರ್ಡಿನ ಸಂಗೀತ ಮುಗಿಯುವ ಹೊತ್ತಿಗೆ ಶಂಕರಣ್ಣ ಬರುವನು. ಶ್ಯಾಮು ತೂಕಡಿಸತೊಡಗುವನು.]

ಶಂಕರಣ್ಣ:– ಅಭ್ಯಾಸ ಮಾಡೋದು ಬಿಟ್ಟು ಫೋನೋ ಹಚ್ಚಿಕೊಂಡು ಕೂತೀರೇನು? ಇಟ್ಟಿ ಮಲಗೇಬಿಟ್ಟಾಳಲ್ಲ! ಇಂವ ಕುಂಭಕರ್ಣ ತೂಕಡಿಸ್ತಾ ಇದ್ದಾನ. ಅಭ್ಯಾಸಕ್ಕೂ ಕೂತಾ ಅಂದ್ರ ಕಣ್ಣುಮುಚ್ಚೀ ಪುಸ್ತಕಾ ತೆರೀತಾನ, ಲೌಡೀಗಂಡ! ರಾಮ್ಯಾ, ನಾನು ಎಲೀ ಬಡಿಸಿ ಕರೀತಿನಿ. ಇಬ್ಬರ್ನೂ ಎಬ್ಬಿಸಿಕೊಂಡು ಬಾ. ಕೂಳು ತಿಂದು ಬೀಳ್ರಿ; ಅಂದ್ರ ಇವತ್ತಿನ ಕೆಲಸ ಮುಗಧಾಂಗಾತು! ಆಕಿ ಯಾವಾಗ ಬರ್ತಾಳೋ ಬಲ್ಲಿ.

ರಾಮು:– ಅಪ್ಪಾ, ನೀ ತಾಟು ಹಾಕೋತನಕ ನಾ ಇನ್ನೊಂದು ಹಾಡು ಹಚ್ ತೀನೋ? ಅದನ್ನೂ ಪಾಠಮಾಡಿಕೊಂಡು ಬರ್ರಿ ಅಂತ ಮಾಸ್ತರ್ರು ಹೇಳ್ಯಾರ!

ಶಂಕರಣ್ಣ:– ಹಚ್ಚಿಕೊಂಡು ಬಾರ್ಲು ಬೀಳು; ಲಗು ಬರ್ರಿ.

[ಶಂಕರಣ್ಣ ಅಡಿಗೆಯ ಮನೆಗೆ ಹೋಗುತ್ತಾನೆ. ರಾಮು ರಿಕಾರ್ಡು ತಿರುವಿ ಹಚ್ಚುತ್ತಾನೆ. ಅದರಲ್ಲಿ 'ನನ್ನ ಹರಣ ನಿನಗೆ ಶರಣ' ಎಂಬ ಹಾಡು ಕೇಳ ಬರುತ್ತದೆ. ಮುಗಿಯುವ ಹೊತ್ತಿಗೆ ಒಳಗಿಂದ ಶಂಕರಣ್ಣನ ಕೂಗು— 'ಶ್ಯಾಮ್ಯಾ, ರಾಮ್ಯಾ ಬರ್ರಿನ್ನ'.]

ರಾಮು:– ಏ ಶ್ಯಾಮ್ಯಾ, ಏಳೋ, ಅಪ್ಪ ಊಟಕ್ಕ ಕರೀತಾನ. ಏ ಇಟ್ಟೀ, ಇಟ್ಟೀ, ಏಳು, ಏಳು.

[ಇಬ್ಬರನ್ನೂ ರಾಮು ಎಬ್ಬಿಸುತ್ತಾನೆ. ಶ್ಯಾಮು ನಿದ್ದೆಯಲ್ಲಿಯೇ ಎದ್ದು ನಿಲ್ಲುತ್ತಾನೆ. ರಾಮು ಇಟ್ಟಿನ್ನ ರಟ್ಟೆ ಹಿಡಿದು ಎತ್ತಿ ನಿಲ್ಲಿಸುತ್ತಾನೆ. ಅವಳು ಜೋಲಿಹೋಗಿ ಶ್ಯಾಮುನ ಮೇಲೆ ಬೀಳುತ್ತಾಳೆ. ಶ್ಯಾಮು ಜೋಲಿ ತಾಳಲಾರದೆ ಫೋನೋಕ್ಕೆ ಕಾಲು ತಾಕಿಸುತ್ತಾನೆ. ಆ ಪೆಟ್ಟಿಗೆ ಧ್ವನಿವಾಹಕದ ಮುಳ್ಳು ಜೋರಾಗಿ ಒತ್ತಿದಂತಾಗಿ ರಿಕಾರ್ಡು ಕೆಡುತ್ತದೆ.]

ರಾಮು:– ಅಪ್ಪಾ, ಶ್ಯಾಮು ಪ್ರೊನೋಕ್ಕ ಕಾಲು ತಾಕಿಸಿದ, ಮತ್ತ ರಿಕಾರ್ಡು....

ಶಂಕರಣ್ಣ:– (ಹೊರಗೆ ಬರುತ್ತ) ಏನು ರಿಕಾರ್ಡು ಬ್ರೇಕ್ ಮಾಡಿದ್ನ? ಹೀಂಗ ಮಾಡಿದ್ರs ಮಾಡಿದ್ಹಾಂಗ ನೀವು! ಯಾವ್ದಾದರೂ ವಿಷಯದಾಗ ರಿಕಾರ್ಡು ಬ್ರೇಕ್ ಮಾಡೋದು ನಿಮ್ಮ ಹಣೇಬರಹಾಗs ಬರ್ದಿಲ್ಲ!

ರಾಮು:– ಒಡದಿಲ್ಲಪಾ! ಬರೇ ಗೀಚಿನ್ಹಾಂಗಾಗಿ ಒಂದು ಕಡೆ ಸಣ್ಣ ಕುಣಿ ಬಿದ್ಹಾಂಗಾಗೇದ. ಇನ್ನ ಅದನ್ನ ಹಚ್ಚಿದ್ರ ತಿರಿತಿರಿಗಿ ಅದs ನುಡಿ ಕೇಳಿಸ್ತದ ಹಾಡಿನಾಗ! ನನಗ ಪಾಠ ಮಾಡಲಿಕ್ಕೆ ನೆಟ್ಟಗಾತು!

ಶಂಕರಣ್ಣ:– ತಲಿ ಬೋಳಿಸಿತು! ನಡೀರಿನ್ನ ಕೂಳಿಗೆ. ಏ ಶ್ಯಾಮ್ಯಾ, ಕಣ್ಣು ತಿಕ್ಕೋತ ನಿಂದ್ರಬ್ಯಾಡ, ವೀರಗಲ್ಲಿನ್ಹಾಂಗ! ರಾಮ್ಯಾ, ನಾ ಇಟ್ಟಿನ್ನ ಎತ್ತಿಗೋತೀನಿ, ನೀ ಶ್ಯಾಮ್ಯಾನ್ನ ರಟ್ಟ್ಯಾಗ ಕೈಹಾಕಿ ತಗೊಂಡು ಬಾ!

[ಶಂಕರಣ್ಣ ಇಟ್ಟಿನ್ನ ಎತ್ತಿಕೊಂಡು ಹೋಗುತ್ತಾನೆ. ರಾಮುನು ಶ್ಯಾಮು ನನ್ನು ಕೈಹಿಡಿದು ಕರೆದೊಯ್ಯುತ್ತಾನೆ. ಶ್ಯಾಮು, ರಾಮು, ಇಟ್ಟಿ, ಶಂಕರಣ್ಣ ಎಲ್ಲರೂ ಊಟಕ್ಕೆ ಕೂಡುತ್ತಾರೆ.]

ಶಂಕರಣ್ಣ:– ಏ ಶ್ಯಾಮ್ಯಾ, ನೆಟ್ಟಗ ಕಣ್ಣು ತಗಿ. ಕೂಳಿಗೆ ಕೂತೀದಿ ಎಲಿ ಮ್ಯಾಲ! ಎಚ್ಚರಾತೋ ಇಲ್ಲೊ ?

ಶ್ಯಾಮು:– ಹುಂ.

ಶಂಕರಣ್ಣ:– ಹುಂ ಏನು ನಿನ್ನ ತಲಿ? ನೋಡು ಕಣ್ಣು ತೆಗೆದು! ಆಗಲೆ ಕಣ್ಣು ಸೇದಿಕೋಪುವು! ಯಾಕೋ ಶ್ಯಾಮ್ಯಾ ....

ಶ್ಯಾಮು:– ಇಲ್ಲಪಾ ಓದ್‌ತೀನಿ.

ಶಂಕರಣ್ಣ:– ಓದ್‌ತೀನಿs? ಎಲಾ ಲೌಡಿಗಂಡ! ಉಣ್‌ತೀನಿ ಅನ್ನೊ! ಓದ್‌ತಿ ಯೇನು ಹಿಂಡೀಕೂಳು! ರಾಮ್ಯಾ, ಅವನ ಕಣ್ಣಿಗಿಷ್ಟು ಥಣ್ಣೀರು ಬಡಿ! (ರಾಮು ಹಾಗೇ ಮಾಡುತ್ತಾನೆ.)

ರಾಮು:– ಅಪ್ಪಾ, ಚಟ್ಣಿ ಸಾರಿನಾಗ ಕಲಿಸಿದ!

ಶಂಕರಣ್ಣ:– ಅದನ್ನs ಎತ್ತಿ ಅವನ ಕಣ್ಣಾಗ ಸುರುವು! ಏ ಶ್ಯಾಮ್ಯಾ!

ಶ್ಯಾ...ಮು:– ಎಚ್ಚರಾಗೇದಪಾ, ಉಣ್‌ತೀನಿ.

ಶಂಕರಣ್ಣ:– ಏನು ಉಣ್‌ತಿದಿ! ಅದು ನೋಡು ಚಪಾತಿ, ಕಾಣಿಸ್ತsದೇನು?

ಶ್ಯಾಮು:– ಕಾ...ಣಿಸ್ತsದ.

ಶಂಕರಣ್ಣ:– ರಾ...ಮ್ಯಾ, ನಿನ್ನ ಸಾರಿ ಕಪ್ಪು ಯಾಕಾಗೇದೋ? ಕಾಡಿಗೆ

ನುಂಗೀಯೇನು ಕೂಳಿಗೆ ತಡಾ ಆತು ಅಂತ!

ರಾಮು:– ಇಲ್ಲಪಾ, ಶಾಮ್ಯಾ ನನ್ನ ಮಾರಿಗೆ ಮಸಿ ಹಚ್ಚಿದ – ನೀ ಹೊರ
ಹೋದಾಗ.

ಶಂಕರಣ್ಣ:– ಇವತ್ತ ನಿನ್ನ ಮಾರಿಗೆ ಹಚ್ಚಿದ. ನಾಳೆ ನನ್ನ ಮಾರಿಗೂ ಹಚ್ಚಾನ

ರಾಮು:– ಅಪ್ಪ, ಅದು ನೋಡು, ಚಪಾತಿಗೆ ಅನ್ನಾ ಬಾಡಿಸಿಕೋತಾನ.

ಶಂಕರಣ್ಣ:– ಅಂವ ಏನಾರೆ ತಿನ್‌ವಲ್ಲನ್ಯಾಕ! ನೀ ಅವನ ಕಡೆ ನೋಡ
ಬ್ಯಾಡ! ಯಾಕೋ ಶ್ಯಾಮ್ಯಾ, ಎದ್ಯಲ್ಲ? ಸ್ನಾನಾಮಾಡಿ ಬರ್ತೀಯೇನು

ಶ್ಯಾಮು:– ಇಲ್ಲ, ಹೊಟ್ಟೆ ತುಂಬಿಲ್ಲ! (ಬಚ್ಚಲಿಗೆ ಹೋಗುತ್ತಾನೆ.)

ರಾಮು:– ಅಪ್ಪಾ, ಅದು ನೋಡು, ಬಕೀಟಿನಾಗs ಮುಸುರೀ ಕೈ ಎದ್ದಿದ!

ಶಂಕರಣ್ಣ:– ಎದ್‌ವಲ್ಲನ್ಯಾಕ! ಅಲ್ಲೇ ಬಚ್ಚಲಿನಾಗs ಶಯನಾ ಹಾಕ್ಯಾನು
ಅವನ್ನ ಎಡಗೈಲೆ ಕರದೊಯ್ದು ಹಾಸಿಗೀಮ್ಯಾಲ ಕೆಡವು.

ರಾಮು:– ಹುಂ, ಕರಕೊಂಡು ಹೋಗ್ತೀನಿ.

ಶಂಕರಣ್ಣ:– ಮತ್ತ ಬಂದನಲ್ಲೊ ಅವ! ಯಾಕೋ ಶ್ಯಾಮ್ಯಾ, ಮತ್ಯಾ
ಎಲೀಮ್ಯಾಲ ಬಂದಿ?

ಶ್ಯಾಮು:– ಹೊಟ್ಟೆ ಹಸ್‌ದsದ, ಊಟಾ ಮಾಡ್ತೀನಿ!

ಶಂಕರಣ್ಣ:– ನಿನ್ನ ಊಟಕ್ಕ ಬೆಂಕೀ ಹಚ್ಚಿತು! ಹೋಗಿ ಬೀಳು, ಸಾಕು
ರಾಮ್ಯಾ, ಅವನ ತಾಟು ಒಯ್ದು ತಲೆಗಿಂಬ್‌ದಸೀಲೆ ಇಡು. ಕೂಳೂ ನಿದ್ದಿ
ಕೂಡೇ ಸಾಗಲಿ ಅವಂದು!

ಶ್ಯಾಮು:– ಇಲ್ಲ, ಎಚ್ಚರಾಗೇದ, ಊಟಾಮಾಡ್ತೀನಿ.

ಶಂಕರಣ್ಣ:– ಹುಂ, ಕುಕ್ಕುರ್ಸು. ನಿಂದು ನಿದ್ದೀನೂ ಅಷ್ಟs, ಎಚ್ಚರಾನು
ಅಷ್ಟs! ಈಕಿ ಇನ್ನೂ ಬಂದಿಲ್ಲ. ನಮ್ಮ ಸಂಸಾರಾನೂ ನಿದ್ದಿಗಣ್ಣಾ
ನಡಧಾಂಗ ನಡದsದ! ಕಾಣದ ಕಡಲ ಹಾದೀ ಹಿಡಿದsದ!

ರಾಮು:– ಅಪ್ಪಾ, ಅವ್ವ ಬಂದ್ಲು.

ಶಂಕರಣ್ಣ:– ಬಂದ್ಯಾ, ಈ ಕುಂಭಕರ್ಣನ್ನ ತಗೊ ನಿನ್ನ ಸ್ವಾಧೀನಕ್ಕ; ನ
ಪಾರಾದೆ! ಇಂಥಾ ರಾಕ್ಷಸ ಮಕ್ಕಳ್ನ ಹಡಿಯೋವ್ರ ಮಾರಿಗೆ ಬೆಂಕಿ
ಹಚ್ಚಿತು!

ಈ ಪುಸ್ತಕಗಳನ್ನು ಓದಿರುವಿರಾ ?

ಅರವಿಂದ ದರ್ಶನ	ಶ್ರೀ ಅರವಿಂದರು	ಉತ್ತಮ ಪ್ರತಿ	೩—೮—೦
		ಕೆಲಿಕೊ ,,	೪—೦—೦
ಭಾರತೀಯ ರಾಜ್ಯಧರ್ಮ	,,		೧—೪—೦
ಮಾತೃವಾಣಿ II	ಶ್ರೀ ಮಾತಾ		೦—೨—೦
ಸಂಸಾರ ಚಿತ್ರ	ಆನಂ[illegible]ದ		೨—೪—೦
ಮಕ್ಕಳ ಬಸವಣ್ಣನವರು	,,		೦—೮—೦
ತಿರುಗಿ ಮನೆಗೆ	ಚಾರು ವಂದ್ಯೋಪಾಧ್ಯಾಯ		೧-೧೦—೦
ನೃತ್ಯಕಾಲಿ	,,		೦—೬—೦
ಮಾತೃಶ್ರೀ	ಸಿ. ಎಂ. ವಿ. ಶರ್ಮ		೧—೪—೦
ಗ್ರೀಕ್ ನಾಟಕ ಕಥೆಗಳು	ಡಿ. ವಿ. ಶೇಷಗಿರಿರಾವ್		೨—೮—೦
ಭಾರತದಿಂದ ತೊಲಗಿರಿ	ಗಾಂಧೀಜಿ		೧—೪—೦
ಮಂಗಲ ಪ್ರಭಾತ	,,		೦-೧೨—೦
ನನ್ನ ಆರಂಭಜೀವನ	,,		೧—೪—೦
ಪರಿತ್ಯಕ್ತೆ	ಗುರುನಾಥ ಜೋಷಿ		೧—೪—೦
ಗರತಿಯ ಹಾಡು	ಹಲಸಂಗಿಯ ಗೆಳೆಯರು		೧—೮—೦
ಆರ್ಯಧರ್ಮ ಪ್ರದೀಪ	ಹೆಚ್. ಚಿದಂಬರಯ್ಯ		೮—೦—೦
ಮಕ್ಕಳ ಮಹಾತ್ಮಾ ಗಾಂಧಿ	ಹೊಯ್ಸಳ ಮತ್ತು ಶರ್ಮ		೦-೧೨—೦
ಎಣ್ಣೆ ತೆಗೆಯುವುದು	ಜಿ. ಪಿ. ಪಟೇಲ್		೦-೧೨—೦
ಕ್ರಾಂತಿಪಥದಲ್ಲಿ	ಜೈಪ್ರಕಾಶ ನಾರಾಯಣ		೩—೮—
ವರ್ಧಾ ಶಿಕ್ಷಣ ಯೋ	ಡಾ. ಝಕೀರ್ ಹುಸೇನ್		೦-೧೨—೦
ಸಂಪಿಗೆ	ಕುಲಕರ್ಣಿ ಶ್ರೀನಿವಾಸ		೦-೧೦—೦
ಸಾಹಿತ್ಯದ ಹಿನ್ನೆಲೆ	ಕೆ. ವೆಂಕಟರಾಯಾಚಾರ್ಯ		೧—೮—೦
ಗಾಂಧೀ ವಿಚಾರದೋಹನ	ಕೆ. ಜಿ. ಮಶ್ರುವಾಲಾ		೩—೦—೦
ಬಾಳಿನ ಗಿಡ	ದಿ. ಎಂ. ಹರಿದಾಸರಾಯರು		೨—೮—೦
ಕೈಹಿಡಿದ ಕಾವೇರಿ	,,		೨—೪—೦
ಹಸಿದ ಹಂಬಲ	,,		೧—೮—೦
ಹುಚ್ಚರ ಮನೆ	,,		೧—೮—೦
ಧಾರವಾಡದ ಹುಡುಗಿ	,,		೧—೮—೦
ಭಾರತೀಯ ಕಥೆಗಳು	,,		೧—೦—೦
ಎಚ್ಚತ್ತ ಆಗ್ನೇಯ ಏಶಿಯಾ	,,		೧—೮—೦
ಮರುಭೂಮಿಯ ಅರಬರು	,,		೧—೮—೦

ಳು

* ಂಬರಿ

ನಂಬರಿ

*

*

ಕ

* ಯುವುದಿಲ್ಲ.